"ನವ ಸಾಕ್ಷರ ವ

ಮಾಸ್ಟರ್ ಆಫ್ ಫಿಲಾಸಫಿ (ಎಂ. ಫಿಲ್) ಪದ
ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು :
ಗುರುನಾಥ. ಯ. ಹೂಗಾರ

ಮಾರ್ಗದರ್ಶಕರು :
ಡಾ. ಕೆ. ವಿ. ನಾರಾಯಣ
ಮುಖ್ಯಸ್ಥರು
ಕನ್ನಡ ಭಾಷಾ ಅಭಿವೃದ್ಧಿ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ

ಕನ್ನಡ ಭಾಷಾ ಅಭಿವೃದ್ಧಿ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ
ಕಮಲಾಪುರ - ೫೮೩೨೭೬

೧೯೯೪

"ನವ ಸಾಕ್ಷರ ಮಾಲೆಯ ಪತ್ರಗಳ ಸಂವಹನ : ತೊಡಕುಗಳು"

(ಕ್ಷೇತ್ರಾಧ್ಯಯನ)

ಮಾಸ್ಟರ್ ಆಫ್ ಫಿಲಾಸಫಿ (ಎಂ. ಫಿಲ್) ಪದವಿಯ
ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು :
ಗುರುನಾಥ. ಯ. ಹೂಗಾರ

ಮಾರ್ಗದರ್ಶಕರು :
ಡಾ. ಕೆ. ವಿ. ನಾರಾಯಣ
ಮುಖ್ಯಸ್ಥರು
ಕನ್ನಡ ಭಾಷಾ ಅಭಿವೃದ್ಧಿ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ

ಕನ್ನಡ ಭಾಷಾ ಅಭಿವೃದ್ಧಿ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ
ಕಮಲಾಪುರ - ೫೮೩ ೨೭೧

೧೯೯೪

:: ದೃಢೀಕರಣ ಪತ್ರ ::

1993 – 94 ನೇ ಸಾಲಿನ ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಶ್ರೀ ಗುರುನಾಥ.ಯು. ಹೂಗಾರ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ

'' ನವಸಾಕ್ಷರ ಮಾಲಿಯ ಪತ್ರಿಕೆಗಳ ಸಂವಹನ : ತೊಡಕುಗಳು ''
(ಕ್ಷೇತ್ರಾಧ್ಯಯನ)

ಎಂಬ ಪ್ರೌಢ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಳಿಗಾಗಿ ಬಳಸಿಕೊಂಡಿಲ್ಲ ವೆಂದು ದೃಢೀಕರಿಸುತ್ತೇನೆ.

ಸ್ಥಳ :– ವಿದ್ಯಾರಣ್ಯ.

ದಿನಾಂಕ:– 6.05.94

(ಡಾ. ಕೆ.ವಿ. ನಾರಾಯಣ)
ಮುಖ್ಯಸ್ಥರು,
ಕನ್ನಡ ಭಾಷಾ ಅಭಿವೃದ್ಧಿ ವಿಭಾಗ,
ಕನ್ನಡ ವಿಶ್ವವಿದ್ಯಾಲಯ,
ಹಂಪಿ.

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನಾರ್ಥಿಯಾಗಲು ಅವಕಾಶ ನೀಡಿದ ಕುಲಪತಿಗಳಾದ ಡಾ: ಚಂದ್ರಶೇಖರ ಕಂಬಾರ, ಹಾಗೂ ಕುಲಸಚಿವರಾದ ಡಾ: ಕೆ.ವಿ.ನಾರಾಯಣ ಅವರಿಗೆ,

ಭಾಷಾ ಶಾಸ್ತ್ರ ಅಧ್ಯಯನದ ಆಧುನಿಕ ನೆಲೆಯ ವಿಚಾರಗಳನ್ನು ನನ್ನಲ್ಲಿ ಬಿತ್ತಿ, ಪ್ರೋತ್ಸಾಹಿಸಿದ ಮಾರ್ಗದರ್ಶಿ, ಗುರುಗಳಾದ ಡಾ: ಕೆ.ವಿ.ನಾರಾಯಣ ಅವರಿಗೆ,

ಎಂ.ಫಿಲ್. ತರಗತಿಯಲ್ಲಿ ಅಧ್ಯಯನದ ವಿಧಿ ವಿಧಾನಗಳನ್ನು ಬೋಧಿಸಿದ ಗುರುಗಳಾದ ಓ.ಎಲ್.ನಾಗಭೂಷಣಸ್ವಾಮಿ, ಎಚ್.ಎಸ್.ರಾಘವೇಂದ್ರರಾವ್, ಕಿ.ರಂ.ನಾಗರಾಜ ಅವರುಗಳಿಗೆ, ತುಂಬಾ ವಾತ್ಸಲ್ಯದಿಂದ ಕ್ಷೇತ್ರ ಕಾರ್ಯದ ಪ್ರಶ್ನಾವಳಿ ರಚನೆಗೆ ವ್ಯವಸ್ಥಿತ ರೂಪ ಕೊಡುವಲ್ಲಿ, ಹಾಗೂ ಇನ್ನುಳಿದ ಮಾಹಿತಿಯನ್ನು ಒದಗಿಸುವಲ್ಲಿ ಸಹಕರಿಸಿದ ಡಾ: ಶ್ರೀಮತಿ ಅವರಿಗೆ,

'' ವಾಕ್ಯಸಂಗದ ನಡೆ '' ಯನ್ನು ಅಕ್ಕರೆಯಿಂದ ವಿಚಾರಿಸುತ್ತಾ, ಕ್ಷೇತ್ರ ಕಾರ್ಯದ ಅಗತ್ಯ ಅನುಭವವನ್ನು ಹಂಚಿ ಕೊಂಡಿರುವ ಗುರುಗಳಾದ ಶ್ರೀ ಲಕ್ಷ್ಮಣ ತೆಲಗಾವಿ ಹಾಗೂ ಪರೋಕ್ಷವಾಗಿ ನೆರವಾದ ಎಲ್ಲ ಗುರು ವೃಂದಕ್ಕೆ ಅಗತ್ಯವಿದ್ದ ಆಕರ ಪಠ್ಯಗಳನ್ನು ಒದಗಿಸಿ ಸಹಕರಿಸಿದ, ಮುಖ್ಯ ಗ್ರಂಥಪಾಲಕರಾದ ಶ್ರೀ ಧನ್ಯಕುಮಾರ ಬಿಣಜಿಗಿ, ಉಳಿದ ಗ್ರಂಥಾಲಯ ಸಿಬ್ಬಂದಿ, ಸುಹಾನ, ಮತ್ತು ಮಲ್ಲಿಕಾರ್ಜುನಶಂಕರ, ಅವರಿಗೆ,

ಸಾಂದರ್ಭಿಕವಾಗಿ ಪುಸ್ತಕ ಹಾಗೂ ಸಲಹೆಗಳನ್ನಿತ್ತ ಹಿರಿಯ ಸ್ನೇಹಿತರಾದ ಗಣೇಶ, ಗೋವಿಂದರಾಜ, ಸುಜ್ಞಾನಮೂರ್ತಿ, ಅಶೋಕಕುಮಾರ, ಅಂಗಡಿ, ಪಾಂಡುರಂಗಬಾಬು ಅವರಿಗೆ,

ನವಸಾಕ್ಷರ ಮಾಲೆಯ ಪಠ್ಯಗಳನ್ನು ಸಕಾಲಕ್ಕೆ ಓದಲು ಪೂರೈಸಿ ಹಾಗೂ ಕ್ಷೇತ್ರ ಕಾರ್ಯ ಸಾಮಗ್ರಿಗಳನ್ನು ಒದಗಿಸಿ ಅನುಕೂಲವಾದ ಡಾ: ಪುರುಷೋತ್ತಮ ಬಿಳಿಮಲೆ ಹಾಗೂ ಸಹ [illegible]ಳಗೆಲ್ಲಕ್ಕೂ, ಅಧ್ಯಯನದ ಅವಧಿಯಲ್ಲಿ ಆಶ್ರಯ ಪ್ರಸಾದ ಒದಗಿಸಿ, ಆತ್ಮೀಯವಾಗಿ — ಆಶೀರ್ವದಿಸುತ್ತಾ ಬಂದಿರುವ ಶ್ರೀ ಮ.ನಿ.ಪ್ರ.ಜ. ಸಂಗನಬಸವ ಮಹಾಸ್ವಾಮಿಗಳು, ಕೊಟ್ಟೂರು, ಸ್ವಾಮಿಮಠ ಹೊಸಪೇಟೆ ಹಾಗೂ ಅಭಿನವ ಕುಮಾರಸ್ವಾಮಿಗಳು, ಸವದತ್ತಿ, ಶ್ರೀಸಿದ್ಧವೀರಸ್ವಾಮಿಗಳು [illegible]ವಲಗುಂದ ಅವರಿಗೆ,

ಪರಸ್ಪರ ಸಹಕರಿಸಿದ ಸಹ ವಂದಿಗ ಅಧ್ಯಯನಾರ್ಥಿಗಳಾದ, ಶ್ರೀ ಬಸವರಾಜಯ್ಯ, ಸೋಮಶೇಖರ, ಕಿಶೋರಕುಮರ, ರೇಣುಕಾ ಪ್ರಸಾದ, ನಾರಾಯಣ.ಡಿ.ಎಸ್. ಅವರಿಗೆ,

ಕ್ಷೇತ್ರಾಧ್ಯಯನದಿಂದ ಸಂಗ್ರಹಿಸಿದ ದತ್ತವನ್ನು ಕಂಪ್ಯೂಟರೀಕರಣಗೊಳಿಸಿ ಸ್ಪಷ್ಟವಾಗಿ (ದತ್ತಾಖಲೆಗಳು) ದತ್ತಾಕೃತಿಗಳನ್ನು ತೆಗೆದು ಕೊಟ್ಟು ಸಹಕರಿಸಿದ ಶ್ರೀ ರಾಜಶೇಖರ' ಅವರಿಗೆ,

ಕ್ಷೇತ್ರಾಧ್ಯಯನದಂಥ ಪ್ರಯೋಗಿಕ ರಂಗಕ್ಕೆ ಇಳಿದಾಗ ವ್ಯಾಪಕವಾದ ಕ್ಷೇತ್ರಕಾರ್ಯ-ದುದ್ದಕ್ಕೂ ನನ್ನೊಂದಿಗೆ ನೇರವಾಗಿ, ಪರೋಕ್ಷವಾಗಿ ಇದ್ದು ಸಹಾಯ ನೀಡಿ ಸಹಕರಿಸಿದ ಧಾರವಾಡ ಜಿಲ್ಲಾ ಸಾಕ್ಷರತಾ ಸಮಿತಿಯ ಬಳಗ ಕ್ಕೆಲ್ಲ ಕ್ಕೂ, ಹಾಗೂ ಎಲ್ಲ 9 ನಗರಗಳ ತಹಶೀಲ್ದಾರರು ನಗರಸಭೆಯ ಮುಖ್ಯಾಧಿಕಾರಿಗಳು, ನಗರ ಹಾಗೂ ಗ್ರಾಮೀಣ ಸಂಯೋಜಕ, ಸಂಯೋಜಕಿಯರು (ಪ್ರಾಥಮಿಕ ಶಾಲಾ ಶಿಕ್ಷಕ-ಶಿಕ್ಷಕಿ) ಮಂಡಲ ಸಂಚಾಲಕರು, ನೋಡಲ್ ಆಫೀಸರ್ಸ್, ಸ್ವಯಂಸೇವಕ ಸೇವಕಿಯರಿಗೆ,

ನೇರ ಸಂದರ್ಶನದಲ್ಲಿ ಭಾಗಿಗಳಾದ ಎಲ್ಲ ಪುರುಷ ಹಾಗೂ ಸ್ತ್ರೀ ನವಸಾಕ್ಷರರು, ಮುಂಗಾರು ಅತಿವೃಷ್ಟಿ ಸಂದರ್ಭದಲ್ಲೂ, ಆಸಕ್ತಿ ಕುತೂಹಲದಿಂದ ಪ್ರತಿಕ್ರಿಯಿಸುತ್ತಾ, ಕ್ಷೇತ್ರ ಅಧ್ಯಯನ ಮನಸ್ಸಿಗೆ ತೃಪ್ತಿ ಸಂತೋಷ ತರುವಲ್ಲಿ ಕಾರಣರಾದ ಎಲ್ಲ ವಯಸ್ಕ ನವ ಓದುಗರಿಗೆ,

ಅಧ್ಯಯನ ಕೈಕೊಂಡ ದಿನದಿಂದ ಪ್ರಾರಂಭಿಕ ಪ್ರೇರಕರಾಗಿ, ಆತ್ಮೀಯತೆಯಿಂದ ಕ್ಷೇತ್ರದ ಆಯ್ಕೆಗೆ ಸಂಬಂಧಿಸಿದ ಇತರೆ ಮಾಹಿತಿ ಸಂಗ್ರಹಿಸಿ ಪೂರೈಸಿ ಸಹಾಯ ಹಸ್ತ ಬಂಧುಗಳಾದ ಪ್ರೊ: ಎಂ.ಜಿ.ಪೂಜಾರ, ಧಾರವಾಡ ಅವರಿಗೆ,

ಕ್ಷೇತ್ರಾಧ್ಯಯನದ ನನ್ನ ಕಾರ್ಯದಲ್ಲಿ ಸಾಂದರ್ಭಿಕವಾಗಿ, ಸಹಕರಿಸಿದ ನನ್ನ ವಿದ್ಯಾರ್ಥಿ ಸ್ನೇಹಿಗಳಾದ ಶ್ರೀ ಲಕ್ಷ್ಮಣಗೌಡ್ರ, ನಾಗರಾಜ ದೇಶಳ್ಳಿ, ಎಂ.ಎಸ್.ಭರಮಗೌಡ್ರ, ಈಶ್ವರಯ್ಯ ಹಿರೇಮಠ, ಹಾಗೂ ಇನ್ನುಳಿದ ಸಹ ಮಿತ್ರರೆಲ್ಲರಿಗೂ,

ಕ್ಷೇತ್ರ ಕಾರ್ಯದಿಂದ ಸಂಗ್ರಹಿಸಿದ ವ್ಯಾಪಕವಾದ ದತ್ತಾಂಶದ ಸಂಖ್ಯಾ-ವಿವರದ ಕ್ರೋಢೀಕರಣ ಸಂದರ್ಭದಲ್ಲಿ ತಾಳ್ಮೆಯಿಂದ ಸಹಕರಿಸಿದ ಮಠದ ವಿದ್ಯಾರ್ಥಿಗಳಾದ ಗುರುಸಿದ್ದಯ್ಯ, ರೇವಣಸಿದ್ದಯ್ಯ, ಮಲ್ಲಿಕಾರ್ಜುನ, ಶ್ರೀಶೈಲ ಇನ್ನುಳಿದ ಕಿರಿಯ ಬಳಗೆಲ್ಲಕ್ಕೂ,

ಬೆರಳಚ್ಚಿನ ಪ್ರತಿಗಳನ್ನು ವಾಚಿಸಿ ತಿದ್ದುವ ಹಾಗೂ ಪೂರಕ ಕಾರ್ಯದಲ್ಲಿ ಸಹಕರಿಸಿದ ಬಸವನಗೌಡ, ಬಸವರಾಜ, ವೀರಯ್ಯ, ಗಿರಿಗೌಡ, ಹಾಗೂ ಇನ್ನುಳಿದ ಅಧ್ಯಯನದ ಸಂದರ್ಭದಲ್ಲಿ ಸಹಕಾರ ನೀಡಿದ ಜಂಬಯ್ಯ, ಶಿವ್ಪೇಸ್ವಾಮಿ ಎಲ್ಲ ಬಳಗಕ್ಕೂ,

:: ವಿಷಯ ಬಂಧ ::

1

ಪ್ರಾಸ್ತಾವಿಕ ಭಾಗ

ಅಧ್ಯಯನ : ಹಿನ್ನೆಲೆ, ಉದ್ದೇಶ, ಸ್ವರೂಪ, ವ್ಯಾಪ್ತಿ.

1. [illegible] :

ಅಧ್ಯಯನ: ಉದ್ದೇಶ, ಸ್ವರೂಪ ಹಾಗೂ ವ್ಯಾಪ್ತಿ.

:: ಹಿನ್ನೆಲೆ ::

ಒಂದು ಕಾಲಕ್ಕೆ ಕೇವಲ ಕೆಲವರಿಗೆ ಮಾತ್ರ ಮೀಸಲಾಗಿದ್ದ ಶಿಕ್ಷಣ ಇಂದು 'ಎಲ್ಲರ ಸ್ವತ್ತು' ಎಂಬ ಭಾವನೆ ಬೆಳೆದಿದೆ ಬೆಳೆಯುತ್ತಿದೆ. ವಿಶ್ವ ಸಂಸ್ಥೆಯ 26ನೇ ಪ್ರಣಾಳಿಕೆಯ ಪ್ರಕಾರ ಓದು ಬರಹ ಕಲಿಯುವುದು ಪ್ರತಿಯೊಬ್ಬನ ಆಜನ್ಮಸಿದ್ಧ ಹಕ್ಕು'' ಭಾರತ ಸರಕಾರದ ವಿದ್ಯಾಮಂತ್ರಿಗಳಾಗಿದ್ದ ಡಾ.ವಿ.ಕೆ. ಆರ್.ವಿ.ರಾವ್ ಭಾರತದ ರಾಜ್ಯಾಂಗದಲ್ಲಿ ಈ ಅಂಶವನ್ನು ಅಳವಡಿಸಬೇಕೆಂದು ಅಭಿಪ್ರಾಯಪಟ್ಟಿದ್ದು ಮೇಲಿನ ಸಂಗತಿಯನ್ನು ಬಲಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ಎಳೆಯ ವಯಸ್ಸಿನಲ್ಲಿ ಯಾವುದೇ ಔಪಚಾರಿಕ ಶಿಕ್ಷಣ ಪಡೆಯಲಾರದ ವಯಸ್ಕರು ಸಹ ಓದುಬರಹ ಕಲಿತು, ರೂಢಿಸಿಕೊಂಡು ಸುಶಿಕ್ಷಿತರಾಗಲು ಸರಕಾರ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳು ಅವಕಾಶ ಕಲ್ಪಿಸುತ್ತಿವೆ. ಈ ಶತಮಾನದಂತ್ಯಕ್ಕೆ ಇನ್ನು ಕೇವಲ 6 ವರ್ಷ ಮಾತ್ರ ಬಾಕಿ ಇದೆ. ಅಷ್ಟರಲ್ಲಿ 'ಸರ್ವರಿಗೂ ಶಿಕ್ಷಣ' ಸಾಧಿಸಬೇಕೆಂಬ ಹಂಬಲ, ಪ್ರಪಂಚದ ಶೇ 70 ರಷ್ಟು ಅನಕ್ಷರತೆಯನ್ನು ಹೊಂದಿರುವ 9 ಅಭಿವೃದ್ಧಿ ಶೀಲ ದೇಶಗಳದ್ದು. ಈ 9 ರಾಷ್ಟ್ರಗಳಲ್ಲಿ ಭಾರತಕ್ಕೆ ಮೊದಲ ಸ್ಥಾನ. ಪ್ರಪಂಚದ ಶೇ 28 ರಷ್ಟು ಅನಕ್ಷರತೆ ಇರುವುದು ಇಲ್ಲಿ. ನಮ್ಮ ದೇಶ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಪ್ರಥಮ ಪಂಕ್ತಿಗೆ ಸೇರಿದ್ದು 'ಅನಕ್ಷರತೆ' ಇದರೊಂದಿಗಿರುವ ಬಡತನ, ನಿರುದ್ಯೋಗ, ಅಜ್ಞಾನ ಅಸಮಾನತೆ, ಮೂಢ ನಂಬಿಕೆಗೆ ಇದು ಪೂರಕ. ಪ್ರಜಾ ಸರಕಾರ ರೂಪಿಸುವ ಎಲ್ಲಾ ಅಭಿವೃದ್ಧಿ ಯೋಜನೆಗಳ ವೈಫಲ್ಯಕ್ಕೆ ಸಹಾಯಕ. ಶೋಷಣೆ, ದಬ್ಬಾಳಿಕೆಗಳಿಗೆ ದಾರಿ. ಇದು ರಾಷ್ಟ್ರಾಭಿವೃದ್ಧಿಗೂ ಮಾರಕ. ಇದರ ನಿರ್ಮೂಲನಕ್ಕೆ ಹಲವು ಪ್ರಯತ್ನಗಳಲ್ಲೊಂದು 'ಸಾಕ್ಷರತಾ ಆಂದೋಲನ'. ಯುನೆಸ್ಕೋ:- ಅನಕ್ಷರಸ್ಥ ವ್ಯಕ್ತಿ ತನ್ನ ದೈನಂದಿನ ಬದುಕಿಗೆ ಅಗತ್ಯವಾದ ಸಂಕ್ಷಿಪ್ತ ಓದು- ಬರಹ ಕಲಿಯುವುದೇ ಸಾಕ್ಷರತೆ ಎಂದು ಹೇಳುತ್ತದೆ. ಮೂಲಭೂತವಾಗಿ 'ಸಾಕ್ಷರತೆ' ಎಂದರೆ :- ಓದು ಬರಹ ಲೆಕ್ಕಾಚಾರದಲ್ಲಿ ಸಾಮರ್ಥ್ಯವನ್ನು ಪಡೆಯುವುದು. ಆ ಮೇಲೆ ನೆರವು ಮಾಡಿ ಕ್ರಿಯಾಶೀಲತೆಯನ್ನು ಹೆಚ್ಚಿಸಿಕೊಳ್ಳುವುದು. ಜೀವನಮಟ್ಟ ಸುಧಾರಿಸಿ ದೇಶದ ಅಭಿವೃದ್ಧಿಗೆ ಸಹಾಯವಾಗಬೇಕು. ಇದೇ 'ಕ್ರಿಯಾಶೀಲ ಸಾಕ್ಷರತೆ' ಇದನ್ನು ಸಾಕಾರಗೊಳಿಸಲು ಸರ್ವರೂ ಐಚ್ಛಿಕ ಹಾಗೂ ಸಾಮೂಹಿಕವಾಗಿ, ಸ್ವಯಂ ಸೇವಾ ಮನೋಭಾವದಿಂದ ಈ ಸಾಕ್ಷರತಾ ಜನಾಂದೋಲನಗಳ ಮೂಲಕ ಜಾರಿಗೊಳಿಸಲಾಗುತ್ತಿದೆ.

ಸಾಕ್ಷರತಾ ಆಂದೋಲನದ ಕಲಿಕೆ 3 ಹಂತಗಳಿಂದ ಕೂಡಿದೆ. ಮೂಲ ಸಾಕ್ಷರತಾ ಹಂತ, 'ಸಾಕ್ಷರೋತ್ತರ ಹಂತ,' ಮತ್ತು ಮುಂದುವರಿಕೆಯ ಶಿಕ್ಷಣ (ನಿರಂತರ ಕಲಿಕೆ), ಮೂಲ ಸಾಕ್ಷರತೆಯಲ್ಲಿ ಮೂರು ಪಠ್ಯ ಪುಸ್ತಕಗಳಿದ್ದು, ಸುಮಾರು 6 ತಿಂಗಳ ಅವಧಿಯಲ್ಲಿ 200 ಘಂಟೆಗಳಲ್ಲಿ ಇವುಗಳನ್ನು ಕಲಿಸುವದಾಗಿದೆ: ಓದು, ಬರಹ, ಲೆಕ್ಕಾಚಾರ ಕಲಿಕೆ ಈ ಹಂತದಲ್ಲಿ, ಆಗಿ, ನಂತರ 'ಸಾಕ್ಷರೋತ್ತರ ಕಾರ್ಯಕ್ರಮ' 3 – 4 ತಿಂಗಳ ಅವಧಿಯ 40 ಘಂಟೆಗಳಲ್ಲಿ ನಡೆಯುತ್ತದೆ. ಇಲ್ಲಿ ಒಂದು ಪಠ್ಯ ಪುಸ್ತಕ, ಪೂರಕ ಸಾಹಿತ್ಯ, ವೃತ್ತ ಪತ್ರಿಕೆಗಳು, ನಿಯತಕಾಲಿಕೆಗಳು '<u>ನವಸಾಕ್ಷರ</u> <u>ಪುಸ್ತಕಗಳು</u>' ಲಭ್ಯವಿರುತ್ತವೆ. ನವ ಸಾಕ್ಷರರು ಓದು ಮುಂದುವರಿಸಲು ಜನ ಶಿಕ್ಷಣ ನಿಲಯಗಳ ಲಾಭ ಪಡೆಯಬಹುದು. ಹಾಗೂ ಗ್ರಂಥಾಲಯದ ಮಾದರಿಯಲ್ಲಿ ಹಳ್ಳಿಗೊಂದು 'ಬಾಳ ಬೆಳಕ ಕೇಂದ್ರ' ರೂಪುಗೊಳ್ಳುತ್ತಿವೆ. (ಕರ್ನಾಟಕದಲ್ಲಿ ಸದ್ಯ 1500 ಜನ ಶಿಕ್ಷಣ ನಿಲಯಗಳಿವೆ).

ಸಾಕ್ಷರತಾ ಆಂದೋಲನದ ವ್ಯಾಪ್ತಿಗೆ ಬರುವವರು 15 – 35 ವಯೋಮಿತಿಯ ಅನಕ್ಷರಸ್ಥ ವಯಸ್ಕ ಜನರು ಕಲಿಕಾ ಕೇಂದ್ರಗಳಲ್ಲಿ ರೂಢಿಸಿಕೊಂಡ ಓದು ಬರಹ ವನ್ನು ಉಳಿಸಿ ಬೆಳೆಸಿ ಮುಂದುವರಿಸಿಕೊಂಡು ಹೋಗುವಲ್ಲಿ ಪೂರಕವಾಗುವ ಹಾಗೂ ನಡುವೆ ಶಾಲಾ ಶಿಕ್ಷಣ ನಿಲ್ಲಿಸಿ ಔಪಚಾರಿಕ ಶಿಕ್ಷಣ ಮುಂದುವರಿಸದಿದ್ದವರಿಗೂ, ಸೂಕ್ತ ಹಾಗೂ ಆಸಕ್ತಿದಾಯಕ ಸಾಹಿತ್ಯದ ಅವಶ್ಯಕತೆಯನ್ನು ಕಂಡುಕೊಂಡ 'ಕರ್ನಾಟಕ ಸರಕಾರದ ಲೋಕ ಶಿಕ್ಷಣ ಇಲಾಖೆಯು' ತನ್ನಲ್ಲಿಯ ಸಾಕ್ಷರೋತ್ತರ ಯೋಜನೆಯನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟದ್ದನ್ನು, ಕ.ವಿ.ವಿ.ಯು ಆದರದಿಂದ ಸ್ವೀಕರಿಸಿ, ನಾಡಿನ ವಿಷಯತಜ್ಞರ ಭಾಷಾ ವಿಜ್ಞಾನಿಗಳ ಹಾಗೂ ಶಿಕ್ಷಣ ಮಿತ್ರರನ್ನು ಒಳಗೊಂಡು ಉನ್ನತ ಸಲಹಾ ಸಮಿತಿಯ ಮಾರ್ಗದರ್ಶನದ ಹಿನ್ನೆಲೆಯಲ್ಲಿ ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟದ ಕುರಿತು, ಅನೇಕ ಸಾರಿ ಚರ್ಚಿಸಿ, ಪಠ್ಯ ರಚನೆಯ ಪೂರ್ವದಲ್ಲಿ ರಾಜ್ಯಾದ್ಯಂತ (ಸಾಕ್ಷರತಾ ಆಂದೋಲನ ನಡೆದ) ಆಯ್ದ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಕ್ಷೇತ್ರಕಾರ್ಯದ ಮೂಲಕ ಭಾವಿ ಹಾಗೂ ಹಾಲಿ ಓದುಗರಿಂದ ಅಪೇಕ್ಷಿತ ಸಾಹಿತ್ಯದ ಕುರಿತು ಅಭಿಪ್ರಾಯಗಳನ್ನು ಸಂಗ್ರಹಿಸಿ, ಸಮರ್ಪಕ ಮಾರ್ಗದರ್ಶನದ ಹಿನ್ನೆಲೆಯಲ್ಲಿ ಅಧಿಕೃತ ಆಕರ ಗ್ರಂಥಗಳನ್ನು ಅವಲೋಕಿಸಿ, ನಂಬಲು ಅರ್ಹವಾದ ಮಾಹಿತಿ ಸಂಗ್ರಹಿಸಿ, ಕರಡು ಪ್ರತಿಗಳನ್ನು ತಯಾರಿಸಿ ಭಾವಿ ಓದುಗರ ಹತ್ತಿರ ಹೋಗಿ, ಪಠಿಸಿ ಸೂಕ್ತ ಪರಿಷ್ಕಾರ ತಿದ್ದುಪಡಿಯೊಂದಿಗೆ ಅಂತಿಮ ರೂಪ ಪಡೆದು, ಪಠ್ಯ ರಚನಾ ವಿಭಾಗದಿಂದ ಪ್ರಥಮ ಕೊಡುಗೆಯಾಗಿ

(ಚೊಚ್ಚಲ ಮಗು) ವೈವಿಧ್ಯಮಯವಾದ ವಿಷಯ ವಸ್ತು, ಮನಾಕರ್ಷಣೀಯ ವರ್ಣಗಳಿಂದಾ ಲಂಕೃತವಾಗಿ 110 ಶೀರ್ಷಿಕೆಗಳಲ್ಲಿ ಪ್ರಕಟಗೊಂಡ ಕಿರು ಹೊತ್ತಿಗೆಗಳೇ 'ನವಸಾಕ್ಷರ ಮಾಲೆಯ ಪಠ್ಯಗಳು' ಇವುಗಳ ಪ್ರಧಾನ ಉದ್ದೇಶ. ನವಸಾಕ್ಷರರು ಕಲಿಕಾ ಹಂತದಲ್ಲಿ ರೂಢಿಸಿಕೊಂಡ ಓದು ಬರಹ ಮರೆಯದೇ, ಉಳಿಸಿ ಬೆಳೆಸಿಕೊಂಡು ಕಲಿಕೆಯ ಮುಂದುವರಿಕೆಗೆ ಸಹಾಯವಾಗುವುದು. ಈ ಉದ್ದೇಶಗಳ ಸಾಧನೆಯಲ್ಲಿ ಪ್ರಧಾನ ಪಾತ್ರ ವಹಿಸುವುದು ಪಠ್ಯಗಳ 'ನಿರೂಪಿತ ಭಾಷೆ' ನವಸಾಕ್ಷರರ 'ಓದು ಬರಹ ಸ್ಥಿತಿ' ಗೆ ಪೂರಕವಾಗಿ ಸಂವಹನವಾಗುತ್ತದೆಯೇ ? ಇಲ್ಲ ನವಸಾಕ್ಷರರು ಎದುರಿಸುವ (ವಾಚನ ಗ್ರಹಣ) ಸಂವಹನ: ತೊಡಕುಗಳು ಯಾವುವು ? ಎಂಬುದನ್ನು ಕ್ಷೇತ್ರ ಕಾರ್ಯ ದ ಮೂಲಕ ಮಾಹಿತಿ ಕಲೆ ಹಾಕಿ, ಅದರ ಆಧಾರದಿಂದ, "ಗುರುತಿಸಿ", ಪರಿಷ್ಕಾರ ಸಾಧ್ಯ ಸಲಹೆಗಳನ್ನು ಕಂಡುಕೊಳ್ಳುವುದು, ಪ್ರಸ್ತುತ ಅಧ್ಯಯನದ ಉದ್ದೇಶವಾದರೂ, ಆಂಶಿಕ ಅವಶ್ಯಕತೆಗಾಗಿರುವ ಈ ಅಧ್ಯಯನದ ಮುಖೇನ ಕನ್ನಡದ ಸಂದರ್ಭದಲ್ಲಿ 'ಭಾಷಾ ಶಿಕ್ಷಣ' ದ (Language Methodology) ಹಿನ್ನೆಲೆಯಲ್ಲಿ 'ಭಾಷಾ ಸಾಮರ್ಥ್ಯಗಳನ್ನು (ವಾಚನ, ಗ್ರಹಣ) ಅನೇಕ ಭಾಷಾ ಪರೀಕ್ಷಣ ವಿಧಾನಗಳ ಮೂಲಕ (ಪಾಶ್ಚಾತ್ಯರಲ್ಲಿ ನಡೆದ ಅಧ್ಯಯನಗಳ ಸ್ವರೂಪದಲ್ಲಿ) ಪ್ರಾಥಮಿಕ ಹಂತ ಹಾಗೂ ಪದವಿ ಶಿಕ್ಷಣ ಹಂತಕ್ಕೆ 'ಮಧ್ಯವರ್ತಿ' ಸ್ವರೂಪದಲ್ಲಿ (Transition period) ದಲ್ಲಿರುವ ಪ್ರೌಢ ಶಿಕ್ಷಣ ಹಂತಕ್ಕೆ (8–10) ಅನ್ವಯಿಸಿ, 'ಪ್ರಾಯೋಗಿಕ' ವಾಗಿ 'ಸಂಬಂಧ' ಕಂಡುಕೊಳ್ಳುವ ಆಸಕ್ತಿ ಪ್ರಸ್ತುತ ಅಧ್ಯಯನದ ಹಿನ್ನೆಲೆಯ ವಿಸ್ತೃತ ಆಶಯವಾಗಿದೆ.

1.2 ಅಧ್ಯಯನದ ಸ್ವರೂಪ ಹಾಗೂ ವ್ಯಾಪ್ತಿ :

ಪ್ರಸ್ತುತ ಅಧ್ಯಯನ ಹೆಚ್ಚಿನ ಪ್ರಮಾಣದಲ್ಲಿ ಕ್ಷೇತ್ರ ಕಾರ್ಯಾಧಾರಿತ ವಾಗಿರುವದರ ಹಿನ್ನೆಲೆಯಲ್ಲಿ, ಪ್ರಮುಖವಾ।। 3 ಭಾಗಗಳಲ್ಲಿ (ಹಾಗೂ ಸಮಾರೋಪ) ನಿರೂಪಿತವಾಗಿದೆ.

1. ಪ್ರಾಸ್ತಾವಿಕ ಭಾಗ:

ಸ್ವರೂಪ ಹಾಗೂ ವ್ಯಾಪ್ತಿ.

ಕ್ಷೇತ್ರ ಕಾರ್ಯದ ಪೂರ್ವ.

(ಅ) ಪ್ರತಿದರ್ಶಜ ಪಠ್ಯಗಳ ಆಯ್ಕೆ.

(ಬ) ಪ್ರಶ್ನಾವಳಿ ರೂಪಣ.

(ಕ) ಕ್ಷೇತ್ರದ ಆಯ್ಕೆ.

ಕ್ಷೇತ್ರ ಕಾರ್ಯ — ಪ್ರಕ್ರಿಯೆ.

(ಅ) ಸಾಮಗ್ರಿ ಸಂಕಲನದ ವಿಧಾನ.
ನೇರ ಸಂದರ್ಶನ.

2. ಕ್ಷೇತ್ರದ 'ಫಲಿತ' ಭಾಗ.

ದತ್ತ ಮಾಹಿತಿಯ ಸಂಯೋಜನೆ, ಕ್ರೋಢೀಕರಣ,
ಕಂಪ್ಯೂಟರೀಕರಣ — ದತ್ತಾಭಿಲೇಖಗಳು
ವಿಶ್ಲೇಷಣೆ — ಕ್ರಮ.

3. 'ಸೈದ್ಧಾಂತಿಕ' ವಿಚಾರ'ಗಳ ಭಾಗ.

ಸಂವಹನ :— ಸ್ವರೂಪ 'ಮಾದರಿಗಳ ವೈಚಾರಿಕ ಮುಖ್ಯಾಂಶಗಳು
ಭಾಷೆಯೊಡನೆ ಸಂಬಂಧ.

ವಾಚನ — ಗ್ರಹಣ ಸಾಮರ್ಥ್ಯಗಳು.
ಸ್ವರೂಪ, ಸಂಬಂಧ,
ಸಂವಹನ ಪ್ರಕ್ರಿಯೆಯಲ್ಲಿ ಇವುಗಳ ಪಾತ್ರ.
ಪಠ್ಯ ನಿರೂಪಣೆಯಲ್ಲಿ ಅರ್ಥ ಘಟಕಗಳು.

ಶಬ್ದ ಬಂಧಾರದ ಮಹತ್ವ.

ವಾಚನ — ಗ್ರಹಣ: ಸಾಮಾನ್ಯ ತೊಡಕುಗಳು
ನಿವಾರಣೆಗೆ ಸಾಧ್ಯ ಸಲಹೆಗಳು.

ಭಾಷಾ ಪರಿಕ್ಷಣವಾಗ — 'ಬಹು ಅಂಶಗಳ ಆಯ್ಕೆ'

4. ಸಮಾರೋಪ ಭಾಗ.

ಒಟ್ಟು ಅಧ್ಯಯನದ ಹಿನ್ನೆಲೆಯಲ್ಲಿ 'ಅಧ್ಯಯನದ ಪ್ರಸ್ತುತತೆ' ಯ ವಿಚಾರಗಳ ವಿವರಣೆ ಮತ್ತು ಅಧ್ಯಯನಗಳ (ಸಮೀಕ್ಷೆಯ) ವಿವರ ಟಿಪ್ಪಣಿಯಿಂದ ಕೂಡಿದೆ.

1.2.1 — ಕ್ಷೇತ್ರ ಕಾರ್ಯದ ಪೂರ್ವ:

ಕ್ಷೇತ್ರಾಧ್ಯಯನಕ್ಕಾಗಿ ಬೇಕಾಗುವ ಪತ್ರಿಕೆಗಳ ಪ್ರತಿದರ್ಶಜ (Samples) ಗಳ ಆಯ್ಕೆ ಉದ್ದೇಶಗಳ ಹಿನ್ನೆಲೆಯಲ್ಲಿ ಅನಕ್ಷರಸ್ಥ ಪ್ರೌಢರು ರೂಢಿಸಿಕೊಂಡ ಓದು ಬರಹದ ಸ್ವರೂಪವನ್ನು ಸ್ಥೂಲವಾದ ಕಲ್ಪನೆ ಹಾಗೂ ಪತ್ರಿಕೆಯ ನಿರೂಪಿತ ಭಾಷೆಯು (ಮುದ್ರಣ)ನ್ನು ಪರೀಕ್ಷಿಸುವ ವಿಧಾನ ಹಾಗೂ (ವಾಚನ ಗ್ರಹಿಕೆ) ಸಾಮರ್ಥ್ಯಗಳನ್ನು ಲಕ್ಷದಲ್ಲಿರಿಸಿಕೊಂಡು, ಎಲ್ಲ (110) ಪತ್ರಿಕೆಗಳನ್ನು ಸ್ವಯಂ ಅಧ್ಯಯನ ಮಾಡಿ ಗುರುತಿಸಿದ ಪ್ರಾಕಲ್ಪಿತ ಸಂಗತಿಗಳೆಂದರೆ :- ಪತ್ರಿಕೆಗಳು ಭಿನ್ನ ಭಿನ್ನ ಸ್ವರೂಪದ ಪೂರ್ವ ಸಿದ್ಧತೆಯ ಸ್ಥಿತಿಯ ಓದುಗರನ್ನು ಬಯಸುತ್ತವೆ. ಹಾಗೂ ನವ ಓದುಗರು ಹೆಚ್ಚಾಗಿ ಬಯಸುವ 'ಮಾಹಿತಿ ಆಧಾರಿತ' ಪತ್ರಿಕೆಗಳು ಹಾಗೂ ಆಸಕ್ತಿದಾಯಕ ವಿಷಯ ವಸ್ತುವಿನಿಂದ ರೂಪಗೊಂಡಿರುವವು.

ಕ್ಷೇತ್ರಕ್ಕಾಗಿ:- ವಿಷಯ ವಸ್ತುವನ್ನಾಧರಿಸಿ 12-13 ವಿಭಾಗಗಳನ್ನು (Sections) ಸ್ಥೂಲವಾಗಿ, ಆರೋಗ್ಯ ಮತ್ತು ಸ್ವಚ್ಛತೆ, ಪರಿಸರ ಪ್ರಜ್ಞೆ, ಜನ ಸಂಖ್ಯಾ ಶಿಕ್ಷಣ, ಸಾಮಾಜಿಕ, ಆರ್ಥಿಕ ಹಾಗೂ ಸಾಮಾಜಿಕ ಸಂಸ್ಥೆಗಳು, ಧಾರ್ಮಿಕ ಮತ್ತು ಸಾಂಸ್ಕೃತಿಕ, ವಿಜ್ಞಾನ ಮತ್ತು ತಂತ್ರಜ್ಞಾನ, ಕಥಾ ವಿಭಾಗ, ಸ್ತ್ರೀಯರು ಮತ್ತು ಕಾನೂನು, ವೃತ್ತಿ, ರಾಜಕೀಯ ಮತ್ತು ಆಡಳಿತಾತ್ಮಕ, ಜಾನಪದ ಪರಿಕರಗಳು, (ಸಾಹಿತ್ಯ) ಸಾಮಾನ್ಯ ವಿಷಯ, ಮುಂತಾದವು. (ಆಧಾರ:- ನವ ಸಾಕ್ಷರರಿಗೆ ಸಾಹಿತ್ಯ ರಚನೆ ಯ ಪ್ರಶ್ನೆಗಳು).

ಆಯ್ಕೆಗೊಂಡ ಪಠ್ಯಗಳು:- ಗ್ರಾಮ ನೈರ್ಮಲ್ಯ, ಬೆಂಗಳೂರು, ಗೊಬ್ಬರಗಳು, ನೀರಾವರಿ, ಬ್ಯಾಂಕುಗಳು, ರಂಗೋಲಿ, ಮದರ ಥೆರೆಸಾ, ಕಿರುಗತೆಗಳು, ಕಂಪ್ಯೂಟರ, ಜೇನು ಸಾಕಣೆ, ಚುನಾವಣೆಗಳು, ಉತ್ಸವಗಳು, ವಿಶೇಷ ಪುರವಣಿಗಳಾಗಿ — ಗಾದೆಗಳು, ಕರ್ನಾಟಕ ಜಿಲ್ಲೆಗಳು, ಬಾಹುಬಲಿ.

1.2.2. ಪ್ರಶ್ನಾವಳಿ ರೂಪಣ :-

ಸಂಶೋಧನಾ ಅಧ್ಯಯನ ವಲಯದಲ್ಲಿ ವಿಶೇಷವಾಗಿ ಕ್ಷೇತ್ರ ಕಾರ್ಯ ಆಧಾರಿತ ಅಧ್ಯಯನಕ್ಕೆ ದತ್ತಾಂಶ ಸಮೀಕ್ಷೆ ಸಂಕಲನದಲ್ಲಿ ಉಪಯುಕ್ತವಾಗುವ ತಂತ್ರ. ಇದು ಎರಡು ಸಂದರ್ಭದಲ್ಲಿ ಬಳಕೆಯಾಗುವದುಂಟು. ಅಧ್ಯಯನಕಾರ ನೇರವಾಗಿ (ಖುದ್ದಾಗಿ) ಪ್ರತಿ ವ್ಯಕ್ತಿಯನ್ನು ಸಂದರ್ಶಿಸಿ, ಮಾಹಿತಿಯನ್ನು ಪಡೆಯುವಾಗ, ಪರೋಕ್ಷವಾಗಿ (ಅಂಚೆ ಮೂಲಕ) ಪ್ರಶ್ನಾವಳಿ ಕಳುಹಿಸಿ ಪ್ರತಿವ್ಯಕ್ತಿಯಿಂದ ಮಾಹಿತಿ ಪಡೆಯುವಲ್ಲಿ ಸಹಾಯಕ್ಕೆ ಬರುತ್ತವೆ. ಪ್ರಸ್ತುತ ಕ್ಷೇತ್ರ ಕಾರ್ಯದಲ್ಲಿ ಪ್ರತಿ ವ್ಯಕ್ತಿರಾದ ನವ ಓದುಗರನ್ನು ಖುದ್ದಾಗಿ ಸಂದರ್ಶಿಸಿ ಪಠ್ಯವಾಚನ ಮಾಡಿಸಿ, ಹಾಗೂ ಪ್ರಶ್ನೆಗಳಿಗೆ ಪ್ರತಿಕ್ರಿಯೆಗಳು ಆಯ್ಕೆಗಳ ರೂಪದಲ್ಲಿ, ದತ್ತಾಂಶವನ್ನು ಕಲೆಹಾಕುವಲ್ಲಿ 'ಬಹು ಅಂಶಗಳ ಆಯ್ಕೆ' ವಿಧಾನವನ್ನು ಅನುಸರಿಸಿ, ಈ ಪೂರ್ವದಲ್ಲಿ ನವ ಸಾಕ್ಷರರಿಗೆ ಸಾಹಿತ್ಯ ರಚನೆಯ ಸಂದರ್ಭದಲ್ಲಿ ತಯಾರಿಸಿದ ಪ್ರಶ್ನಾವಳಿಯನ್ನು ಅವಲೋಕಿಸಿ — ನವ ಓದುಗರ ವೈಯಕ್ತಿಕ ಮಾಹಿತಿ, ಅವರ ಆಸಕ್ತಿ ಹವ್ಯಾಸದೊಂದಿಗೆ, ಪಠ್ಯದ ಮುದ್ರಣ (ನಿರೂಪಿತಭಾಷೆ) ಹಾಗೂ (ವಾಚನ ಗ್ರಹಣ) ಸಂವಹನಕ್ಕೆ ಸಂಬಂಧಿಸಿದಂತೆ, ಪೂರಕವಾಗಿ ಪಠ್ಯಗಳ ಉಪಯುಕ್ತತೆಯನ್ನು ಗುರುತಿಸುವ ಪ್ರಶ್ನೆಗಳು, ಓದುಗರ ರುಜು ಪಡೆಯುವದರ ಮೂಲಕ ಸ್ಥೂಲವಾಗಿ ಅವರ ಬರಹವನ್ನು ತಿಳಿಯುವಲ್ಲಿ ಚಿಕ್ಕದಾಗಿ ಪ್ರಯತ್ನಿಸಲಾಗಿದೆ. ಪ್ರಶ್ನಾವಳಿಯಲ್ಲಿ ಸೂಕ್ತ ಸಂಬಂಧ ಕಾಯ್ದುಕೊಂಡು, ನಿರ್ದಿಷ್ಟ ಪ್ರಶ್ನೆಗಳಿಗಿರುವ ಆಯ್ಕೆಗಳು ಕೂಡಾ ಒಂದನ್ನೊಂದು ಬಲಪಡಿಸುವ ಸಾಧ್ಯತೆಗಳಿವೆ.

'ಬಹು ಅಂಶಗಳ ಆಯ್ಕೆ ಕ್ರಮ' ವನ್ನು ಅನ್ವಯಿಸಿಕೊಂಡದ್ದರ ಉದ್ದೇಶ — ಇನ್ನುಳಿದ ವಿಧಗಳಿಗಿಂತ ಇದು ಅಧ್ಯಯನಕಾರ ಹಾಗೂ ಪ್ರತಿ ವ್ಯಕ್ತಿರ ದೃಷ್ಟಿಯಿಂದ ಕಲೆ ಹಾಕಿದ ದತ್ತಾಂಶ ಕ್ರೋಢೀಕರಿಸಿ ಸಾಂಖಿಕ ವಿವರದೊಂದಿಗೆ ಗಣಕ ಯಂತ್ರದಲ್ಲಿ ಅಳವಡಿಸಿ, ವಿವಿಧ ಆಕೃತಿಗಳ ಮೂಲಕ (ದತ್ತಾಭಿಲೇಖ) ವಿಶ್ಲೇಷಿಸಲು ಅನುಕೂಲ, ಹಾಗೂ ಓದುಗರ ನೆಲೆಯಿಂದ ವಸ್ತುನಿಷ್ಠ ಹಾಗೂ ವ್ಯಕ್ತಿನಿಷ್ಠ ಗ್ರಹಿಕೆಯ ಪರೀಕ್ಷೆಗಳ ಸಂದರ್ಭದಲ್ಲಿ ಪ್ರಚೋದನೆ ನೀಡಲು ಸಾಧ್ಯ. ಆದರೆ ಇಲ್ಲಿ ಪ್ರತಿಯೊಬ್ಬರ ವಾಚನ ಗ್ರಹಣ ಸಾಮರ್ಥ್ಯಗಳನ್ನು ನಿರ್ದಿಷ್ಟ ಪರೀಕ್ಷಣಗಳ ಮೂಲಕ ವ್ಯವಸ್ಥಿತವಾಗಿ ಗುರುತಿಸುವ ಪ್ರಯತ್ನವು ನಡೆದಿಲ್ಲವಾದರೂ (Timed reading passage Test and Objective and subjective comprehensive Tests) ವಿಸ್ತೃತ ನೆಲೆಯಲ್ಲಿ ಪ್ರಾಯೋಗಿಕ ಅಧ್ಯಯನಕ್ಕೆ ಉತ್ತಮ ನಾಂದಿ. ಈ ರೀತಿ ಭಾಷಾ

ಶೋಧನಾ ವಿಧಾನದ ಹಿನ್ನೆಲೆಯಲ್ಲಿ ಪ್ರಾಯೋಗಿಕ ಅಧ್ಯಯನಗಳು ಕನ್ನಡದ ಮಟ್ಟಿಗೆ ಕಡಿಮೆ ಎಂದೇ ಹೇಳಬಹುದು. ಪ್ರತಿ ವ್ಯಕ್ತರಾದ ನವ ಓದುಗರು ಓದುಬರಹವನ್ನು ರೂಢಿಸಿಕೊಂಡ 'ಆರಂಭಿಕ ವಯಸ್ಕ ಸಾಕ್ಷರರು' ಎಂಬ ಕಾರಣದಿಂದ ಪ್ರಶ್ನಾವಳಿ ಹೆಚ್ಚಾಗಿ ಅಧ್ಯಯನಕಾರನಿಂದಲೇ ಕ್ರಿಯಾಶೀಲವಾಯಿತು.

1.2.3. 'ಕ್ಷೇತ್ರ'ದ ಆಯ್ಕೆ :

ಅಧ್ಯಯನಕ್ಕೆ ಆಯ್ಕೆಮಾಡುವ ಕ್ಷೇತ್ರ, ವ್ಯವಸ್ಥಿತವಾಗಿ, 'ಪೂರ್ವ ಸಿದ್ಧತೆ ಸ್ಥಿತಿ' ಚೆನ್ನಾಗಿದ್ದರೆ ಫಲಿತತೆಯ ಪ್ರಮಾಣ ಅಧಿಕವಾಗಿ ಬರುವದು ಸಾಮಾನ್ಯ. ಕ್ಷೇತ್ರದ ಆಯ್ಕೆಯಲ್ಲಿ ಗಮನಿಸಿದ ಸಂಗತಿಗಳೆಂದರೆ,

1) ಆಯ್ಕೆಗೊಳ್ಳುವ ಕ್ಷೇತ್ರವು ಸಾಕ್ಷರತಾ ಆಂದೋಲನಕ್ಕೆ ಒಳಗಾಗಿ, ಸಾಧ್ಯವಾದಷ್ಟು ಕಲಿಕಾ ಹಂತ ಮುಗಿಯುವ ಸ್ಥಿತಿಯಲ್ಲಿರುವದು.

2) ಮೌಲ್ಯಮಾಪನಕ್ಕೆ ಒಳಗಾಗಿ ಸಾಕ್ಷರೋತ್ತರ ಹಂತಕ್ಕೆ ಮುಂದಾಗುವ – ಅಂದರೆ ಗ್ರಂಥಾಲಯಗಳ ಸ್ವರೂಪದಲ್ಲಿ (ಜನ ಶಿಕ್ಷಣ ನಿಲಯ) ಬಾಳ ಬೆಳಕ ಕೇಂದ್ರಗಳು ಪ್ರಾರಂಭವಾಗಿರುವ ಹಂತದಲ್ಲಿರುವದು.

ಈ ಸಂಗತಿಗಳ ಹಿನ್ನೆಲೆಯಲ್ಲಿ ಅಧ್ಯಯನಕಾರನಿಗೆ ಸುಲಭವಾಗಿ ಸ್ವ ಪರಿಚಿತ ಜಿಲ್ಲೆಯಾದ ಧಾರವಾಡ, ಪ್ರಥಮ ಹಂತ (1993–94) ಕ್ಕಾಗಿ ಆಯ್ದ 9 ತಾಲೂಕುಗಳು ಅಧ್ಯಯನದ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟವು.

<u>9 ನಗರಗಳು:–</u> 18 – ಗ್ರಾಮಗಳು) (ಕ್ಷೇತ್ರ ಕಾರ್ಯದ ಚಿತ್ರಣ ಭೂಪಟ –1 ರಲ್ಲಿ ಅವಲೋಕಿಸುವದು).

1.2.4. :: ಕ್ಷೇತ್ರ ಕಾರ್ಯ ಪ್ರಕ್ರಿಯೆ ::

ಈ ಕ್ಷೇತ್ರಕಾರ್ಯದ ಜೀವಾಳವೆಂದರೆ — ಸಾಕ್ಷರತಾ ಆಂದೋಲನದ ಕಲಿಕಾ ಹಂತದಲ್ಲಿ ಕ್ರಿಯಾಶೀಲವಾಗಿರುವ ಕಲಿಕಾ ಕೇಂದ್ರಗಳಲ್ಲಿ ಭಾಗಿಯಾಗಿ ಕನಿಷ್ಟ ಓದು ಬರಹ ರೂಢಿಸಿಕೊಂಡ (15–35) ವಯಸ್ಸಿನ ಸಾಕ್ಷರರು. ಇನ್ನುಳಿದ ಪರಿಕರಗಳೆಂದರೆ, ಪಠ್ಯಗಳು, ಪ್ರಶ್ನಾವಳಿ, (ಪೂರಕವಾಗಿ 'ಧ್ವನಿಸುರುಳಿ' ಗಾಗಿ ಟೇಪ್‌ರೆಕಾರ್ಡ್ ವಾದನ ಧ್ವನಿ ದಾಖಲೆಗಾಗಿ ಕೆಲವು ಸಾಲು ಅಥವಾ ವಾಕ್ಯರಾ ವಾದನ ಮಾತ್ರ). ಹಾಗೂ ಆಯ್ಕೆ ಸ್ವರೂಪದಲ್ಲಿರುವ ಪ್ರತಿಕ್ರಿಯೆಗಳ, ಹಿನ್ನೆಲೆಯಾಗಿ ದತ್ತ ಸಂಕಲನ ಕಾರ್ಯ ನೇರ ಸಂದರ್ಶನದ ಮೂಲಕ ಇಡೀ ಕ್ಷೇತ್ರ ಕಾರ್ಯದಾದ್ಯಂತ ನಡೆದಿದೆ.

ಕ್ಷೇತ್ರ ಕಾರ್ಯಕ್ಕೆ ಮೀಸಲಾದ ಅವಧಿಯನ್ನು ಸಮರ್ಪಕ ಬಳಕೆಗಾಗಿ ಸೂಕ್ತ ವೇಳಾ ಪಟ್ಟಿ ಅವಶ್ಯ. ಒಂದು ತಾಲೂಕಿಗೆ 30–32 ನವ ಸಾಕ್ಷರರಂತೆ (ನಗರ – 16 – ಗ್ರಾಮೀಣ – 16) 3 ದಿನದ ಅವಧಿಯಲ್ಲಿ 1 ನಗರ 2 ಹಳ್ಳಿಗಳಂತೆ ಕ್ಷೇತ್ರ ಕಾರ್ಯ ವೇಳಾ ಪಟ್ಟಿಯನ್ನು ತಯಾರಿಸಿ (ನವ ಸಾಕ್ಷರರ ಆಯ್ಕೆಯ ಅನುಕೂಲಕ್ಕಾಗಿ) ಸಂಬಂಧಿಸಿದ ಎಲ್ಲಾ ತಾಲೂಕಿನ 'ನಗರ' ಹಾಗೂ 'ಗ್ರಾಮೀಣ' ಸಾಕ್ಷರತಾ ಸಮಿತಿಯ ಸಂಯೋಜಕ ಹಾಗೂ ಸಂಬಂಧಿಸಿದ ಸಮಿತಿಯ ಅಧ್ಯಕ್ಷರಿಗೆ ಅಧ್ಯಯನದ 'ಸ್ಥೂಲ ಮಾಹಿತಿ' ಸ್ವರೂಪ ಒಳಗೊಂಡ ವಿನಂತಿಯ ಕೋರಿಕೆಯ ಪತ್ರಗಳನ್ನು ಪೂರ್ವಭಾವಿಯಾಗಿ ರವಾನಿಸಲಾಯಿತು.

ಹಾಗೆಯೇ ಜಿಲ್ಲಾ ಸಾಕ್ಷರತಾ ಸಮಿತಿಯಿಂದ ಸಂಬಂಧಿಸಿದ ಎಲ್ಲ ತಾಲೂಕುಗಳ ಸ್ಥೂಲ ಮಾಹಿತಿ ಚಿತ್ರಣ ಪಡೆದು ಕ್ಷೇತ್ರ ಕಾರ್ಯದ್ದನೇರ ಸಂದರ್ಶನ ಪ್ರಕ್ರಿಯೆಯ ಪೂರ್ವದಲ್ಲಿ ನವಸಾಕ್ಷರರ ಆಯ್ಕೆ ಪ್ರಮುಖವಾದ ಸಂಗತಿ. ಆಯ್ಕೆಯಲ್ಲಿ, <u>ಪ್ರದೇಶ</u>, <u>ಲಿಂಗ</u> (Sex), <u>ವಯಸ್ಸು</u> (Age) (15–35) <u>ವೃತ್ತಿ</u> (Occupation.) <u>ಜಾತಿ</u> ಈ ಎಲ್ಲಾ ನಿಕಷಗಳಿಗೆ (Criteria) ಸಾಧ್ಯವಾದಷ್ಟು ಸಮಾನ ಆದ್ಯತೆ ನೀಡಲಾಗಿದೆ. ಈ ಆಯ್ಕೆಯ ಸಂದರ್ಭದಲ್ಲಿ, ಪ್ರತಿ ನಗರ ಹಾಗೂ ಗ್ರಾಮೀಣ ಸಾಕ್ಷರತಾ ಸಮಿತಿಗಳಲ್ಲಿಯ ದಾಖಲಾತಿಗಳು, ಅದಕ್ಕಿಂತಲೂ ಹೆಚ್ಚಾಗಿ ಸಂಯೋಜಕ – ಸಂಯೋಜಕಿ, ಸಾಕ್ಷರತಾ ಆಂದೋಲನದ ಕ್ರಿಯಾಶೀಲ ಆಧಾರ ಸ್ತಂಭಗಳಾದ ಸ್ವಯಂ ಸೇವಕ : ಕಿಯರು ಊರುಗೋಲಾಗಿದ್ದರು. ಆಯ್ಕೆಯ ಕಾರ್ಯದೊಂದಿಗೆ ಪಠ್ಯಗಳನ್ನು ಓದಲು ಒದಗಿಸುವ ಕಾರ್ಯದಲ್ಲಿ ದಿನದ ಹಗಲಿನ ವೇಳೆಯು ವ್ಯಯವಾಗುತ್ತಿತ್ತು. ಈ ಆಯ್ಕೆಯ ಸಂಗತಿಗಳೊಂದಿಗೆ ಅಧಿಕ ಅಂಶವೆಂದರೆ – ಜಿಲ್ಲಾ ಮೌಲ್ಯ ಮಾಪನ ಸಮಿತಿಯು ಏರ್ಪಡಿಸಿದ ಪರೀಕ್ಷೆಗೆ ಒಳಗಾಗಿ ಹೆಚ್ಚು 'ಪ್ರತಿಕ್ರಿಯಾ ಸಾಮರ್ಥ್ಯ' ಪಡೆದವರನ್ನು ಗಮನಿಸಿದ್ದು.

ಸಾಮಾನ್ಯವಾಗಿ ಸಂದರ್ಶನ ವೇಳೆ ಹೆಚ್ಚಾಗಿ ರಾತ್ರಿಯ ವೇಳೆ (ಸಾಯಂಕಾಲದಿಂದ) ಸಾಂದರ್ಭಿಕವಾಗಿ ಬೆಳಗಿನ ವೇಳೆಯಲ್ಲಿ (ಉದ್ಯೋಗದಲ್ಲಿ ಪಾಲ್ಗೊಳ್ಳುವ ಮೊದಲು) ಅನುಕೂಲ ಮಾಡಿಕೊಳ್ಳಲಾಗುತ್ತಿತ್ತು. ಆದರೆ ಹೆಚ್ಚಾಗಿ ಮುಂಗಾರು ಮಳೆ ಸಾಧಿಸಿದ್ದರಿಂದ, ಸಾಮಾನ್ಯವಾಗಿ ಎಲ್ಲ ನವ ಓದುಗರು ಕೃಷಿ , ದೈನಿಕ ಕೈ ಕೂಲಿ ಇಂಥ, ದೈಹಿಕ ಶ್ರಮಾಧಾರಿತ ಉದ್ಯೋಗ ಸ್ಥರಾಗಿದ್ದರಿಂದ ರಾತ್ರಿ ವೇಳೆ ತುಂಬಾ ಅನುಕೂಲವಾಗುತ್ತಿತ್ತು. ಹಲವರ ಸಹಾಯ ಸಹಕಾ-ರದಿಂದ ಸಂದರ್ಶನದ ಸ್ಥಳಗಳಿಗೆ ಅವರನ್ನು ಮನವೊಲಿಸುವದೆಂದರೆ, ಶತಪ್ರಯತ್ನ, ಸೌಜನ್ಯತೆ, ಗೌರವ ದಿಂದ, ವಿನಯದಿಂದ, ಶಿಕ್ಷಣದ ಮಹತ್ವವನ್ನು ದೈನಿಕ ಬದುಕಿನ ನಿದರ್ಶನಗಳ ಮೂಲಕ ತಿಳಿ ಹೇಳುವ ಕಾರ್ಯದಲ್ಲಿ ಯಶಸ್ಸು ದೊರಕುತ್ತಿತ್ತು. ಅವರವರ ಮನೆಗಳು, ಕಲಿಕಾ ಕೇಂದ್ರಗಳು(ವಿಶೇಷವೇನಿಲ್ಲ) ದೇವಾಲಯಗಳು, ಮಠಗಳು, ಮನೆಯ ಜಾವಣಿ, ಗ್ರಾಮ ಪಂಚಾಯತಿ, ಪ್ರಾಥಮಿಕ ಶಾಲೆಗಳು, ಬೀದಿ ಲೈಟುಗಳ ಕೆಳಗಡೆ, ಸಂದರ್ಶನ ಕಾರ್ಯ ಸ್ಥಳಗಳಾಗುತ್ತಿದ್ದವು. ಸಂಯೋಜಕ :ಕಿ ಹಾಗೂ ಸ್ವಯಂ ಸೇವಕ: ಕಿಯರ ಮೇಲ್ವಿಚಾರಣೆಯಲ್ಲಿ ಪಠ್ಯ ವಾಚನ ಮುಗಿಸಿದಂತಹವರನ್ನು ಆದ್ಯತೆ ಗನುಗುಣವಾಗಿ ಒಬ್ಬ ನವ ಸಾಕ್ಷರನ ಕನಿಷ್ಠ ನೇರ ಸಂದರ್ಶನ ಅವಧಿ 30 ನಿಮಿಷ ಸಾಮಾನ್ಯವಾದುದು. ಇದಕ್ಕೂ ಪೂರ್ವದಲ್ಲಿ ಅವರ ಸಾಮೂಹಿಕವಾಗಿ ಹಾಡುವ ಸಾಕ್ಷರತಾ ಗೀತೆಗಳನ್ನು ಜನಪದ ಹಾಡು ಡೊಳ್ಳಿನ ಪದಗಳನ್ನು ಹೇಳಿಸಿ,(ಧ್ವನಿ ಸುರುಳಿಯಲ್ಲಿ ಹಿಡಿದಿಡುವದನ್ನು ನೋಡಿದ)ವಿಶೇಷವಾಗಿ, ಗ್ರಾಮೀಣ, ನಗರ, ಸ್ತ್ರೀ ಓದುಗರು ತುಂಬಾ ಕುತೂಹಲ, ಆಸಕ್ತಿಯಿಂದ ಪ್ರೇರಣೆ ಹೊಂದಿ ಕ್ರಿಯಾ ಶೀಲರಾಗಿ ಸ್ವಚ್ಛಂದವಾಗಿ ಪಠ್ಯ ಓದುವದರಿಂದ ಹಿಡಿದು ಸಂದರ್ಶನ ಮುಗಿಯುವರೆಗೂ ತಮ್ಮ ವಿಚಾರಗಳನ್ನು, ಅಭಿಪ್ರಾಯ ಸಲಹೆ ಸೂಚನೆಗಳನ್ನೂ ನೀಡುತ್ತಿದ್ದರು, ವಿಶೇಷವಾಗಿ, ನಗರದ ಸ್ತ್ರೀ ಹಾಗೂ ಗ್ರಾಮೀಣ ಪುರುಷರು ಹೆಚ್ಚು ಮುಂದಿರುವದು,ಅಂದರೆ ಸುಲಭವಾಗಿ ಓದುವದು ಹಾಗೂ ಗ್ರಹಿಕೆಗೆ ಸಂಬಂಧಿಸಿದಂತೆ ಪಠ್ಯದಲ್ಲಿಯ ವಸ್ತು ನಿಷ್ಠ ಸಂಗತಿಗಳನ್ನು ಗ್ರಹಿಸಿ ಪ್ರತಿಕ್ರಿಯಿಸಿದ್ದುದು, ಪಠ್ಯಗಳ ಭಾಷೆ ಸಂವಹನಗೊಂಡು ಉಪಯುಕ್ತವಾಗಿವೆ ಎಂಬುದನ್ನು ದೃಢಪಡಿಸುತ್ತವೆ. ಅವರಲ್ಲಿ ಸಾಧಿಸಿ ತೋರಿಸಬೇಕೆಂಬ ಛಲ ಎದ್ದುಕಾಣುತ್ತಿದೆ. ಆದರೆ ನಗರದ ಪುರುಷ ಹಾಗೂ ಗ್ರಾಮೀಣ ಸ್ತ್ರೀಯರು ಮೇಲಿನವರಿಗಿಂತಲೂ ಸ್ವಲ್ಪ ವಾಚನಗ್ರಹಿಕೆ ನಿಧಾನ ಇರುವುದು ಕ್ರಮೇಣವಾಗಿ ಪಠ್ಯಗಳ (ಲಾಭ) ಪ್ರಯೋಜನ ಪಡೆಯುವ ಆಸಕ್ತಿ ಕಾಣುತ್ತಿದೆ. (ವಿಸ್ತೃತ ವಿವರ ವಿಶ್ಲೇಷಣೆಗೆ ಕ್ಷೇತ್ರಾಧ್ಯಯನದ ಫಲಿತಗಳು' ಭಾಗ ಅವಲೋಕಿಸುವುದು).

ಒಟ್ಟು 300 ಜನ ನವ ಸಾಕ್ಷರರನ್ನು ಸಂದರ್ಶಿಸಿ ಆಯ್ಕೆಯ ಪ್ರತಿಕ್ರಿಯೆಗಳ ಮೂಲಕ ಮಾಹಿತಿಯನ್ನು ಸಂಕಲನಲಾಯಿತು.

2. 'ಕ್ಷೇತ್ರ' ಫಲಿತಗಳ ಭಾಗ :

ಇದು ಅಧ್ಯಯನದ 'ಕನ್ನಡಿ' ಇದ್ದ ಹಾಗೆ ವ್ಯಾಪಕವಾದ ಕ್ಷೇತ್ರ ಕಾರ್ಯದಿಂದ ಸಂಗ್ರಹಿಸಿದ ಪ್ರಾಥಮಿಕ ದತ್ತಾಂಶದ ಸುದೀರ್ಘ ಅಂಶಗಳ ವ್ಯವಸ್ಥಿತ ದೀರ್ಘವಾಗಿ ಕ್ರೋಢೀಕರಿಸಿದ ದೀರ್ಘ ಸಂಖ್ಯಾ ವಿವರವನ್ನು ಕಂಪ್ಯೂಟರೀಕರಣಗೊಳಿಸಿದ ದತ್ತಾಭಿಲೇಖಗಳ ವಿಶ್ಲೇಷಣೆಯು ಕ್ರಮವಾಗಿ ನವ ಸಾಕ್ಷರರ ಸಾಮಾನ್ಯ ಮಾಹಿತಿ, ಪಠ್ಯಗಳ ನಿರೂಪಿತ ಭಾಷೆ (ಮುದ್ರಣ) ಹಾಗೂ ಸಂವಹನಕ್ಕೆ ಸಂಬಂಧಿಸಿದಂತೆ, ಸಾಗಿದ್ದು, ವಿಶ್ಲೇಷಣಾ ಕ್ರಮವು ಪ್ರತಿ ದತ್ತಾಭಿಲೇಖಗಳಲ್ಲಿ ನಿರ್ದಿಷ್ಟ ಅಂಶವು ಕುರಿತು ಪ್ರತಿಕ್ರಿಯಿಸಿದ ಒಟ್ಟು ಪ್ರತಿಕ್ರಿಯೆಗಳ ಸಂಖ್ಯೆಗೆ, ಸಂದರ್ಶಿಸಿದ ನವ ಸಾಕ್ಷರರ ಒಟ್ಟು ಸಂಖ್ಯೆಯಿಂದ ಭಾಗಿಸಿ ಬಂದುದರ ಪ್ರತಿಶತ ಪ್ರಮಾಣ ಸಂಖ್ಯೆಯನ್ನು* (ನಿರ್ದಿಷ್ಟ ಅಂಶಕ್ಕೆ ಸೀಮಿತಗೊಳಿಸಿ) ಆ ಸರಾಸರಿ ಪ್ರತಿ ಶತ ಸಂಖ್ಯೆಯನ್ನು (ಪರಿಮಿತಿಗಳು ಕನಿಷ್ಟ ಶೇ.60 ರಿಂದ ಗರಿಷ್ಟ ಶೇ.90) ಆಧಾರವಾಗಿಸಿಕೊಂಡು ಆ ಸರಾಸರಿ ಪ್ರತಿಶತ ಸಂಖ್ಯೆಗೆ – ಶೇ-5 ಕ್ಕಿಂತಲೂ ಅಧಿಕವಿರುವ ಪ್ರತಿಶತ ಸಂಖ್ಯೆಗಳು ಸಂವಹನದ ತೊಡಕುಗಳನ್ನು ಪ್ರತಿನಿಧಿಸಿ (ವಾಚನ + ಗ್ರಹಣ) ತೊಡಕುಗಳ ನಿವಾರಣೆಗಾಗಿ ಪಠ್ಯದ ಪರಿಷ್ಕಾರಕ್ಕೆ ಸಾಧ್ಯವಾದ ಸಲಹೆಗಳನ್ನು ಪಡೆದುಕೊಂಡಿವೆ. ಮತ್ತು ಅದೇ ಸರಾಸರಿ ಪ್ರತಿಶತ ಸಂಖ್ಯೆಗೆ + 5 ಶೇ ಕ್ಕಿಂತ ಅಧಿಕವಾಗಿರುವ ಪ್ರತಿಶತ ಪ್ರಮಾಣಗಳು ಪಠ್ಯಗಳ ಉಪಯುಕ್ತತೆಯ ವಿವರಣೆಯನ್ನು ಹೊಂದಿದೆ.

*ಸರಾಸರಿ ಪ್ರತಿ ಶತ :—

$$\frac{\text{ನಿರ್ದಿಷ್ಟ ಅಂಶದ ಪ್ರತಿಕ್ರಿಯೆಗಳ ಒಟ್ಟು ಸಂಖ್ಯೆ}}{\text{ಸಂದರ್ಶಿಸಿದ ನವ ಸಾಕ್ಷರರ ಒಟ್ಟು ಸಂಖ್ಯೆ}} \times 100$$

3. 'ಸೈದ್ಧಾಂತಿಕ ವಿಚಾರಗಳ' ಭಾಗ :

ಈ ಭಾಗವು ಹೆಚ್ಚಾಗಿ ಇಂಗ್ಲೀಷ್ ಆಕರಗಳಿಂದ ಅನುವಾದಿಸಲ್ಪಟ್ಟ 'ಸೈದ್ಧಾಂತಿಕ ವಿಚಾರ'ಗಳ ವಿವರ ಹಾಗೂ ಸಾಂದರ್ಭಿಕ ವಿಶ್ಲೇಷಣೆಯಿಂದ ರೂಪಿತವಾಗಿದೆ. ಸಂವಹನ ಪ್ರಕ್ರಿಯೆಯು ಆಧುನಿಕ ಗತಿಶೀಲ ಸಮಾಜದ ಅವಿಭಾಜ್ಯ ಅಂಗವಾಗಿದ್ದು, ಸೂಕ್ಷ್ಮ ಹಾಗೂ ವೇಗದ ಸ್ವರೂಪವನ್ನು ಪಡೆಯುತ್ತಿರುವುದು. ಸಂವಹನವು 'ಏಕಮುಖ' ಧಾರೆಯಾಗಿದ್ದು, ವ್ಯಕ್ತಿಗೆ ನಿಯತವಾಗಿದ್ದು, ಪ್ರಾಪಂಚಿಕ ಗುಣವನ್ನು ಹೊಂದಿ ಸಾಂದರ್ಭಿಕವಾಗಿ ಸೃಜನಶೀಲ ಪ್ರಕ್ರಿಯೆಯಾಗಿದೆ ಎಂಬ 'ಮಾದರಿಗಳ' ವೈಚಾರಿಕ ಮುಖ್ಯಾಂಶಗಳು ಭಾಷೆ ಸಂವಹನ ಪ್ರಕ್ರಿಯೆಗೆ ನಿರ್ಧಾರಕಾಂಶವಾಗಿದ್ದು ಅವಿಭಾಜ್ಯ ಅಂಗವಾಗಿದೆ.

ವಾಚನ – ಗ್ರಹಣ ಸಾಮರ್ಥ್ಯಗಳು – ಮನೋ ಜೈವಿಕ ಚಟುವಟಿಕೆಗಳಾದರೂ, ಗ್ರಹಿಕೆ ವಾಚನ ಸಾಮರ್ಥ್ಯದ ಮೇಲೆ ಅವಲಂಬಿತವಾದರೂ ಮನೋ ಜೈವಿಕ ಸೂಕ್ಷ್ಮ ಕೌಶಲ್ಯವಾಗಿ ವಾಚನದ ಸಾರ್ಥಕ್ಯವನ್ನು ತನ್ನದಾಗಿಸಿಕೊಂಡಿದೆ. ಇವೆರಡರ 'ನಡುವೆ ಸಂಬಂಧ ಪರಸ್ಪರ ನೇರವಾಗಿಲ್ಲ' ಎಂಬುದು. '<u>ವಾಚನ ಗ್ರಹಿಕೆ</u>'.

'ಪರೀಕ್ಷಣದ ಮುಖ್ಯ ಉದ್ದೇಶ' :-

ಅಂಧ ವಾಚನದ ಪ್ರಮಾಣದರಕ್ಕಿಂತ 'ಆವರ್ತನ' ವಾಚನ' ಪ್ರಮಾಣ ದರಗಳು (W.P.M.) ಅಧಿಕವಾಗುವಂತೆ, ಈ ಆವರ್ತನ ವಾಚನ ವೇಗ ಪ್ರಮಾಣದ ಅಧಿಕತೆಯನ್ನು 'ಆವರ್ತನ ವಾಚನಗ್ರಹಿಕೆ' ಪ್ರಮಾಣದಲ್ಲಿ ಕಾಯ್ದುಕೊಳ್ಳಲಸಾಧ್ಯವಾದರೂ ಇವೆರಡರಲ್ಲಿ ಅಂಧ ಅಥವಾ ಸರಾಸರಿ ಪ್ರಮಾಣ ದರವನ್ನು ನಿರಂತರವಾಗಿ ಉಳಿಸಿಕೊಳ್ಳಲು ಪ್ರಯತ್ನಿಸುವುದಾಗಿದೆ.

ಈ ಸಾಮರ್ಥ್ಯಗಳ ವೃದ್ಧಿಗೆ, ಆವರ್ತನ ವಾಚನದ ರೂಢಿ, ಸ್ವ ತಿದ್ದುಪಡಿ ವಿಧಾನಗಳು ಹೆಚ್ಚು ಪರಿಣಾಮಕಾರಿಯಾಗಿವೆ. ಅಕ್ಷರ, ಶಬ್ದಗಳು, ವಾಕ್ಯಗಳು, ವಾಕ್ಯ ವೃಂದಗಳು ಬರವಣಿಗೆಯಲ್ಲಿ ಅಥವಾ ಮೌಖಿಕ ಅಭಿವ್ಯಕ್ತಿಯಲ್ಲಿ ಅರ್ಥಪೂರ್ಣವಾಗಿ ವ್ಯವಸ್ಥಿತ ಸಂಯೋಜನಾಕ್ರಮದಲ್ಲಿ ಸಂಘಟಿತವಾಗಿರುತ್ತವೆ. ಹಾಗೂ ಸಾಂದರ್ಭಿಕವಾಗಿ ಅರ್ಥ ಸ್ಫುಟತೆಗೆ ಕಾರಣವಾಗುತ್ತವೆ. ಎಂಬ ಮೆದುಳಿನ ಮೂಲಭೂತ ಕಾರ್ಯ ವೈಖರಿಯನ್ನು ಓದುಗರು ಅರಿತುಕೊಂಡಿದ್ದರೆ ಮಾತ್ರ ಬರವಣಿಗೆಯಲ್ಲಿ 'ಅರ್ಥದ ನಿಲುವನ್ನು ಗುರುತಿಸಿ ಗ್ರಹಿಸಲು ಸಾಧ್ಯವಾಗುತ್ತದೆ.

ಶಬ್ದ ಸಂಪತ್ತು, ವಾಚನ ಗ್ರಹಿಕೆಯ ಗುಣಾತ್ಮಕ ವೃದ್ಧಿಗೆ ಮೂಲ ಭೂತ ಸಂಗತಿ, ಪಠ್ಯದಲ್ಲಿ ಶಬ್ದಗಳ 'ಗಾತ್ರ' ಸೂಕ್ತವಾಗಿದ್ದರೆ ಅದು 'ವಿಶೇಷ ಗುಣ' ವನ್ನು ತೋರಿಸುತ್ತದೆ. ಶಬ್ದ ಸಂಪತ್ತು ಮತ್ತು ಗ್ರಹಿಕೆಗಳ ನಡುವೆ ಕಾರ್ಯ ಕಾರಣ ಸಂಬಂಧವಿದ್ದು ಆ ಶಬ್ದಕೋಶ ಅಧಿಕವಾದ ಪ್ರೇರಣಾರ್ಥಕ ಸಂಗತಿ ಎಂಬುದು ಅಧ್ಯಯನದಿಂದ ವ್ಯಕ್ತವಾದ ವಿಚಾರ. ಆದ್ದರಿಂದ ವಾಚನ ಗ್ರಹಿಕೆ ಸುಧಾರಿಸಲು ಶಬ್ದ ಸಂಪತ್ತನ್ನು ಗಳಿಸುವ ತಂತ್ರಗಳನ್ನು ಅರಿತು ರೂಢಿಗೊಳಿಸುವುದು ಸೂಕ್ತ.

ಸಾಮಾನ್ಯ ಅಂಧ ಓದುಗರ ದೃಷ್ಟಿಯಿಂದ ವಾಚನ ಗ್ರಹಿಕೆ ಸಂದರ್ಭದಲ್ಲಿ, ಪಠ್ಯದ ಬರವಣಿಗೆಯ ನೆಲೆಯಿಂದ ಗುರುತಿಸಿದ ಸಾಮಾನ್ಯ ತೊಡಕುಗಳನ್ನು ಶಬ್ದನೇರ ದೃಷ್ಟಿ, ತಲೆ ಅಲ್ಲಾಡಿಸುವ ಕ್ರಿಯೆ, ಸ್ವಷ್ಟೋಚ್ಚಾರಣೆ, ಕಣ್ಣಿನ ಹಿಂಚಲನೆ (Regressions) ಮುಂತಾದವುಗಳ ಸ್ವರೂಪ, ತೊಡಕಾಗುವ ಬಗೆ, ಹಾಗೂ ನಿವಾರಣಾ ಸಾಧ್ಯ ಸಲಹೆಗಳನ್ನು ಸೂಕ್ಷ್ಮವಾಗಿ ಶೈಕ್ಷಣಿಕ ವಿವೇಚನೆಯಿಂದ ನಿರೂಪಿಸಲಾಗಿದೆ.

<u>ಸಮಾರೋಪವಾಗಿ :</u> ಅಧ್ಯಯನದ ಪ್ರಸ್ತುತತೆಯ ದೃಷ್ಟಿಯಿಂದ – Puraly Contemporary – ಅಧ್ಯಯನಗಳು ವ್ಯವಸ್ಥಿತವಾಗಿ 'ಪ್ರಾಯೋಗಿಕ ನೆಲೆ' ಹಾಗೂ ಸೈದ್ಧಾಂತಿಕ ಚಿಂತನೆಯ ನೆಲೆಯಿಂದ ಭಾಷಾ ಸಾಮರ್ಥ್ಯಗಳ ಕುರಿತು ಪ್ರೌಢ ವಿಸ್ತೃತ ಅಧ್ಯಯನಗಳು, 'ಕನ್ನಡ' ಭಾಷಾ ಶಿಕ್ಷಣ' (ಬೋಧನಾ ವಿಧಾನ) ದ 'ಸಂದರ್ಭದಲ್ಲಿ ನಡೆಯುವುದು ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಗುಣಾತ್ಮಕ ಪರಿವರ್ತನೆಗೆ ದಾರಿ ಮಾಡಿಕೊಡಲು ಸಾಧ್ಯ.

2

ಸೈದ್ಧಾಂತಿಕ ವಿಚಾರಗಳ ಭಾಗ

ಸಂವಹನ.

ವಾಚನ ಗ್ರಹಣ ಸಾಮರ್ಥ್ಯಗಳು

ಶಬ್ದ ಬಂಢಾರದ ಮಹತ್ವ

ಸಾಮಾನ್ಯ ತೊಡಕುಗಳು: ಸಾಧ್ಯ ಸಲಹೆಗಳು.

2.1 : ಸಂವಹನ :

ಇಂಗ್ಲೀಷಿನ Communication ಗೆ ಸಮಾನಾರ್ಥಕವಾಗಿ ಕನ್ನಡದಲ್ಲಿ ಪ್ರಯೋಗದಲ್ಲಿರುವ ಹಲವು ರೂಪಗಳಲ್ಲಿ ಈ '' ಸಂವಹನ '' ರೂಪ ವಿಶೇಷವಾಗಿದೆ. ವಿನಿಮಯ ಮಾಡಿಕೊಳ್ಳುವುದು, ಸಂಪರ್ಕವೇರ್ಪಡಿಸುವುದು, ಸಂಸರ್ಗವಿಟ್ಟುಕೊಳ್ಳುವುದು ಎಂದರ್ಥ. ಹಾಗೂ ಮೌಖಿಕ ಅಥವಾ ಲಿಖಿತ ನಿರೂಪಣೆಯ ವೃತ್ತಾಂತವನ್ನು ಗ್ರಹಿಸುವುದು. ಪ್ರಸ್ತುತ ಅಧ್ಯಯನದ ಹಿನ್ನೆಲೆಯಲ್ಲಿ ಪತ್ರಗಳ ಮುದ್ರಣ ಹಾಗೂ ನಿರೂಪಿತ ಭಾಷೆಯ ವಾಚನ ಗ್ರಹಿಕೆ ಸಾಮರ್ಥ್ಯಗಳ ನೆಲೆಯಲ್ಲಿ ಸ್ಥೂಲವಾಗಿ – ಸಂವಹನ ಪ್ರಕ್ರಿಯೆಯ ಸ್ವರೂಪ, ಶಬ್ದಾವಳಿ ಪಾತ್ರ, ಹಾಗೂ ತೊಡಕಾಗುವ ಸಾಮಾನ್ಯ ದೋಷಗಳ ಕುರಿತು ಸೈದ್ಧಾಂತಿಕ ವಿಚಾರಗಳ ನಿರೂಪಣೆ ಇಲ್ಲಿ ಅವಶ್ಯವೆಂದು ತೋರುತ್ತದೆ.

ಭಾಷೆ ಎಲ್ಲ ಜ್ಞಾನ ಶಿಸ್ತುಗಳ ಜನನಿ ಹಾಗೂ ಪ್ರಧಾನ ಉದ್ದೇಶ ಸಂವಹನ. ಮಾಹಿತಿ ಅಥವಾ ವೃತ್ತಾಂತವನ್ನು ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆಯಾದ ಸಂವಹನ ಕೆಲವು ಸಂದರ್ಭದಲ್ಲಿ ವ್ಯಕ್ತಿಗತವಾಗಿಯೂ ನಡೆಯುವುದುಂಟು. ಜೊತೆಗೆ ಸಾಮಾಜಿಕ ಸಂದರ್ಭಕ್ಕೆ ಬದ್ಧ ಪ್ರಕ್ರಿಯೆಯಾಗಿದೆ. ವಿಶೇಷವಾಗಿ ಹೇಳುವುದಾದರೆ ಭಿನ್ನ ಭಿನ್ನ ಸಂದರ್ಭಗಳಲ್ಲಿ ಉಚ್ಚರಿತಗೊಂಡ ಸರ್ವ ವೃತ್ತಾಂತಗಳನ್ನು ಒಳಗೊಂಡ ಸಾಮಾನ್ಯ ಪ್ರಕ್ರಿಯೆ ಸಂವಹನ. ಶಾಸ್ತ್ರೀಯವಾಗಿ ಈ ವೃತ್ತಾಂತ ಸಂಕೇತ ಮತ್ತು ಸಾಂದರ್ಭಿಕ ಅರ್ಥಗಳಲ್ಲಿ ಅಡಗಿರುತ್ತದೆ. ಈ ಸಂಕೇತವು ಸಾಧ್ಯವಾದ ಎಲ್ಲ ಭಾಷಿಕ ಉಚ್ಚಾರಣೆಗಳ ಮೂಲಕ ವ್ಯಕ್ತವಾಗುವ ಅಭಿವ್ಯಕ್ತಿ ವೈವಿಧ್ಯಗಳನ್ನೂ ಮತ್ತು ಅರ್ಥವು, ವಸ್ತು ವಿಷಯದಲ್ಲಿಯ ಸಾಧ್ಯವಾದ ಎಲ್ಲ ವ್ಯತ್ಯಾಸಗಳನ್ನು ಒಳಗೊಂಡಿದೆ. ಈ ನೆಲೆಯಲ್ಲಿ ಸಂವಹನ ಸಾಮಾಜಿಕ ರೂಪದಲ್ಲಿ ಪ್ರಯೋಗದಲ್ಲಿದ್ದರೆ, ಭಾಷೆ ಪ್ರಧಾನ ಸಾಮಾಜಿಕ ಕ್ರಿಯೆಯಾಗಿದೆ.

ಸಾಮಾಜಿಕ ಸಂದರ್ಭ ಮತ್ತು ಸಂವಹನ ಶೀಲರು ಸಹಭಾಗಿಗಳಾಗಿ ಮಾಹಿತಿ, ವೃತ್ತಾಂತವನ್ನು ವಿನಿಮಯ ಮಾಡಿಕೊಳ್ಳುವಲ್ಲಿ ವಿಷಯವನ್ನು, ಹಾಗೂ ಅಭಿವ್ಯಕ್ತಿ ಮೂಲಕ ತಮ್ಮನ್ನು ತಾವು ಗುರುತಿಸಿಕೊಳ್ಳುವರು.(Comptence and performance)
ಈ ಪ್ರಕ್ರಿಯೆಯಲ್ಲಿ ರವಾನಿಸುವವ, ವೃತ್ತಾಂತ, ಸ್ವೀಕೃತರು, ಪ್ರಮುಖವಾಗಿದೆ, ರವಾನಿಸುವವ ಹೆಚ್ಚು ಕ್ರಿಯಾಶೀಲವಾಗಿದೆ, ಸ್ವೀಕರಿಸುವವ Passive listener ಆಗಿರುವನು(Addressor) ರವಾನಿಸುವವ(Addressee) ಸ್ವೀಕೃತ ಇಬ್ಬರು ಸಂವಹನ ಶೀಲರ ನಡುವೆ ನಡೆಯುವ ಮನೋ-ಭಾಷಿಕ ಚಟುವಟಿಕೆ ಅಥವಾ ಪ್ರಕ್ರಿಯೆ.
ಪಠ್ಯದ ನೆಲೆಯಲ್ಲಿ ಲೇಖಕನ ನಿರೂಪಣಾ ಭಾಷೆ ಹಾಗೂ ಓದುಗರ ಭಾಷೆಯಲ್ಲಿ ಸಾಮ್ಯತೆ ಮತ್ತು ಪರಸ್ಪರ ಭಾಷಿಕ ಗ್ರಹಿಕೆಯ ಪ್ರಮಾಣ ಅಧಿಕವಾಗಿದ್ದರೆ ಸಂವಹನ ಸುಲಭವಾಗಲು ಸಾಧ್ಯ. ''ಶಿಷ್ಟತೆಯ ಪ್ರಮಾಣ'' ಅಧಿಕವಾಗಿದ್ದಲ್ಲಿ ಸಂವಹನ ಪ್ರಕ್ರಿಯೆಯಲ್ಲಿ ಅಡತಡೆಗಳು ಸಹಜವಾಗಿ ತೋರುವವು. ಪಠ್ಯದ ಲಿಖಿತ ಭಾಷೆಯ ಸಂವಹನವು ಓದುಗರ ವಾಚನ ಗ್ರಹಿಕೆ ಸಾಮರ್ಥ್ಯಗಳ ಮೇಲೆ ಅವಲಂಬಿತವಾಗಿದೆ. ಏಕೆಂದರೆ ಎರಡೂ ಮನೋ ವೈಜ್ಞಾನಿಕ ಪ್ರಾಧಿನ್ಯಗಳು ಸಂವಹನ ಪ್ರಕ್ರಿಯೆಗೆ ಆಧಾರ ಸ್ತಂಭಗಳು ಹಾಗೂ ಸಮರ್ಧನೀಯ ಅಂಶಗಳು.

'' ಸಂವಹನ ಮಾದರಿಗಳ '' ವೈಚಾರಿಕ ಮುಖ್ಯಾಂಶಗಳು

(1) '' ಏಕಧಾರೆಯ ಸಂವಹನ '' ಮಾದರಿ:- ರವಾನಿಸುವವನು ತನ್ನ ವಾಕ್ ಚಾತುರ್ಯತೆಯಿಂದ ಏಕ ಪ್ರಕಾರವಾಗಿ ವೃತ್ತಾಂತವನ್ನು ಕೇಳುಗನಿಗೆ ತಲುಪಿಸುವುದಾಗಿದೆ. ಇಲ್ಲಿ ಸ್ವೀಕರಿಸುವವನಿಗೆ ಏಕ ಮುಖವಾಗಿ ಗ್ರಹಿಸುವ ಅನಿವಾರ್ಯದ ಸ್ಥಿತಿ ಏರ್ಪಡುತ್ತದೆ. ಮಾಹಿತಿ ಸಿದ್ಧಾಂತಕ್ಕೆ ಹತ್ತಿರವಾಗಿದೆ

ಸಾಂಪ್ರದಾಯಿಕ ಮಾದರಿಯ ಲಕ್ಷಣಗಳಿಂದ ಕೂಡಿದೆ. ಈ ಮಾದರಿಯಲ್ಲಿನ ಮಿತಿಗಳೆಂದರೆ — ರವಾನಿಸುವವನ ' ಇಂಗಿತ ' ಮತ್ತು ಸ್ವೀಕರಿಸುವವನ ಮೇಲಾಗುವ ' ಪರಿಣಾಮ ' ಗಳನ್ನು ಗುರುತಿಸುವುದು ಕಷ್ಟ. ಏಕ ಮುಖವನ್ನು ಬಲಪಡಿಸುವುದಾಗಿದೆ. ಮೂಲಭೂತವಾಗಿ ವ್ಯಕ್ತಿಗತ (ಸ್ವಗತ) ಸ್ವರೂಪದ ಸಂವಹನ ಮಾದರಿ. ಪ್ರಸ್ತುತ ಪ್ರಜಾಪ್ರಭುತ್ವ ಮಾದರಿಯ ವಿದ್ಯಮಾನದ ಸಂದರ್ಭಕ್ಕೆ ಅನ್ವಯಿಸಲಾಗದು.

(2) ' ಸಂವಾದ(ಸಂಭಾಷಣೆ) ಮಾದರಿ ' ಸಂವಹನ — ಸಂದರ್ಭಕ್ಕನುಗುಣವಾಗಿ ರಚನಾತ್ಮಕ ಕ್ರಿಯೆಯಿಂದ ರೂಪಿಸಿದ ಮಾಹಿತಿಯು ಸಂವಹನಶೀಲರ ನಡುವೆ ವಿನಿಮಯವಾಗುವುದರಿಂದ ಸೃಜನಾತ್ಮಕ ಗತಿಶೀಲ ಪ್ರಕ್ರಿಯೆಯಾಗಿದೆ ಎನ್ನುವುದು ' ಸಂವಾದ ' ಸಂವಹನ ಮಾದರಿಯ ವಿಚಾರ.

(3) ' ಪರಸ್ಪರ ಕ್ರಿಯಾ' ಮಾದರಿ ' :— ಸಂವಹನ, ಪರಸ್ಪರ ಅರಿವು (Mutuality) ಮತ್ತು ವಿನಿಮಯ(Reciprocity) ನಂತಹ ಮೂಲಭೂತ ಸಂಗತಿಗಳನ್ನು ತನ್ನದಾಗಿಸಿಕೊಂಡಿದೆ. ವೃತ್ತಾಂತ ಮಾಹಿತಿಯನ್ನು ಬರಮಾಡಿಕೊಳ್ಳುವುದು ಮತ್ತು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುವುದರಿಂದ ಸಂವಹನದ ಪ್ರಾಪಂಚಿಕ ಗುಣವನ್ನು ಈ ಮಾದರಿ ಹೆಚ್ಚು ಬಿಂಬಿಸುತ್ತದೆ.

(4) ' ಸ್ವನಿಯತಿ ' ' ಸಂವಹನ ' ಮಾದರಿ :-- ಪ್ರತಿ ವ್ಯಕ್ತಿಗೂ ಆಗತ್ಯ ಮತ್ತು ನಿಯತವಾದುದು, ಸ್ವಯಂ ಪ್ರಕಾಶವಾದುದು. ಕ್ರಿಯಾತ್ಮಕ ಪರಿವರ್ತನೆಗಾಗಿ ' ನಿರಂತರ ಶೋಧ ' ಮಾಡುವ ಲಕ್ಷಣವನ್ನು ಹೊಂದಿದೆ ಎಂಬುದು ಈ ಮಾದರಿಯ ವಿಚಾರ.

: ಸಂವಹನ ಮತ್ತು ಭಾಷೆ :

ಇವೆರಡರ ಅವಿಭಾಜ್ಯ ಸಂಬಂಧದ ವಿಷಯದಲ್ಲಿ ವಸ್ತು ನಿಷ್ಠರು, ಸಂದೇಹವಾದಿಗಳ ದೃಷ್ಟಿಕೋನಗಳು ಪ್ರಮುಖವಾದವು.

ಉಚ್ಚಾರಣಾ ಘಟಕಗಳಿಗೆ ವ್ಯಾಕರಣ ರೂಪಿಸುವಲ್ಲಿ ಅಥವಾ ಯಾವುದು ಸಾಧು ಮತ್ತು ಅಸಾಧು ಎಂಬುದರ ನಡುವಿನ ವ್ಯತ್ಯಾಸವನ್ನು ವ್ಯಾಖ್ಯಾನಿಸಿ ಸಾಮಾನ್ಯ ಸಂಕೇತವನ್ನು ರೂಪಿಸುವಲ್ಲಿ, ಭಾಷೆ, ಸಂವಹನ ಪ್ರಕ್ರಿಯೆಯಲ್ಲಿ '' ಪೂರ್ವಸ್ಥಿತಿ '' (Pre-condition) ಆಗಿ ಅಗ್ರಸ್ಥಾನ ಪಡೆದಿದೆ ಎಂಬುದು ವಸ್ತು ನಿಷ್ಠರ ವಿಚಾರ.

ಸಂದೇಹವಾದಿಗಳ ವಿಚಾರ:— (ವರ್ತನಾವಾದಿಗಳು, ಸಮಾಜ ಭಾವಿಗಳು Empricists, Nominalists ಮುಂ)

<u>ಸಂವಹನಾತ್ಮಕ ವರ್ತನೆಯ ಭಾಷೆ</u> :— ತಕ್ಷಣದಲ್ಲಿ ಬದಲಾಗುವ ಅಗಣಿತ ಘಟಕಗಳಿಂದ ವೃತ್ತಾಂತದ ಅರ್ಥ ನಿರ್ಧರಿತವಾಗುತ್ತದೆ. ವೃತ್ತಾಂತದ ಆಶಯದಲ್ಲಿ'— ಸಾಂದರ್ಭಿಕ ಸ್ಥಿತಿ, ಹಾಗೂ ನಿರ್ಬಂಧನೆಗಳು ಮತ್ತು ಇತರ ಸಾಂದರ್ಭಿಕ ಸಂಗತಿಗಳು ಪ್ರಧಾನ ಪಾತ್ರ ವಹಿಸುತ್ತವೆ.

<u>ಸಂವಹನದ ನಿರ್ಧಾರಕಾಂಶ ಭಾಷೆ</u> : ಭಾಷೆ ವೃತ್ತಾಂತಗಳ ರಚನೆಯೊಂದಿಗೆ ಸಂಭಾಷಣಾ ಪ್ರಕ್ರಿಯೆಗೆ ಅರ್ಥ ರಚನೆಗಳನ್ನು ನಿರ್ಮಿಸುವದಾಗಿದೆ. ಹಾಗೂ ಸಾಂಕೇತಿಕ ವ್ಯವಸ್ಥೆಯಿಂದ ಕೂಡಿದ ಭಾಷೆ ಸಂವಹನದ ಅಗ್ರ ನೆಲೆಯಾಗಿದೆ.

<u>ಪರಸ್ಪರ ಅವಿಭಾಜ್ಯಗಳು</u> :— 'ಏಕ ಕಾಲಕ್ಕೆ ಸಂಕೇತಗಳ ನಿರ್ಮಾಣ ಹಾಗೂ ವೃತ್ತಾಂತವನ್ನು ಸಂವಹನಗೊಳಿಸುವ ಶಕ್ತಿ ಸಾಮರ್ಥ್ಯವನ್ನು ಹೊಂದಿರುವದರಿಂದ, ಭಾಷೆ ಮತ್ತು ಸಂವಹನಗಳೆರಡೂ ಪರಸ್ಪರ ಅನ್ಯೋನ್ಯವಾದವು. ವಾಸ್ತವ ಸಾಮಾಜಿಕ ಸಂದರ್ಭದಲ್ಲಿ ಸಂವಹನದ ಮೂಲಕ ಪುನ:

ರಚನೆ ಮತ್ತು ಸೃಜನಾತ್ಮಕತೆಯಂತಹ ಪರಿವರ್ತನೆಗಳನ್ನು ಕಾಣುತ್ತದೆ. ಸಂವಹನದ ಅತ್ಯವಾದ ಭಾಷೆ ಸ್ಥಿರತೆಯನ್ನು ಕಾಯ್ದುಕೊಳ್ಳದೆ ಚಲನಶೀಲ ಗುಣ ವಿಶೇಷವನ್ನು ತನ್ನದಾಗಿಸಿಕೊಂಡಿದೆ.

ಸಂಪ್ರದಾಯ, ಸಂಸ್ಕೃತಿಯ ವಾಹಕವಾದ ಭಾಷೆಯ ವೈಶಿಷ್ಟ್ಯ ಕಾರ್ಯಗಳಲ್ಲಿ ಸಂವಹನ ಪ್ರಕ್ರಿಯೆಯೂ ಒಂದಾಗಿದ್ದು ಒಂದು ಜನಾಂಗದ ಸಂಸ್ಕೃತಿಯನ್ನು ಮುಂದಿನ ಜನಾಂಗಕ್ಕೆ ವರ್ಗಾಯಿಸುವ ಮಹತ್ವದ ಕಾರ್ಯವಾಹಕವಾಗಿದೆ.

2.2 ವಾಚನ – ಗ್ರಹಣ – ಸಾಮರ್ಥ್ಯಗಳು

ಆಧುನಿಕ ಸಮಾಜದ ಗತಿಶೀಲತೆಯಲ್ಲಿ ಸಂವಹನ ಪ್ರಕ್ರಿಯೆ ಪ್ರಮುಖ ಅವಿಭಾಜ್ಯ ಅಂಗವಾಗಿದೆ. ತನ್ನ ಹಲವು ಮಾಧ್ಯಮಗಳ ಮುಖಾಂತರ ಅತ್ಯಂತ ವೇಗ ಹಾಗೂ ಸೂಕ್ಷ್ಮ ಗತಿಯಲ್ಲಿ ಕ್ರಿಯಾಶೀಲವಾಗಿರುವುದು ವಿಧಿತ ಸಂಗತಿ. ಒಬ್ಬ ಬೌದ್ಧಿಕ ಕ್ರಿಯಾಶೀಲ ಬರಹಗಾರ ತನ್ನ ಬರಹದ ಮೂಲಕ 'ಏಕ ಕಾಲಕ್ಕೆ ಮಿಲಿಯನ್ 'ಓದುಗರೊಂದಿಗೆ ತನ್ನ ಚಿಂತನಾತ್ಮಕ ವಿಚಾರ ಹಾಗೂ ಸಾಹಿತ್ಯಿಕ ಕೊಡುಗೆಗಳನ್ನು ಹಂಚಿಕೊಳ್ಳಬಲ್ಲ, 'ಓದುಗರ ವಾಚನ ಕೌಶಲ್ಯ, ನೂತನ ಮಾಹಿತಿ ವೃತ್ತಾಂತವನ್ನು ಸ್ವೀಕರಿಸುವಲ್ಲಿ ಸಮರ್ಥವಾಗಿರಬೇಕಾಗಿರುತ್ತದೆ. ಅಷ್ಟೇ ಪ್ರಮಾಣದ ಗ್ರಹಿಕೆಯು ಅಗತ್ಯವಾದುದು. ಈ ಎರಡು ಸಾಮರ್ಥ್ಯಗಳು ಅಧ್ಯಯನ ಶೀಲರ ಹಾಗೂ ಸರ್ವ ಸಾಮಾನ್ಯರ ಜೀವಿತದಲ್ಲಿ, ಬೌದ್ಧಿಕ ಗುರಿ ಸಾಧನೆಯಲ್ಲಿ ಪರಿಣಾಮ ಕಾರಿಯಾದ ಪಾತ್ರ ವಹಿಸುತ್ತವೆ.

ವಾಚನ ಒಂದು ಭಾಷಿಕ ಸಾಮರ್ಥ್ಯ ಹಾಗೂ ಮನೋಜೈವಿಕ ಚಟುವಟಿಕೆ. '' ಪತ್ರದಲ್ಲಿಯ ಲಿಪಿ ಸಂಕೇತಗಳು ಕಣ್ಣುಗಳ ಮೂಲಕ ದೃಶ್ಯ ಸಂಕೇತಗಳಾಗಿ ಅಲ್ಲಿನ ವಿಷಯ ವಸ್ತು, ವಿಚಾರಗಳು ಮೆದುಳಿನಲ್ಲಿ

ಗ್ರಹಿತವಾಗುವುದರೊಂದಿಗೆ ಧ್ವನಿ ಪಟಲಗಳ ಸಹಾಯದಿಂದ, ಮೌಖಿಕ
ಧ್ವನಿ ಸಂಕೇತಗಳಾಗಿ ಪರಿವರ್ತಿತವಾಗಿ ಅಭಿವ್ಯಕ್ತವಾಗುವ ಚಟುವಟಿಕೆಯೇ
ವಾಚನ'' ಅಥವಾ 'ಓದುಗಾರಿಕೆ ಅಥವಾ ಬಾಯ್ತೆರೆದು'' ಎಂದು ಕರೆಯು
ವದುಂಟು. ಸ್ಥೂಲವಾಗಿ, ''ಶಾರೀರಿಕ, ಮೌಖಿಕ ಅಂಗಗಳು ಯಾವುದೇ
ರೀತಿಯ ಚಲನವಲನಗೊಳಗಾಗದೇ ಪಠ್ಯದ ಲಿಪಿ ಸಂಕೇತಗಳಲ್ಲಿ ಅಡಗಿದ
ವಿಚಾರ, ವೃತ್ತಾಂತ, ಕಲ್ಪನೆಗಳ ಮೂಲಕ, ಗ್ರಹಿತವಾಗಿ, ಧ್ವನಿರೂಪದಲ್ಲಿ
ವ್ಯಕ್ತವಾಗದೇ ಇರುವ ಚಟುವಟಿಕೆ ಅಂತರ್ಗತ ವಾಚನ'' ಮೌನ 'ಓದು
ಎನಿಸುವುದು'' ಸಂವಹನ ಪ್ರಕ್ರಿಯೆಯಲ್ಲಿ ವಾಚನ ಸಾಮರ್ಥ್ಯ ಗುರು
ತರವಾದುದು. ಇದು(ವಾಚನೀಯತೆ) ಬುಗೊಂಡಂತೆ ಪಠ್ಯದ ಬರಹದಲ್ಲಿ,
'ಏಕಾಗ್ರತೆ ಮೂಡುತ್ತಾ, ಗ್ರಹಿಕೆಯ ಪ್ರಮಾಣ ದರ ಅಧಿಕವಾಗಲು ಸಹಾಯ
ಕಾರಿಯಾಗುತ್ತದೆ. ಇವೆರಡು ಸಾಮರ್ಥ್ಯಗಳ ಸಂಬಂಧದ ಕುರಿತು, ನಡೆದ
ಪಾಶ್ಚಿಮಾತ್ಯರ ಅಧ್ಯಯನಗಳಿಂದ — ಇವೆರಡರ ನಡುವೆ ನೇರ ಪರಸ್ಪರ
ಅನುಪಾತ ಸಂಬಂಧವಿಲ್ಲವೆನ್ನುವುದು ಕಂಡು ಬಂದಿದೆ.

ವಾಚನ ವೇಗ ಪ್ರಮಾಣ ದರ ಅಧಿಕವಾದಂತೆ ಗ್ರಹಿಕೆಯ
ಪ್ರಮಾಣ ದರ ಋಣ ದಿಶೆಗೆ ಸಾಗುವಂತೆ, ಗ್ರಹಿಕೆಯ ದರ ಅಧಿಕವಾದಷ್ಟು
ವಾಚನ ವೇಗ ಋಣಾತ್ಮಕತೆಯೆಡೆಗೆ, ಸಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂ
ತಿಲ್ಲ.

Skimming ('ಹಾರಿಸಿ 'ಓದು.')ನಂತಹ ಅಧ್ಯಯನ ತಂತ್ರವನ್ನು ಬಳಸಿದ
ವೇಗ 'ಓದುಗರ ವಾಚನ ವೇಗ ಹೆಚ್ಚಿದಂತೆ ಗ್ರಹಿಕೆಯ ಪ್ರಮಾಣ ಹೆಚ್ಚುವ
ಸಂದರ್ಭಗಳುಂಟು. ಕೆಲವು ಸಂದರ್ಭದಲ್ಲಿ ಆರಂಭಿಕ ನಿಧಾನ 'ಓದುಗರ ಗ್ರಹಿಕೆಯ
ಪ್ರಮಾಣ, ಸರಾಸರಿ ದರಗಿಂತಲೂ ಅಧಿಕತೆಯನ್ನು ತೋರಿಸಬಹುದು.
ಅದೇ ರೀತಿ ಕಲವು ಸಂದರ್ಭದಲ್ಲಿ ಗ್ರಹಿಕೆಯ ಪ್ರಮಾಣ — ಸರಾಸರಿಯಾಗುವ
(— ಶೀ) ಸಂಭವಗಳುಂಟು. ವೇಗದ 'ಓದುಗರ ತಮ್ಮ ವಾಚನ ದರದಲ್ಲಿ
ಅಧಿಕತೆಯನ್ನು ಸಾಧಿಸಿಕೊಂಡಂತೆ, ಗ್ರಹಿಕೆಯ ಪ್ರಮಾಣದಲ್ಲಿ (+ ಸರಾಸರಿ
ಪ್ರಮಾಣಕ್ಕಿಂತ) ಹೆಚ್ಚಳವನ್ನು ಕಂಡುಕೊಳ್ಳಲು ಸಾಧ್ಯವಾಗಲು ಬಹುದು.

ಆದರೆ ಸರಾಸರಿ ಪ್ರಮಾಣಕ್ಕೆ ನೇತ್ಯಾತ್ಮಕ ಆಗಲಾರದು. ಕೆಲವು ಸಂದರ್ಭದಲ್ಲಿ ನಿಧಾನ 'ಓದುಗರು ತಮ್ಮ ವಾಚನ ವೇಗವನ್ನು (WORDS PER MINUTE) ತ್ವರಿತ ಗತಿಯಲ್ಲಿ ಹೆಚ್ಚಿಸಿಕೊಂಡಿದ್ದಾದರೆ, ಅವರ ಗ್ರಹಿಕೆಯ ಪ್ರಮಾಣ ತತ್ಕಾಲೀನ ಪ್ರಮಾಣ ದರವನ್ನು ಕಾಯ್ದುಕೊಳ್ಳುವ ಸಂಭವವುಂಟು.

ವಾಚನ ಗ್ರಹಿಕೆಯನ್ನು ವ್ಯಾಖ್ಯಾನಿಸುವುದು ಕಷ್ಟಸಾಧ್ಯ ಲೇಖಕನ ಮೆದುಳಿನಿಂದ ಸಂಗತಿ, ಅಥವಾ ವಿಚಾರಗಳು ಬರಹದ ವಾಚನದ ಮೂಲಕ 'ಓದುಗರ ಮಿದುಳಿಗೆ ವರ್ಗಾಯಿಸಲ್ಪಟ್ಟು ಅಲ್ಲಿ ಧೃಢೀಕೃತವಾಗುವ ಮನೋವೈಜ್ಞಾನಿಕ ಚಟುವಟಿಕೆಯಾಗಿದೆ, ಸಂವಹನ ಹಾಗೂ ವಾಚನ ಪ್ರಕ್ರಿಯೆಗೆ ಸಾರ್ಥಕತೆಯನ್ನು ಒದಗಿಸುತ್ತದೆ. ಈ ಪ್ರಕ್ರಿಯೆ ವಿಚಾರ ಗಳನ್ನಾಗಲೀ, ಸಂಗತಿಗಳನ್ನಾಗಲೀ ಲಿಪಿ ಸಂಕೇತಗಳ ಮೂಲಕ ಬರವಣಿಗೆ ಯಲ್ಲಿ, ಲೇಖಕನ ಬರಹದ ರೂಪದಿಂದ ಹಿಡಿದು ಬಿಡಿಸಲ್ಪಟ್ಟ, ಮುದ್ರಿತ ರೂಪ ವಾಗಿ, 'ಓದುಗನ ಕೈ ಸೇರುವಾಗ ಅನೇಕ ಬರವಣಿಗೆಯ ರೂಪ ದೋಷ ಗಳು ಆಗುವ ಸಾಧ್ಯತೆಯುಂಟು. ಈ ಹಿನ್ನೆಲೆಯಲ್ಲಿ ಬರವಣಿಗೆಯ ಸಂವಹನ ಮಾಧ್ಯಮ ಮೌಖಿಕ ಅಭಿವ್ಯಕ್ತಿಗಿಂತ ಕ್ಲಿಷ್ಟವಾದುದು. ಆದರೆ ಇದು ಲೇಖಕನಿಂದ 'ಓದುಗನಿಗೆ ಅವನ ಅಪೇಕ್ಷೆಗಳನ್ನು ಮತ್ತು ಅಗತ್ಯಗಳನ್ನು ಸ್ಪಷ್ಟವಾಗಿ ಸರಳವಾಗಿ ಪೂರೈಸಲಾರದು. ಈ ಗ್ರಹಣ ಶಕ್ತಿ ವಾಚನ ಸಾಮರ್ಥ್ಯದ ಮೇಲೆ ಅಸ್ತಿತ್ವ ಹೊಂದಿದ್ದರೂ, ಪಠ್ಯದ ಬರವಣಿಗೆಯಲ್ಲಿಯ ವಸ್ತು ನೆಲೆಯ ಸಂಗತಿಗಳು, ವ್ಯಕ್ತಿ ನೆಲೆಯ ವಿಚಾರಗಳು 'ಓದುಗನಿಂದ ಸ್ವೀಕೃತಗೊಂಡು, ಅವನ ಮಿದುಳಿನಲ್ಲಿ ಸ್ಥಿರವಾಗಿರುವ ಸಾಮರ್ಥ್ಯವಾಪರೂ, ಶಬ್ದಾವಳಿ, ಸಂದರ್ಭ, ಮುಖ್ಯ ಅಂಶಗಳಾಗುತ್ತವೆ. ಮೂಲಭೂತ ಪ್ರಾಂಲ್ಪನೆಯಾಗಿ — ಬರಹ ಗಾರನ ಬರವಣಿಗೆಯ ಭಾಷೆ ಹಾಗೂ 'ಓದುಗರ ಭಾಷೆ ಸಾಧ್ಯವಾದಷ್ಟು ಪರಸ್ಪರ

ಸಾಮ್ಯವಾಗಿದ್ದರೆ (Mutual intelligibility) ವಾಚನ ಗ್ರಹಿಕೆ ಸುಲಭವಾಗಲಿಕ್ಕೆ ಸಹಾಯಕಾರಿಯಾಗುತ್ತದೆ. ಬರವಣಿಗೆಯ (ಭಾಷೆಯಲ್ಲಿ) ನಿರೂಪಣೆಯಲ್ಲಿ 'ಕ್ಲಿಷ್ಟತೆಯ''' ಪ್ರಮಾಣ'' ಅಧಿಕವಾಗಿದ್ದರೆ ಗ್ರಹಿಕೆ ಕ್ಲಿಷ್ಟವಾಗುವ ಸಾಧ್ಯತೆಯುಂಟು. ನಿಘಂಟು ಉಪಯೋಗ, ಅಗತ್ಯ ಮಾರ್ಗದರ್ಶನ ಪಡೆದರೂ, ದೀರ್ಘ ಅಧ್ಯಯನಾನುಭವದಿಂದ ಗ್ರಹಿಕೆ ಸುಲಭ ಸಾಧ್ಯ.

ಗ್ರಹಿಕೆಯ ವಿಧಗಳು :- ಸಾಮಾನ್ಯವಾಗಿ 'ಓದುಗರಿಗೆ ಪಠ್ಯ ಗ್ರಹಿತವಾಗುವುದು 2 ನೆಲೆಗಳಲ್ಲಿ :

1) ವಸ್ತುನೆಲೆಯ ಗ್ರಹಿಕೆ. 2) ವ್ಯಕ್ತಿನೆಲೆಯ ಗ್ರಹಿಕೆ.

'ಓದುಗ ಪಠ್ಯ ವಾಚನದ ಸಂದರ್ಭದಲ್ಲಿ ಪ್ರಥಮ ಆದ್ಯತೆಯಾಗಿ ಮಾಹಿತಿಯಾಧಾರಿತ ವಸ್ತು ನಿಷ್ಠ ಸಂಗತಿಗಳನ್ನು (ಘಟನೆ, ಮಾಹಿತಿ, ವಿಶೇಷ ಪರಿಕಲ್ಪನೆಗಳು ಮುಂ) ಗ್ರಹಿಸುವಲ್ಲಿ ಕಾತುರನಾಗಿರುತ್ತಾನೆ. ದ್ವಿತೀಯ ಆದ್ಯತೆಯಾಗಿ ಲೇಖಕನ ಮುಖ್ಯ ಆಶಯ, ವಿಚಾರ (ಉದ್ದೇಶ ತಿರುಳು, ಮುಖ್ಯಾಂಶ) ಗಳನ್ನು ಅರಿಯಲು ಪ್ರಯತ್ನ ಮಾಡುವವನು. ಈ ಗ್ರಹಿಕೆಯ ಫಲತಾಂಶವನ್ನು ಕಂಡುಕೊಳ್ಳುವುದು ಸ್ವಲ್ಪ ಕಷ್ಟಕರವಾದುದು. ಇದು 'ಓದುಗರ ಭಾಷಿಕ ಸಾಮರ್ಥ್ಯ, ತರ್ಕ, ಚಿಂತನೆಯ ಮಟ್ಟಗಳ ಮೇಲೆ ಅವಲಂಬಿತವಾದುದು. ಆದರೆ ವಸ್ತು ನೆಲೆಯಿಂದ ಗ್ರಹಿತವಾದ ಸಂಗತಿಗಳು ಸಾರ್ವತ್ರಿಕವಾದವು. ಆದರೆ ವ್ಯಕ್ತಿ ನಿಷ್ಠ ಗ್ರಹಿಕೆಯಾಧಾರಿತವಾಗಿ ಬಂದ ವೈಚಾರಿಕ ಪ್ರತಿಕ್ರಿಯೆಗಳು ಹಲವು ರೀತಿಯಲ್ಲಿ ಬಂದರೆ 'ನಿರ್ದಿಷ್ಟ 'ಓದುಗನ ವ್ಯಕ್ತಿ ನಿಷ್ಠ ಗ್ರಹಿಕೆಯ ದರವನ್ನು ಗುರುತಿಸುವುದು ಕಷ್ಟವಾಗುತ್ತದೆ. ಇಂತಹ ಸಂದರ್ಭಗಳಲ್ಲಿ 'ಓದುಗರ ಹಾಗೂ ಶಿಕ್ಷಕರ ನಡುವೆ ಪರಸ್ಪರ ಸಮರ್ಪಕ ಚರ್ಚೆ, ಸಂವಾದಗಳಿಂದ ನಿರ್ಣಯಕ್ಕೆ ಬರುವುದು ಸೂಕ್ತವೆಂದು ತೋರುತ್ತದೆ. ಆದರೆ ವಸ್ತು ನಿಷ್ಠ ಗ್ರಹಿಕೆಯ ದರವನ್ನು ಸುಲಭವಾಗಿ ನಿರ್ಧರಿಸಲು ಸಾಧ್ಯ. ಆದ್ದರಿಂದ ಇಂತಹ ವಿಶೇಷ ರೀತಿಯ ಪ್ರಾಯೋಗಿಕ

ಅಧ್ಯಯನಕಾರರು ಅಥವಾ ಪರೀಕ್ಷಕರು ವಸ್ತು ನಿಷ್ಠ ಗ್ರಹಿಕೆಗೆ ಪ್ರಥಮ ಗಮನಹರಿಸಿ ಅನುಕ್ರಮದಲ್ಲಿ ವ್ಯಕ್ತಿ ನಿಷ್ಠ ಗ್ರಹಿಕೆಗೆ ಆದ್ಯತೆ ಕೊಟ್ಟು ಮುಂದುವರಿಯಬಹುದು.

ಉನ್ನತ ಗ್ರಹಿಕೆ :— 'ಗ್ರಹಿಕೆಯ ಮಟ್ಟ'ವು ಪ್ರಮುಖವಾಗಿ ವಿದ್ಯಾರ್ಥಿಗಳು ಶಿಕ್ಷಕರೂ ಗಮನಿಸಬೇಕಾದುದು. ಶೇ.70 ಸರಾಸರಿ ಗ್ರಹಿಕೆಯ ಪ್ರಮಾಣದ ಹಿನ್ನೆಲೆಯಲ್ಲಿ —'ಓದುಗರ' ಪ್ರಗತಿ ದಾಖಲಾತಿ'' ಪತ್ರ''ದಲ್ಲಿ ಪ್ರಾಯಶಃ ಗ್ರಹಿಕೆಯ ಪ್ರಮಾಣ ದರ ಶೇ.80 ಆಗಿದ್ದರೆ, ಗ್ರಹಿಕೆಯ ಮಟ್ಟ ಸ್ವಲ್ಪ ಅಧಿಕವಾಗಿದೆ ಎಂದು ನಿರ್ಧರಿಸಬಹುದು. ಒಂದು ವೇಳೆ ಶೇ.90 ಅಥವಾ ಶೇ.100 ಗ್ರಹಿಕೆಯ ಪ್ರಮಾಣ ತೋರಿಸಿದ್ದರೆ, 'ಓದುಗನ ಅವಧಾನ ಮುಖ್ಯವಾಗಿ ಗ್ರಹಿಕೆಯತ್ತ ಕೊಟ್ಟಿದ್ದು ಕಂಡು ಬಂದರೂ, ಅವನ ವಾಚನ ವೇಗದಲ್ಲಿ ಕ್ಷೀಣತೆ ಕಂಡು ಬರಲು ಸಾಧ್ಯ.

'ವಾಚನ ಗ್ರಹಿಕೆ' ಪರೀಕ್ಷಣದ ಮುಖ್ಯ ಉದ್ದೇಶ :

ಆರಂಭಿಕ ವಾಚನ ಪ್ರಮಾಣ ದರಕ್ಕಿಂತ'' ಆವರ್ತನ'' ವಾಚನ' ಪ್ರಮಾಣ ದರಗಳು (W.P.M.) ಅಧಿಕವಾಗುವಂತೆ, ಈ ಆವರ್ತನ ವಾಚನ ವೇಗ ಪ್ರಮಾಣದ ಅಧಿಕತೆಯಷ್ಟೇ 'ಆವರ್ತನ ವಾಚನ ಗ್ರಹಿಕೆ' ಪ್ರಮಾಣ ಕಾಯ್ದುಕೊಳ್ಳಲು ಅಸಾಧ್ಯವಾದರೂ, ಇವೆರಡರಲ್ಲಿ ಆರಂಭಿಕ ಅಥವಾ ಸರಾಸರಿ ಪ್ರಮಾಣ ದರವನ್ನು ನಿರಂತರವಾಗಿ ಉಳಿಸಿಕೊಳ್ಳಲು ಪ್ರಯತ್ನಿಸುವುದಾಗಿದೆ.

ಉದಾ:	ಪ್ರಥಮ ವಾರ (ಆರಂಭಿಕ)	ತುರೀಯ ವಾರ (ಕೊನೆ)	(ಗುರಿ) ಸರಾಸರಿ
	150 W.P.M.	200W.P.M.	200W.P.M.
	70% Comp.	50% Comp.	70 %

ಯಾವುದೇ ಸಂದರ್ಭದಲ್ಲಿಯೂ ವಾಚನ – 150 W.P.M. ಹಾಗೂ ಗ್ರಹಿಕೆಯ ಪ್ರಮಾಣ ಶೇ –70 ಆಗದಂತೆ ಸರಾಸರಿ ಪ್ರಮಾಣದ ಸಮತೋಲನಕ್ಕೆ ಮುಖ್ಯ ಗಮನ ಕೊಡುವದು ಶಿಕ್ಷಕ ವಿದ್ಯಾರ್ಥಿಗಳ ವೈಯಕ್ತಿಕ ಹಾಗೂ ಸಾಮೂಹಿಕ ಅನಿವಾರ್ಯ ಜವಾಬ್ದಾರಿಯೆಂದು ತೋರುತ್ತದೆ. ವಿಶೇಷವಾಗಿ ಶಾಲಾ ವಾತಾವರಣದಲ್ಲಿ ಏಕ ಮುಖವಾಗಿ(ಕಂಠಪಾಠಕ್ಕೆ) ವಾಚನ ವೇಗಕ್ಕೆ ಹೆಚ್ಚು ಒತ್ತುಕೊಟ್ಟು ಮಕ್ಕಳಿಗೆ ಒತ್ತಡವನ್ನಾಗಲೀ, ಪ್ರಚೋದನೆಯನ್ನಾಗಲಿ ಕೊಡದೆ ಗ್ರಹಿಕೆಯ ಪ್ರಮಾಣ ದರವು ಸಾಧ್ಯವಾದಷ್ಟು 'ಸರಾಸರಿ' ಪ್ರಮಾಣಕ್ಕೆ ಸರಿ ಜೋಡಿಯಾಗಿ ವ್ಯಕ್ತವಾಗುವಂತೆ, ಸಮತೋಲನ ಕಾಯ್ದುಕೊಳ್ಳುವದು ಪ್ರಮುಖ ಅಂಶವಾಗಿರಬೇಕು.

<u>ಗುಣಾತ್ಮಕ ವೃದ್ಧಿಗೆ ಸಹಾಯಕವಾಗುವ ಚಟುವಟಿಕೆಗಳು.</u>

1) <u>ಆವರ್ತನ 'ಓದಿನ ರೂಢಿ</u> :– ಸಾಮೂಹಿಕ ಸಂದರ್ಭದಲ್ಲಿ ಮೌನವಾಗಿ , ವೈಯಕ್ತಿಕ ಸಂದರ್ಭದಲ್ಲಿ, ಸಂದರ್ಭ, ಆಸಕ್ತಿಗನುಗುಣವಾಗಿ ಪುನರಾವರ್ತನ ವಾಚನ ವಿಶೇಷವಾಗಿ ಗ್ರಹಣ ಸಾಮರ್ಥ್ಯದ ಬೆಳವಣಿಗೆಗೆ ಸಹಾಯಕಾರಿ. ಆರಂಭಿಕ ವಾಚನದಲ್ಲಿ ಆದ ಸ್ಥೂಲ ದೋಷಗಳು ಹಾಗೂ ಗ್ರಹಿಕೆಯ ಪ್ರಮಾಣ ದರದ ಹಿಂದೇಳಿಕೆ, ವಿಶೇಷವಾಗಿ, ವ್ಯಕ್ತಿ ನೆಲೆಯ ಗ್ರಹಿಕೆಯಾಧಾರಿತ ಪ್ರತಿಕ್ರಿಯೆಗಳಲ್ಲಿ ಆದ ದೋಷಗಳನ್ನು, ಪರಸ್ಪರ ಸೂಕ್ತ ಆರೋಗ್ಯಕರ ಚರ್ಚೆ ಸಂವಾದದೊಂದಿಗೆ ಸುಧಾರಿಸಿಕೊಳ್ಳುವಲ್ಲಿ, ಈ ಆವರ್ತನ ವಾಚನ ರೂಢಿ ತುಂಬಾ ಅಗತ್ಯವೆಂದು ಕಾಣುತ್ತದೆ. ಹಾಗೂ 'ಓದುಗರ ವಸ್ತು ನೆಲೆಯ ಗ್ರಹಿಕೆ ದೃಢೀಕರಣಗೊಳ್ಳಲು ಸಾಧ್ಯವಾಗುತ್ತದೆ.

2) <u>ಸ್ವ ತಿದ್ದುಪಡಿ ವಿಧಾನ</u> :– ಆವರ್ತನ ವಾಚನ ರೂಢಿಯ ಜೊತೆಗೆ ಈ ತಂತ್ರವನ್ನು ಶಿಕ್ಷಕನ ಜಾಗರೂಕ ಕಾಳಜಿ ಪೂರ್ಣ ಮೇಲ್ವಿಚಾರಣೆ, ಹಾಗೂ ವಿದ್ಯಾರ್ಥಿಗಳ ಆಸಕ್ತಿ ಹಾಗೂ ಪ್ರಾಮಾಣಿಕತೆಗಳ ಹಿನ್ನೆಲೆಯಲ್ಲಿ ವಿಶೇಷವಾಗಿ ಆಚರಣೆಯಲ್ಲಿ ತರುವದು ಮನೋವೈಜ್ಞಾನಿಕವಾಗಿ ಸೂಕ್ತವೆಂದು ಕಾಣುತ್ತದೆ.

ವಾಚನ ಗ್ರಹಿಕೆ ಸಾಮರ್ಥ್ಯಗಳನ್ನು ನಿರಂತರವಾಗಿ ಕಾಯ್ದು ಕೊಳ್ಳುವಲ್ಲಿ, 'ಓದುಗರು ತಮ್ಮ ತಮ್ಮ ಪ್ರಗತಿಯ ದರಗಳನ್ನು (ಸಾಧ್ಯ ಸಹಾಯ ಪಡೆದು) 'ಪ್ರಗತಿ ದಾಖಲಾತಿ ಪತ್ರ'ದಲ್ಲಿ ತಾವೇ ದಾಖಲಿಸಿ ಕೊಳ್ಳುವಂತೆ ನೋಡಿಕೊಳ್ಳುವದರಿಂದ ಸ್ವ ಹಾಗೂ ಬಾಹ್ಯ ಪ್ರೇರಣೆ ಹೊಂದಿ ಗ್ರಹಿಕೆಯ ಬಲವರ್ಧನೆಗೆ ಸಹಾಯಕಾರಿ ಹಾಗೂ 'ಓದುಗನಿಗೆ ತಮ್ಮ '' ವಾಚನ ಗ್ರಹಿಕೆಯ ಕ್ರಿಯಾಸ್ಥಿತಿ '' (Reading Comprehensive Performance) ಕಂಡುಕೊಳ್ಳಲು ಅವಕಾಶ ದೊರೆತು, ಧನಾತ್ಮಕ ಆರೋಗ್ಯ ಕರ ಮನೋಭಾವದ ಪ್ರಗತಿಗೆ ಪ್ರಚೋದನೆ. ಈ ರೀತಿ Feed Back ನ ಮೂಲಕ ಬೋಧನ – ಕಲಿಕಾ ಪ್ರಕ್ರಿಯೆಯಲ್ಲಿ 'ಓದುಗರಿಗೂ, ಶಿಕ್ಷಕರಿಗೂ ತಾವು ತಮ್ಮ ಕಾರ್ಯದಲ್ಲಾದ ಸಾಧಕ – ಬಾಧಕ ಅಂಶಗಳನ್ನು ಗುರುತಿಸಿ ಸುಧಾರಿಸಿಕೊಳ್ಳಲು, ಶಿಕ್ಷಕನಿಗೆ ನೈದಾನಿಕ ಪರೀಕ್ಷಣ ಹಾಗೂ ಪರಿಹಾರ ಬೋಧನ(Dignostic test and remedial teaching or instruction) ಯನ್ನು ಅನುಷ್ಠಾನಕ್ಕೆ ತರಲು ಅನುಕೂಲ. ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು(Academic Performance) ಗುರುತಿಸುವದರೊಂದಿಗೆ ಸುಪ್ತ ಸಾಮರ್ಥ್ಯಗಳ ಗುಣಾತ್ಮಕ ವೃದ್ಧಿಗೆ ಶಿಕ್ಷಕ ಕ್ರಿಯಾಶೀಲ ಪ್ರೇರಕನಾಗುವನು. ಅಲ್ಲದೇ ಈ ವಿಧಾನಗಳು ಶೈಕ್ಷಣಿಕ ವಾತಾವರಣದಲ್ಲಿ ಶಿಕ್ಷಕನಿಗೂ, ವಿದ್ಯಾರ್ಥಿಗಳಿಗೂ ಹಲವು ರೂಪದಲ್ಲಿ ಸಹಾಯಕ್ಕೆ ಬರುತ್ತವೆ.

ಪಠ್ಯದ ನಿರೂಪಣೆಯಲ್ಲಿ '' ಅರ್ಥ ಘಟಕಗಳು ''

ಸಾಂದರ್ಭಿಕವಾಗಿ ಭಾಷೆಯ ಕನಿಷ್ಠ ರಚನೆಯಾದ ಅಕ್ಷರ, ಗರಿಷ್ಠ ರಚನೆಯಾದ ವಾಕ್ಯ, (ವಾಕ್ಯವೃಂದ, ಪ್ರಕರಣ) ರಚನೆಗಳೆಲ್ಲವೂ 'ಅರ್ಥ ಘಟಕಗಳಾಗಿ'ದ್ದು, ಪೂರ್ಣ ಸ್ವರೂಪದ ಅಸ್ತಿತ್ವವನ್ನು ಭಾಷಾ ವಲಯದಲ್ಲಿ ಪಡೆದಿವೆ. ಬರವಣಿಗೆಯಲ್ಲಾಗಲೀ, ಅಥವಾ ಮೌಖಿಕ -

ಅಭಿವ್ಯಕ್ತಿಯಲ್ಲಾಗಲೀ, ಅರ್ಥ ಪೂರ್ಣವಾಗಿ, ವ್ಯವಸ್ಥಿತ ಸಂಯೋಜನಾ ಕ್ರಮದಲ್ಲಿ ಸಂಘಟಿತವಾಗಿರುತ್ತವೆ. (ಗೆಸ್ಟಾಲ್ಟ್ ಸಿದ್ಧಾಂತ) ಹಾಗೂ ಸಾಂದರ್ಭಿಕವಾಗಿ ಅರ್ಥ ಸುಸ್ಪಷ್ಟತೆಗೆ ಕಾರಣವಾಗುತ್ತವೆ ಎಂಬ ಮನುಷ್ಯ ಮೆದುಳಿನ ಪೂರ್ಣ ಸ್ವರೂಪದ ಕಾರ್ಯ ವೈಖರಿಯನ್ನು ಓದುಗ ಅರಿತುಕೊಂಡಿದ್ದರೆ ಬರವಣಿಗೆಯಲ್ಲಿ ಅರ್ಥದ ನಿಲುವನ್ನು (ಕೇಂದ್ರ) ಗುರುತಿಸಿ (ನಿಕಟತಮ ಸಂಬಂಧ) ಗ್ರಹಿಸಲು ಸಾಧ್ಯವಾಗುತ್ತದೆ. ಹಾಗೂ '' ಕೇವಲ ಕೆಲವು ಶಬ್ದಗಳು ಮಾತ್ರ ಸಮರ್ಪಕ ಅರ್ಥ ಹೊಂದಿ ಭಾಷಾ ವಲಯದಲ್ಲಿ ಪ್ರಯೋಗಕ್ಕೆ ಸಾಧುವಾಗಿರುತ್ತವೆ. '' ಎನ್ನುವ ತಪ್ಪು ಕಲ್ಪನೆಯನ್ನು ಹೋಗಲಾಡಿಸಲು ಅನುಕೂಲಕರವಾಗಿರುತ್ತವೆ.

ವಾಚನದಲ್ಲಿ ಕಣ್ಣಿನ ಒಂದು ನಿಲುಗಡೆಗೆ (ಫಿಕ್ಸೇಷನ್) ಹೆಚ್ಚು ಪದಗಳು ಒಳಪಡುತ್ತಿದ್ದರೂ, ಅದೇ ಕಾಲಕ್ಕೆ ಅಲ್ಲಿನ ಅರ್ಥವು ಗ್ರಹಿಸಲ್ಪಟ್ಟಾಗ ಆ ನಿರ್ದಿಷ್ಟ ಓದುಗನ ಕಣ್ಣಲುವೆಯು (ನಿಲುಗಡೆ) ಸಾಮರ್ಥ್ಯ ತಕ್ಕುದಾಗಿದ್ದು, ಗ್ರಹಣ ಸಾಮರ್ಥ್ಯದ ದರದ ಅಧಿಕತೆಯನ್ನು ಎತ್ತಿ ಹೇಳುತ್ತದೆ. ಈ ನೆಲೆಯಲ್ಲಿ '' ಗ್ರಹಣ ಸಾಮರ್ಥ್ಯವು ವಾಚನ ಕೌಶಲ್ಯಕ್ಕಿಂತ ಸೂಕ್ಷ್ಮ ಮನೋವೈಜ್ಞಾನಿಕ ಚಟುವಟಿಕೆ '' ಯಾಗಿದೆ ಹಾಗೂ '' ವಿಶಿಷ್ಟ ಪ್ರಾವೀಣ್ಯ '' ವನ್ನು ಓದುಗನಿಂದ ಅಪೇಕ್ಷಿಸುತ್ತದೆ.

ಆರಂಭಕ ವಾಚಕರ ಗ್ರಹಿಕೆಯಲ್ಲಿ ದೋಷಗಳಿರುವದು ಸಹಜವಾದುದು. ಇವರಲ್ಲಿ '' ವ್ಯಕ್ತಿನಿಷ್ಠ ಗ್ರಹಿಕೆಯ ದರಕ್ಕಿಂತ, ವಸ್ತುನಿಷ್ಠ ಗ್ರಹಿಕೆಯ ದರ ಅಧಿಕವಾಗಿರಲು '' ಸಾಧ್ಯ. ಏಕೆಂದರೆ, ಇವರ ವಾಚನ ಕ್ರಿಯೆ ಚಿಕ್ಕ ಚಿಕ್ಕ ಘಟಕಗಳೊಂದಿಗೆ ಆಸಕ್ತಿ ಹೊಂದಿದೆ. ಗ್ರಹಿಕೆಯಾಗುವುದು, ಚಿಕ್ಕ ಚಿಕ್ಕ ಘಟಕಗಳೊಂದಿಗೆ, ಸಂದರ್ಭ, ಸೂಕ್ಷ್ಮ ಸಂವೇದನಾ ಸಾಮರ್ಥ್ಯಗಳು ಅವಶ್ಯವೆಂದು ತೋರುತ್ತದೆ. ವಾಚನ ವೇಗ ಹಾಗೂ ಗ್ರಹಿಕೆಗೆ ಪ್ರೌಢತೆ ಅಗತ್ಯ. ಅದಕ್ಕೆ ಹಿನ್ನೆಲೆಯಾಗಿ ಅವನ 'ಬುದ್ಧಿಮತ್ತೆ.......

ಅಭಿವ್ಯಕ್ತಿಯಲ್ಲಾಗಲೀ, ಅರ್ಥ ಪೂರ್ಣವಾಗಿ, ವ್ಯವಸ್ಥಿತ ಸಂಯೋಜನಾ ಕ್ರಮದಲ್ಲಿ ಸಂಘಟಿತವಾಗಿರುತ್ತವೆ.(ಗೆಸ್ಟಾಲ್ಟ್ ಸಿದ್ಧಾಂತ) ಹಾಗೂ ಸಾಂದರ್ಭಿಕವಾಗಿ ಅರ್ಥ ಸಫಲತೆಗೆ ಕಾರಣವಾಗುತ್ತವೆ ಎಂಬ ಮನುಷ್ಯ ಮೆದುಳಿನ ಪೂರ್ಣ ಸ್ವರೂಪದ ಕಾರ್ಯ ವೈಖರಿಯನ್ನು 'ಓದುಗ ಅರಿತುಕೊಂಡಿದ್ದರೆ ಬರವಣಿಗೆಯಲ್ಲಿ ಅರ್ಥದ ನಿಲುವನ್ನು(ಕೇಂದ್ರ)ಗುರುತಿಸಿ(ನಿಕಟತಮ ಸಂಬಂಧ) ಗ್ರಹಿಸಲು ಸಾಧ್ಯವಾಗುತ್ತದೆ. ಹಾಗೂ '' ಕೇವಲ ಕೆಲವು ಶಬ್ದಗಳು ಮಾತ್ರ ಸಮರ್ಪಕ ಅರ್ಥ ಹೊಂದಿ ಭಾಷಾ ವಲಯದಲ್ಲಿ ಪ್ರಯೋಗಕ್ಕೆ ಸಾಧುವಾಗಿರುತ್ತವೆ. '' ಎನ್ನುವ ತಪ್ಪು ಕಲ್ಪನೆಯನ್ನು ಹೋಗಲಾಡಿಸಲು ಅನುಕೂಲಕರವಾಗಿರುತ್ತವೆ.

ವಾಚನದಲ್ಲಿ ಕಣ್ಣಿನ ಒಂದು ನಿಲುಗಡೆಗೆ(ಫಿಕ್ಸೇಷನ್) ಹೆಚ್ಚು ಪದಗಳು ಒಳಪಡುತ್ತಿದ್ದರೂ, ಅದೇ ಕಾಲಕ್ಕೆ ಅಲ್ಲಿನ ಅರ್ಥವು ಗ್ರಹಿಸಲ್ಪಟ್ಟಾಗ ಆ ನಿರ್ದಿಷ್ಟ 'ಓದುಗನ ಕಣ್ಣಳವಿಯ(ನಿಲುಗಡೆ) ಸಾಮರ್ಥ್ಯ ತಕ್ಕುದಾಗಿದ್ದು, ಗ್ರಹಣ ಸಾಮರ್ಥ್ಯದ ದರದ ಅಧಿಕತೆಯನ್ನು ಎತ್ತಿ ಹೇಳುತ್ತದೆ. ಈ ನೆಲೆಯಲ್ಲಿ '' ಗ್ರಹಣ ಸಮರ್ಥ್ಯವು ವಾಚನ ಕೌಶಲ್ಯಕ್ಕಿಂತ ಸೂಕ್ಷ್ಮ ಮನೋವೈಜ್ಞಾನಿಕ ಚಟುವಟಿಕೆ'' ಯಾಗಿದೆ ಹಾಗೂ '' ವಿಶಿಷ್ಟ ಪ್ರಾವೀಣ್ಯ '' ವನ್ನು 'ಓದುಗನಿಂದ ಅಪೇಕ್ಷಿಸುತ್ತದೆ.

ಆರಂಭಿಕ ವಾಚಕರ ಗ್ರಹಿಕೆಯಲ್ಲಿ ದೋಷಗಳಿರುವದು ಸಹಜವಾದುದು. ಇವರಲ್ಲಿ '' ವ್ಯಕ್ತಿನಿಷ್ಠ ಗ್ರಹಿಕೆಯ ದರಕ್ಕಿಂತ, ವಸ್ತು ನಿಷ್ಠ ಗ್ರಹಿಕೆಯ ದರ ಅಧಿಕವಾಗಿರಲು '' ಸಾಧ್ಯ. ಏಕೆಂದರೆ, ಇವರ ವಾಚನ ಕ್ರಿಯೆ ಚಿಕ್ಕ ಚಿಕ್ಕ ಘಟಕಗಳೊಂದಿಗೆ ಆಸಕ್ತಿ ಹೊಂದಿದೆ. ಗ್ರಹಿಕೆಯಾಗುವುದು, ಚಿಕ್ಕ ಚಿಕ್ಕ ಘಟಕಗಳೊಂದಿಗೆ, ಸಂದರ್ಭ, ಸೂಕ್ಷ್ಮ ಸಂವೇದನಾ ಸಾಮರ್ಥ್ಯಗಳು ಅವಶ್ಯವೆಂದು ತೋರುತ್ತದೆ. ವಾಚನ ವೇಗ ಹಾಗೂ ಗ್ರಹಿಕೆಗೆ ಪ್ರೌಢತೆ ಅಗತ್ಯ. ಅದಕ್ಕೆ ಹಿನ್ನೆಲೆಯಾಗಿ ಅವನ 'ಬುದ್ಧಿಮತ್ತೆ.......

ಮತ್ತು ಪೂರ್ವ ಸಿದ್ಧತೆ' ಗಳು ಪ್ರಮುಖವಾದವು. ದೀರ್ಘ ವಾಕ್ಯ ರಚನೆಯಲ್ಲಿ, ಸೂಕ್ಷ್ಮವಾದ ನಿಕಟತಮ ಸಂಬಂಧ, ಹರಿತ ಅರ್ಥ ಸಮೃದ್ಧಿ, ಮತ್ತು ಐಕ್ಯತೆ(ಸ್ವರೂಪದ ಪ್ರಮಾಣ), ಇದರಿಂದ ಚಿಕ್ಕ ಚಿಕ್ಕ ವಾಕ್ಯ ಘಟಕಗಳು ಮಾಹಿತಿಯ ಮುಖ್ಯಾಂಶಗಳನ್ನು ನೇರವಾಗಿ ತಿಳಿಸಲು ಪ್ರಯತ್ನಿಸುತ್ತವೆ.

: 2.3 ವಾಚನ ಗ್ರಹಿಕೆ ಮತ್ತು ಶಬ್ದ ಸಂಪತ್ತು :

'' ವಾಚನೀಯ ಪ್ರಾವೀಣ್ಯ ' ಗಳಿಸುವಲ್ಲಿ ಈ ಶಬ್ದ-ಸಂಪತ್ತಿನ ಉಪಯುಕ್ತತೆ ಪ್ರಮುಖವಾದುದು. ಸಂಶೋಧನ ಸಂದರ್ಭದಲ್ಲಿ ಶಬ್ದ ಸಂಪತ್ತಿನ ಜ್ಞಾನದ ಪರಿಣಾಮ 'ಏನು? ಹಾಗೂ ವಾಚನೀಯತೆಯ ದೃಢೀಕರಣಗೊಳ್ಳಲು ಶಬ್ದ ಸಂಪ ತ್ತು ಹೇಗೆ ಸಹಾಯವಾಗುತ್ತದೆ? ಎಂಬುದನ್ನು ಕಂಡುಕೊಳ್ಳುವುದು ಅಗತ್ಯ ಸಂಗತಿ. ಪಠ್ಯದಲ್ಲಿ ಮುದ್ರಿತವಾಗಿರುವ ಅರ್ಥ ಘಟಕಗಳಾದ ಶಬ್ದಗಳ ' ಗಾತ್ರ ' ಸೂಕ್ತವಾಗಿದ್ದರೆ ಅದರ ವಿಶೇಷ ಗುಣವೆಂದು ಹೇಳಬಹುದು. ಸೂಕ್ತ ಗಾತ್ರದಲ್ಲಿ ಅಕ್ಷರ ಮುದ್ರಣವಾಗಿರುವುದು ಬರವಣಿಗೆಯ ವಾಚನೀಯ ಗುಣವನ್ನು ಪ್ರತಿನಿಧಿಸುತ್ತದೆ. ಪಠ್ಯ ವಾಚನದಲ್ಲಿ 'ಓದುಗನಿಗೆ ಸರಳ ಮತ್ತು ಕಠಿಣತರವಾದ ಅನೇಕ ಸಂಗತಿಗಳು ಎದುರಾಗುತ್ತವೆ. ಅದರಲ್ಲಿ ಮುಖ್ಯ ಚರ ಸಂಗತಿ ಶಬ್ದ ಸಂಪತ್ತು.

'' ಶಬ್ದ ಸಂಪತ್ತು ಮತ್ತು ಗ್ರಹಿಕೆಗಳ ನಡುವೆ ಕಾರ್ಯ-ಕಾರಣ ಸಂಬಂಧವಿದೆಯೆ, ಆ ಶಬ್ದಕೋಶ ಅಧಿಕ ಪ್ರೇರಣಾರ್ಥಕ ಸಂಗತಿ. ಎಂದು ' ಯಾಪ● (Yap 1979) ಅಭಿಪ್ರಾಯ ಪಟ್ಟಿದ್ದಾರೆ. ಶಬ್ದಕೋಶ ವಾಚನ ಪ್ರಾವೀಣ್ಯದಲ್ಲಿ ಸ್ಪಷ್ಟವಾಗಿ ಗುರುತಿಸಲ್ಪಡುವ Sub-Component ಆಗಿದೆ.

● Vocabulary & Language Teaching(Book)
-Paul Nation & James Coady(P.98)

ಶಿಕ್ಷಣ ತಜ್ಞರ ಅವಲೋಕನದಂತೆ – ಶೈಕ್ಷಣಿಕ ಪ್ರಕ್ರಿಯೆಯಲ್ಲಿ ವರ್ಷದಿಂದ ವರ್ಷಕ್ಕೆ ಮಕ್ಕಳ ಶಿಕ್ಷಣ ಮುಂದುವರಿದಂತೆ ಶಬ್ದ ಸಂಪತ್ತು ತೀವ್ರಗತಿಯಲ್ಲಿ ಬೆಳೆಯುವುದು ಅನಿವಾರ್ಯವಾಗುತ್ತದೆ. ಹಾಗೂ ಅನುಸರಣ ಸಿದ್ಧಾಂತದ ಹಿನ್ನೆಲೆಯಲ್ಲಿ – ಸಾಂದರ್ಭಿಕವಾಗಿ ಕೇಳಿದ, 'ಓದಿದ ಸಾಮಾನ್ಯ ಹಾಗೂ ವಿಶಿಷ್ಟ ರೂಪಗಳನ್ನು 'ಓದುಗನಾದವನು ದೈನಿಕ ಬದುಕಿನಲ್ಲಿ ಸೂಕ್ತ ಸಂದರ್ಭಕ್ಕನುಗುಣವಾಗಿ ಬಳಸುವದರಿಂದಲೂ '' ಪ್ರಯೋಗ ಸಾಧ್ಯತೆ '' ಗಮನಕ್ಕೆ ಬರುತ್ತದೆ. ಇದು ಕ್ರಮೇಣವಾಗಿ ಪಠ್ಯ ಬರವಣಿಗೆಯಲ್ಲಿಯ ಸರಳ – ದೀರ್ಘ ವಿಚಾರಗಳನ್ನು, ಸಂಗತಿಗಳನ್ನು ಗ್ರಹಿಸಲು ಅನುಕೂಲಕಾರಿಯಾಗುವದು. ಧನದ ಸಂಪತ್ತು ಹೊಂದಿದ ವ್ಯಕ್ತಿ ತನ್ನ ಜೀವನದ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಹೇಗೆ ಸಮರ್ಥನಾಗುವನೋ, ಹಾಗೆ ಶಬ್ದ ಸಂಪತ್ತು ಅಷ್ಟೇ ಪ್ರಾಧಾನ್ಯ ಹೊಂದಿ ''ಅಕ್ಷಯ ಸಂಪತ್ತು'' ಆಗಿದೆ. ಹಲವು ಪಠ್ಯಗಳ ಮೂಲಕ ಮೂಲಧಾತು, ಪ್ರತ್ಯಯಗಳನ್ನು ವಾಕ್ಯರಚನೆಯ ನಿದರ್ಶನಗಳ ಮೂಲಕ ರೂಢಿ ಮಾಡಿಸುವದು. ಪಠ್ಯದ ಆವರ್ತನ ವಾಚನ ಸಂದರ್ಭದಲ್ಲಿ, ಹೊಸ ಅಪರಿಚಿತ ಪದಗಳು, ವಿರುದ್ಧಾರ್ಥಕ, ಸಮಾನಾರ್ಥಕ ಪದಗಳನ್ನೂ ವಿಶೇಷ ಲಕ್ಷ ವಹಿಸಿ 'ಓದುವದರಿಂದ ಆಡು ನುಡಿಯ ಸ್ವರೂಪದಲ್ಲಿ ಆ ಪದಗಳಿಂದ ವಾಕ್ಯ ರಚನೆಗಳನ್ನು ಮಾಡಿಸುವದು.

ಆ ರೂಪ ಹಾಗೂ ಅರ್ಥಗಳೆರಡೂ 'ಓದುಗನಲ್ಲಿ ಗಟ್ಟಿಗೊಳ್ಳಲು ಸಹಾಯಕಾರಿ ಈ 'ಅಭ್ಯಾಸಯ ಕ್ರಿಯೆ'ಯಿಂದ ಆ ಪದಗಳು ಹೆಚ್ಚು ಆಪ್ತವಾಗುವವು. ಭಿನ್ನ ಭಿನ್ನ ವಾಕ್ಯ ರಚನೆಯ ಸಂದರ್ಭದಲ್ಲಿ, ಬಳಕೆಯ ಕ್ರಮ ಅರಿಯಲು ಅನುಕೂಲ. ನಿಘಂಟು, ಶಬ್ದ ಭಂಡಾರದ ಕಟ್ಟಡಕ್ಕೆ ಮೂಲಭೂತವಾಗಿದೆ. 'ಓದುಗರು ಇದನ್ನು ಬಳಸುವ ಕ್ರಮ ತಿಳಿದಿದ್ದರೆ ವಾಚನಗ್ರಹಿಕೆಯ ತೊಡಕಿನ ಸಂದರ್ಭದಲ್ಲಿ ಉಪಯುಕ್ತವಾಗುತ್ತದೆ. ಅಲ್ಲದೇ -

ಆ ತೊಡಕಿಗೆ ಕಾರಣವಾದ ಪದಗಳ ಅರ್ಥವನ್ನು ತಿಳಿಸಲು ವಾಕ್ಯ ರಚನೆಯ ನಿದರ್ಶನಗಳನ್ನು ಕೊಡುವುದರಿಂದಲೂ, ತುಂಬಾ ಪ್ರಯೋಜನ ಪಡೆಯಬಹುದು. 'ವಾಚನ ಗ್ರಹಿಕೆ' ಅಭಿವೃದ್ಧಿಯಾಗಬೇಕಾದರೆ 'ಓದಿದ್ದನ್ನು ಬರಹಕ್ಕಿಳಿಸುವ ರೂಢಿ ಅಗತ್ಯ. ಏಕೆಂದರೆ ಬರವಣಿಗೆಯಲ್ಲಿ ಸಾಧ್ಯವಾದಷ್ಟು ಖಚಿತ ಪದಗಳನ್ನು ಬಳಸಲು ಪ್ರಯತ್ನಿಸುತ್ತೇವೆ ಹಾಗೂ ಅಭಿವ್ಯಕ್ತಿಯ ಸಮಸ್ಯೆಗಳನ್ನು ತಿಳಿಯುತ್ತೇವೆ. ಅದಕ್ಕಾಗಿಯೇ –" ಹತ್ತು ಆವೃತ್ತಿ 'ಓದುವುದು – ಒಂದು ಸಲ ಬರಹಕ್ಕಿಳಿಸುವುದು ಸಮ"ವೆಂದು ಹೇಳುತ್ತಾರೆ. ಇದು ಮೌಖಿಕ ಅಭಿವ್ಯಕ್ತಿಯ ಸುಧಾರಣೆಗೆ ಧನಾತ್ಮಕ ಅಂಶವಾಗುತ್ತದೆ. 'ಓದುಗರ ದೈನಿಕ ಬದುಕಿನ ಸನ್ನಿವೇಶಗಳಲ್ಲಿ ಹಾಗೂ ವಿಶೇಷ ಬೌದ್ಧಿಕ ಜಗತ್ತಿನೊಂದಿಗೆ ಸ್ಪಂದಿಸಿದ ಅನುಭವ ಶಬ್ದ ಸಂಪತ್ತಿನ ಗಳಿಕೆಗೆ ಕಾರಣವಾಗಿ ವಾಚನ ಕೌಶಲ ಚುರುಕಾಗಿ ಲಿಖಿತ ರೂಪದಲ್ಲಿಯ ಮಾಹಿತಿಯನ್ನು ಸುಲಭವಾಗಿ ಗ್ರಹಿಸಿಕೊಳ್ಳಲು ಸಹಾಯಕಾರಿಯಾಗುತ್ತದೆ.

ನಿದರ್ಶನವಾಗಿ:– ಶಾಬ್ದಿಕವಾಗಿ 'ಕಂಪ್ಯೂಟರ್' ಎಂದು ಕೇಳಿದ 'ಓದುಗ ಆ ಯಂತ್ರವನ್ನು ಪ್ರತ್ಯಕ್ಷವಾಗಿ ನೋಡುವ ಸಂದರ್ಭ ಬಂದಾಗ, ಕೇಳಿದ ರೂಪಕ್ಕೂ ಅದನ್ನು ನಿರ್ದೇಶಿಸುವ ವಸ್ತುವಿಗೂ "ಸಾಹಚರ್ಯ ಸಂಬಂಧ" ಕಲ್ಪಿಸಿಕೊಳ್ಳುವುದರಿಂದ, ಸ್ಮರಣೆಯಲ್ಲಿ ದೃಢೀಕರಣಗೊಂಡು ಕಾಲಕ್ರಮದಲ್ಲಿ ಗ್ರಹಿಕೆಯ ಬಲವರ್ಧನೆಗೆ ಕಾರಣವಾಗುತ್ತದೆ. ಆತ್ಮ ಸಂತೋಷಕ್ಕಾಗಿ 'ಓದು, ವಿರಾಮ ಕಾಲದ, ಸದುಪಯೋಗಕ್ಕಾಗಿ 'ಓದು ವೃತ್ತಿಯಾಗಿರಿಸಿಕೊಂಡು 'ಓದು, ಪುನರಾವರ್ತನ ರೂಢಿ, ಗಾಢವಾಚನ ಮುಂತಾದ 'ಓದಿನ ಪ್ರಕಾರಗಳಿಂದ ಶಬ್ದ ಸಂಪತ್ತು ವಿಸ್ತೃತವಾಗಿ, ವಾಚನೀಯತೆ ಬಲಗೊಳ್ಳಲು ಪೂರಕವಾಗುವುದು.

ವಾಚನ ಗ್ರಹಿಕೆಯ ಸರಾಸರಿ ಪ್ರಮಾಣ ದರವನ್ನು ನಿರಂತರವಾಗಿ ಕಾಯ್ದುಕೊಳ್ಳಬೇಕಾದರೆ, 'ಓದುಗರ ತಮ್ಮಲ್ಲಿಯ ಸುಪ್ತ ಸಾಮರ್ಥ್ಯಗಳ ಗರಿಷ್ಠ ಮಿತಿಯನ್ನು ಮೀರುವುದರ ಕಡೆಗೇ ಮುಖ್ಯ ಗಮನ

ವಿಸ್ತರದೇಶೇ ಹೊರತು ಯಾವುದಾದರೂ ನಿರ್ದಿಷ್ಟ ಅಧ್ಯಾಯ ಪರೀಕ್ಷೆಯ ಫಲಿತಾಂಶಕ್ಕೆ ಬದ್ಧವಾಗಿರುವುದು ಸಲ್ಲದು. ಅಂದರೆ ಆರಂಭ ಶೂರತನ ಕ್ರಿಯಾ ಶೂನ್ಯತನವಾಗದೇ ಆಸಕ್ತಿ, ಸತತ ಕ್ರಿಯಾತ್ಮಕ ಪ್ರಯತ್ನ ತುಂಬಾ ಅಗತ್ಯವಾದುದು. ನಿಯತಕಾಲಿಕೆಗಳು, ದಿನಪತ್ರಿಕೆಗಳು, ಮುಂತಾದ ವಸ್ತು ಕಡಿಮೆ ವೇಳೆಯಲ್ಲಿ ಹೆಚ್ಚಿನ ವಸ್ತು ನಿಷ್ಠ, ವ್ಯಕ್ತಿ ನಿಷ್ಠ ಗ್ರಹಿಕೆಗೆ Skimming ನಂತಹ ವಿವಿಧ ಅಧ್ಯಯನ ತಂತ್ರಗಳ ಕುರಿತು ಸಮಂಜಸ ಮಾರ್ಗದರ್ಶನ ಸಲಹೆ ಸೂಚನೆಗಳನ್ನು ಪಡೆಯುವುದು, ಇದರ ಫಲವನ್ನು ವಾಚನ ಗ್ರಹಿಕೆಯ ದರದಲ್ಲಿಯ ಗುಣಾತ್ಮಕ ವೃದ್ಧಿಯಲ್ಲಿ ಕಾಣಬಹುದು.

ಕಾಲಕಾಲಕ್ಕೆ ಅನೇಕ ಪರೀಕ್ಷಾ ಸಾಧನ ತಂತ್ರಗಳಾದ ನೇರ ಸಂದರ್ಶನ, ಬಹು ಅಂಶಗಳ ಆಯ್ಕೆ, ಪ್ರಶ್ನೆ ಪ್ರತಿಕ್ರಿಯಾ ವಿಧಾನ, ಬಿಟ್ಟ ಸ್ಥಳ ಪೂರ್ಣ ಗೊಳಿಸುವ ಪರೀಕ್ಷೆ, ಪುನಃ ಸ್ಮರಣೆಗಳ ಸಹಾಯ ಪಡೆದು, ಬೇರೆ ಬೇರೆ ವಿಷಯಗಳಲ್ಲಿ '' ವೇಳೆ ನಿಗದಿ ವಾಕ್ಯ ವೃಂದದ ವಾಚನ '' (Timed Reading Passage) ಗ್ರಹಣ ಪರೀಕ್ಷೆಗಳನ್ನು, ಅವೃತ್ತಿ ವಾಚನ ರೂಢಿ, ಮುಂದುವರಿಸುತ್ತಾ ಗ್ರಹಿಕೆಗೆ ಹೆಚ್ಚು ಒತ್ತನ್ನು ಕೊಡುವುದು. ಈ ಗ್ರಹಿಕೆಯ ಪ್ರಶ್ನಾವಳಿಗಳನ್ನು ರೂಪಿಸುವಾಗ (Objective and Subjective) ತೊಡಕುಗಳು ಎದುರಾಗುವ ಸಾಧ್ಯತೆಯಿರುವುದರಿಂದ ಆದಷ್ಟು ' ಬಹು ಅಂಶಗಳ ಆಯ್ಕೆ ' ವಿಧಾನವನ್ನು ಅನುಸರಿಸುವುದು. ಪರೀಕ್ಷಕ ಪರೀಕ್ಷಿತರ ಹಿತದ ದೃಷ್ಟಿಯಿಂದ ಸಮಂಜಸವಾದುದು.

ಭಾಷಾ ಪರೀಕ್ಷಣ ವಿಧಗಳಲ್ಲಿ ' ಬಹು ಅಂಶಗಳ ಆಯ್ಕೆ ' ತಂತ್ರವು ಹೆಚ್ಚಿನ ಉಪಯುಕ್ತತೆಯನ್ನು ನೀಡುತ್ತದೆ ಎಂದು ಅಧ್ಯಯನಗಳಿಂದ ಗುರುತಿಸಲಾಗಿದೆ.

ಈ ತಂತ್ರದ ರೂಪಣವು ಮೂಲ ಪ್ರಶ್ನೆ ಅಥವಾ ಅಪೂರ್ಣ ಪ್ರಶ್ನೆ ವಾಕ್ಯಗಳು, ಕೆಳಗಡೆ ಅನೇಕ ಗೊಂದಲದ ಆಯ್ಕೆಗಳಲ್ಲಿ, ಒಂದು ' ಸರಿಯಾದ ಆಯ್ಕೆ ' ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಒಂದನ್ನೊಂದು

ಬಲಪಡಿಸುವ ಇಲ್ಲವೇ ಪೂರಕವಾಗಿರುವ ಆಯ್ಕೆಗಳು ಇರುವ ಸಾಧ್ಯತೆಯುಂಟು. ಇಲ್ಲಿ 'ಓದುಗನಿಗೆ ಸರಿಯಾಗಿ ಗ್ರಹಿಸಿದ್ದರೆ, ಹಾಗೂ ಪ್ರಶ್ನೆ ಸರಿಯಾಗಿ ಅರ್ಥವಾಗಿದ್ದರೆ ಮಾತ್ರ, 'ಸರಿ ಆಯ್ಕೆ'ಯನ್ನು ಪ್ರತಿಕ್ರಿಯಿಸುತ್ತಾನೆ. ಒಂದು ರೀತಿಯಲ್ಲಿ ಸೂಕ್ಷ್ಮ ಗ್ರಹಿಕೆಯ ನೋಟ ಮುಖ್ಯವಾದುದು. ಇಲ್ಲದಿದ್ದರೆ ಊಹೆಯ ಪ್ರತಿಕ್ರಿಯೆಯ ಕಾರ್ಯಪ್ರಭಾವ ಬೀರುವುದುಂಟು. ಆದಕ್ಕಾಗಿ ವಿವೇಚನಾ ಸಾಮರ್ಥ್ಯ ಅಗತ್ಯ. ಈ ತಂತ್ರದ ಉಪಯುಕ್ತತೆಯೆಂದರೆ — ಕಲೆ ಹಾಕಿದ ದತ್ತಾಂಶವನ್ನು ಕ್ರೋಢೀಕರಿಸಿ ಗಣಕಯಂತ್ರದಲ್ಲಿ ಅಳವಡಿಸಿ ಅಧ್ಯಯನಕಾರನ ವಿಶ್ಲೇಷಣೆಗೆ ಅನುಕೂಲವಾಗುತ್ತದೆ. 'ಓದುಗರ ನೆಲೆಯಿಂದ (ವಸ್ತು ನಿಷ್ಠ ಹಾಗೂ ವ್ಯಕ್ತಿ ನಿಷ್ಠ) ಗ್ರಹಿಕೆಗೂ ಪ್ರಚೋದನೆಯನ್ನು ಕೊಡಬಹುದು.

2.4. ಸಾಮಾನ್ಯ ತೊಡಕುಗಳು

ಸಾಮಾನ್ಯ 'ಓದುಗರ ನೆಲೆಯಿಂದ ಹಾಗೂ ಪಠ್ಯದ ಬರವಣಿಗೆಯ ಭಾಷೆಯ ನೆಲೆಯಿಂದ ವಾಚನ ಗ್ರಹಿಕೆ ಆಧಾರಿತ ಸಂವಹನ ಪ್ರಕ್ರಿಯೆಯಲ್ಲಿ ಗುರುತಿಸಬಹುದಾದ ತೊಡಕುಗಳನ್ನು ಸಾಮಾನ್ಯ ದೋಷಗಳು ಮತ್ತು ಕಣ್ಚಲನೆಯ '' ಹಿನ್ನೋಟ, ಹಿಂಜರಿಕೆಗಳೆಂದು'' ಸ್ಥೂಲವಾಗಿ ಹೇಳಲಾಗಿದೆ. ಇಲ್ಲಿನ ವಿವೇಚನೆಯು ಸಾಮಾನ್ಯ ದೋಷಗಳ ಸ್ವರೂಪ, ತೊಡಕಾಗುವ ಬಗೆ, ಹಾಗೂ ಸಾಧ್ಯ ಸುಧಾರಣಾ ಸಲಹೆಗಳನ್ನು ಒಳಗೊಂಡಿದೆ.

1) ಶಬ್ದಗಳ ಮೇಲೆ ನೇರ ದೃಷ್ಟಿ :(Pointed at words) ವಾಚನದಲ್ಲಿ ಆರಂಭಿಕ 'ಓದುಗರು ಅಕ್ಷರದ ಮೇಲೆ ಅವಧಾನ ಕೇಂದ್ರೀಕರಿಸಿ ಗುರುತಿಸುತ್ತಾ ಕೂಡಿಸಿ 'ಓದುವ ಸಂದರ್ಭದಲ್ಲಿ, ಬಳಸುವ ಸಾಧನ, ಕೈ ಬೆರಳು, ಅಥವಾ ಪೆನ್ಸಿಲುಗಳಿಂದ ವಾಚನ ರೂಢಿ ಮಾಡಿಕೊಳ್ಳುವ ಪದ್ಧತಿ ಕಾಣುತ್ತೇವೆ. ಆರಂಭಿಕ ನವ 'ಓದುಗರಲ್ಲಿ ಇದು ದೋಷವಾಗಿ ಕಂಡು ಬಂದರೂ, ಸರಾಸರಿ ಆದಕ್ಕಿಂತ ಅಧಿಕ ಮಟ್ಟದ 'ಓದುಗರಲ್ಲಿ ಕಂಡು ಬರುವುದಿಲ್ಲ. ಆದರೆ ಇವರಲ್ಲಿಯೂ

ಕಂಡು ಬಂದರೆ, ವಾಚನ ಕೇವಲ ಯಾಂತ್ರಿಕವಾಗಿ, ಸಾರ್ಥಕತೆ ಕಾಣುವದಿಲ್ಲ. ಇದು ಆರಂಭಿಕ ಹಂತಕ್ಕೆ ಸಹಜ ಹಾಗೂ ಅಗತ್ಯವೆಂದೂ ಕಾಣುತ್ತದೆ. ಕಾರಣ ಇಲ್ಲಿ ಮೆದುಳು, ಕಣ್ಣು ಮತ್ತು ಕೈಗಳ ನಡುವೆ ('ಏಕ ಕಾಲಕ್ಕೆ) ಧ್ವನಿ ರೂಪದ ಅಂತಃ ಸಂಬಂಧವೇರ್ಪಡುವ ಈ ಕ್ರಿಯೆಯಿಂದ ಪ್ರಯೋಜನ ವಿದೆ. ಅಕ್ಷರಗಳು, ಕಾಗುಣಿತ ಚಿಹ್ನೆಗಳು, ಲೇಖನ ಚಿಹ್ನೆಗಳು, ಮತ್ತು ಅಕ್ಷರಗಳ 'ವ್ಯವಸ್ಥಿತ ಸಂಯೋಜನಾ ಕ್ರಮ' ಅವರ ಸ್ಮರಣೆಯಲ್ಲಿ ಸ್ಥಿರವಾಗಲು ಸಾಧ್ಯವಾಗುವದು. ಆದ್ದರಿಂದ ಸಾಧ್ಯವಾದಷ್ಟು ಕಣ್ಣಿಲುವೆ ತಪ್ಪುದಾಗಿ, ನೇರವಾಗಿಪದಗಳನ್ನು ಗ್ರಹಿಸುವಂತೆ ಪ್ರೇರಣೆ ನೀಡುವದು ಸೂಕ್ತ ಮಾರ್ಗ ವೆನಿಸುತ್ತದೆ.

2) ತಲೆ ಅಲ್ಲಾಡಿಸುವದು(Head Movement) ವಾಚನ ಸಂದರ್ಭಗಳಲ್ಲಿ ಅಪ್ರಜ್ಞಾಪೂರ್ವಕವಾಗಿ ನಡೆಯುವ ಕ್ರಿಯೆ. ಇವು ಗಮನಕ್ಕೆ ಬಾರದ ಸಂಗತಿಗಳಾದರೂ ಸಹಜವಾಗಿ ಗುರುತಿಸಬಹುದು. ಪಠ್ಯ ಪುಸ್ತಕ ಹಿಡಿದು 'ಓದುವ ಕ್ರಮ, ಕೂಡುವ ಭಂಗಿ, ಒಂದಕ್ಕೊಂದು ಪರಸ್ಪರ ಪೂರಕ ವಾಗಿ, ಸರಿಯಾದ ಸಂಬಂಧವಿಟ್ಟುಕೊಂಡರೆ, ಇಂತಹ ಶಾರೀರಿಕ ಅಂಗಾಂಗ ಳಿಂದಾಗುವ ಸೂಕ್ಷ್ಮ ತೊಡಕುಗಳನ್ನು ತಡೆಗಟ್ಟಲು ಸಾಧ್ಯ. ಇಲ್ಲಿ ಶಿಕ್ಷಕನು ಪ್ರಾತ್ಯಕ್ಷಿಕೆಯಾಗಿ(ಮಾದರಿಯಾಗಿ) ಇರುವದರೊಂದಿಗೆ ಹಾಗೂ ಮಧ್ಯ ಪ್ರವೇಶಿಸಿ ಅದನ್ನು ಮುಂದುವರಿಸದಂತೆ ನೆನಪಿಸಿಕೊಡುವುದು ಸೂಕ್ತ ವಾದುದು.

3) ಸ್ಪಷ್ಟೋಚ್ಚಾರಣೆ : (Vocalisation) ಪಠ್ಯ ವಾಚನದ ಸಂದರ್ಭ ದಲ್ಲಿ ಸ್ಪಷ್ಟವಾಗಿ ಮೌಖಿಕವಾಗಿ ಉಚ್ಚರಿಸುತ್ತಾ 'ಓದುವದು, ಸಾಮಾನ್ಯವಾಗಿ ನಿಧಾನ ನವ 'ಓದುಗರಲ್ಲಿ ಕಂಡು ಬರುವ ಸಹಜ ಸಂಗತಿ. ಇದರ ಮುಖ್ಯ ಬಾಧಕಗಳೆಂದರೆ — ಸಾಮಾನ್ಯ 'ಓದುಗರಿಗಿಂತಲೂ ಆರಂಭಿಕ ಸ್ತರದಲ್ಲಿರುವ 'ಓದುಗರಲ್ಲಿ ಮಾತಿನ ವೇಗಕ್ಕೂ ಹಾಗೂ ವಾಚನ ವೇಗಕ್ಕೂ ವ್ಯತ್ಯಾಸ- ವು ಕಾಣುತ್ತದೆ. '' ವಾಚನದ ಸಾರ್ಥಕತೆಯಿರುವದು ಗ್ರಹಿಕೆಯಲ್ಲಿ :· ವಾಚನ ಮೌಖಿಕವಾಗಿ(ಶಬ್ದಗಳ ಉಚ್ಚಾರಣೆ) ಕೇವಲ ಸಾಧನವಾದರೂ,

ಅರ್ಥವನ್ನೀವದು ಕೇವಲ ಲಿಪಿ–ಮೌಖಿಕ ಸಂಕೇತಗಳಲ್ಲಲ್ಲ. ಅದಕ್ಕಾಗಿ ಸಾಧ್ಯವಾದಷ್ಟು ಮೌಖಿಕತೆ ಕಡಿಮೆಗೊಳಿಸಿ, ಮೌನ ವಾಚನಕ್ಕೆ ಆದ್ಯತೆ ಕೊಡುವುದು ಸಮಂಜಸ. ಈ ಪ್ರಕ್ರಿಯೆಯಿಂದ ಮೌಖಿಕ ಅಂಗಗಳು ಮತ್ತು ಕಿವಿಯ ಅಂಗಗಳು, ಮೆದುಳು ಏಕಕಾಲಕ್ಕೆ ಸ್ನಾಯು ತರಬೇತಿ ಪಡೆದು, ಸ್ಮರಣೆಯಲ್ಲುಳಿಯಲು ಅನುಕೂಲಕರ. ಸ್ಪಷ್ಟವಾದ ಮೌಖಿಕ ವಾಚನ ಅಪೇಕ್ಷಿತ, ಹಾಗೂ ಪ್ರಜಾಸತ್ತಾತ್ಮಕ ಕೌಶಲ್ಯವಾಗಿದ್ದರೂ, ಮೌನ ವಾಚನದಿಂದ ಹೊರತಾಗಿಲ್ಲ. ಇದೇ ಪ್ರಕ್ರಿಯೆ 'ಓದುಗರ ಶೈಕ್ಷಣಿಕ ಬೆಳವಣಿಗೆಯಲ್ಲಿ ಮುಂದುವರಿದರೆ ಮೌಖಿಕ ಅಂಗಗಳಿಗೆ ಹೆಚ್ಚು ಶ್ರಮವಾಗುತ್ತಾ ಆಯಾಸಗೊಳ್ಳುವವಲ್ಲದೇ, ವಾಚನ ವೇಗ ಹಾಗೂ ಗ್ರಹಿಕೆಯಲ್ಲೂ ತೊಡಕಾಗುವದು. (ಮಗುವಿನ ಬೆಳವಣಿಗೆಯ ಸೂಕ್ತ ಹಂತದವರೆಗೆ ಈ ಪ್ರಕ್ರಿಯೆಗೆ ಆದ್ಯತೆ ದೊರಕಿಯುವದು ಅಗತ್ಯ). ಕ್ಷೇತ್ರಾಧ್ಯಯನದ, ನವ 'ಓದುಗರು ನೇರ ಸಂದರ್ಶನದಲ್ಲಿಯೂ, ಹೆಚ್ಚಿನ ಪ್ರಮಾಣದಲ್ಲಿ ಬಾಯೋದಿನ ರೂಢಿ ಇದ್ದಿರುವದು ಸ್ಪಷ್ಟವಾಗಿ ಗಮನಕ್ಕೆ ಬಂದ ಸಂಗತಿ.

4) ಕಣ್ಚಲನೆಯು, ವಾಚನ ಗ್ರಹಿಕೆಯಲ್ಲಿ ಪ್ರಮುಖವಾದುದು. ವಾಚನದ ಸಂದರ್ಭದಲ್ಲಿ ಪಠ್ಯದ ಮುದ್ರಿತ ಸಾಲುಗಳ ಮೇಲೆ 'ಓದುಗನ ಕಣ್ಣುಗಳು ಅವನ ಗ್ರಹಿಕೆಯ ಸಾಮರ್ಥ್ಯಕ್ಕನುಸಾರವಾಗಿ ಚಲಿಸುತ್ತವೆ. ಆದರೆ 'ಓದುಗರು ಕಣ್ಣುಗಳ ಮೇಲೆ ಹಿಡಿತವನ್ನು ಸರಿಯಾಗಿಟ್ಟುಕೊಂಡಿದ್ದರೆ, (ಕಲಿಕೆಯ ಕಳಕಳಿ, ಆಸಕ್ತಿ, ಉತ್ಸಾಹ, ವಿದ್ದರೆ) (ಮಾನಸಿಕ ಹಾಜರಿ) ಮಾತ್ರ, ಗ್ರಹಿಕೆ ಸಮರ್ಪಕವಾಗಲು ಸಾಧ್ಯ. ಹಿಡಿತ ತಪ್ಪಿದರೆ, ವಾಚನ ಕೇವಲ ಯಾಂತ್ರಿಕವಾಗುವ ಸಂಭವವುಂಟು. ಬಾಹ್ಯ ಒತ್ತಡದ ಸಂದರ್ಭದಲ್ಲಿ ಹಾಗೂ ನಿರಾಸಕ್ತ ನವ 'ಓದುಗರಲ್ಲಿ ಮೂಲಭೂತ ಅಗತ್ಯಗಳ ಪೂರೈಕೆಯ ಕೊರತೆಯನ್ನು ಎದುರಿಸುವ ವಿದ್ಯಾರ್ಥಿಗಳಲ್ಲಿ, ಲೇಖನ ಚಿಹ್ನೆಗಳ ಸಮರ್ಪಕ ಅರಿವು ಮತ್ತು ರೂಢಿಯಾಗದವರಲ್ಲಿ ಈ

ಸ್ಥಿತಿಯನ್ನು ಕಾಣಲು ಸಾಧ್ಯ. ಈ ಕಣ್ಣುಚಲನೆಯಲ್ಲಿಯೇ ಹಿಂಚಲನೆ '' (regressions) ಆರಂಭಿಕ ನಿಧಾನ 'ಓದುಗರಲ್ಲಿ, ಅಧಿಕ ಪ್ರಮಾಣದಲ್ಲಿ ಕಂಡು ಬಂದರೆ ಸರಾಸರಿ ಹಾಗೂ ವೇಗ 'ಓದುಗರಲ್ಲಿ ಇದರ ಪ್ರಮಾಣ ಕಡಿಮೆ ಇರಲು ಸಾಧ್ಯ. ಹಿಂಚಲನೆಗೆ ಪಠ್ಯದ ಬರಹದಲ್ಲಿ ಅಪರಿಚಿತ (ರಚನೆ ಹಾಗೂ ಅರ್ಥದ ದೃಷ್ಟಿಯಿಂದಲೂ) ಪದಗಳು, ಮಿಶ್ರ ದೀರ್ಘವಾಕ್ಯಗಳು, ಲೇಖನ ಚಿಹ್ನೆಗಳ ಪ್ರಾಯೋಗಿಕ ಅರಿವು ಇಲ್ಲದಿರುವುದು, ಮುಂತಾದವುಗಳು ಕಾರಣವಾಗುವುವು.

ಆರಂಭಿಕ ನವ 'ಓದುಗರಿಗೆ ಇದು ತೊಡಕಾದರೂ, ಪ್ರಯತ್ನ ಮತ್ತು ದೋಷ (Trial & Error-Throndike) ಸಿದ್ಧಾಂತದ ಹಿನ್ನೆಲೆಯಲ್ಲಿ, ''ಆರಂಭದಲ್ಲಿ'' ಸಹಜವೆಂದು ತೋರುತ್ತದೆ. ಆದರೆ ವಾಚನ ಗ್ರಹಿಕೆಯ ಸಂದರ್ಭದಲ್ಲಿ ಅಲ್ಪ ಪ್ರಮಾಣದ ಅಡ್ಡಿಯಾಗುವುದು. ಅದಕ್ಕಾಗಿ 'ಓದುಗರ ಪೂರ್ವ ಸಿದ್ಧತೆ ಶಬ್ದ ಸಾಮರ್ಥ್ಯಕ್ಕೆ ಅನುಗುಣವಾಗಿ ಸರಳ, ಸುಲಭ, ಭಾಷೆ, ಮುದ್ರಣ ಶುದ್ಧ ಸ್ಪಷ್ಟತೆಯಿಂದ ಕೂಡಿದ್ದು,ಆಸಕ್ತಿದಾಯಕ ವಿಷಯವನ್ನು, ಹೆಚ್ಚು ಆಪ್ತವಾದ ಶಬ್ದಾವಳಿ, ನೇರವಾದ ಚಿಕ್ಕ ಚಿಕ್ಕ ವಾಕ್ಯ ವೃಂದಗಳಿರುವ ಪಠ್ಯಗಳನ್ನು ರಚಿಸಿ ಒದಗಿಸುವುದರಿಂದ ಆರಂಭಿಕ ನವ 'ಓದುಗರಿಗೂ ಪ್ರಯೋಜನವಾಗುವುದು. ಇಲ್ಲಿ ಶುಷ್ಕತೆಗೆ ಎಡೆಕೊಡದಂತೆ ನೋಡಿಕೊಳ್ಳುವುದು ಮುಖ್ಯವಾದುದು.

3

'ಕ್ಷೇತ್ರ' ದ ಫಲಿತ ಭಾಗ

ವಿಶ್ಲೇಷಣಾ ವಿಧಾನ.

ದತ್ತಾಭಿಲೇಖಗಳ – ವಿಶ್ಲೇಷಣೆ.

3. 'ಕ್ಷೇತ್ರ'ದ ಫಲಿತ ಭಾಗ

ಕ್ಷೇತ್ರಾಧ್ಯಯನದ ಫಲಿತಗಳು

3.1 ದತ್ತಾಭಿಲೇಖಗಳ ವಿಶ್ಲೇಷಣೆ ವಿಧಾನ

ಇಲ್ಲಿನ ವಿಶ್ಲೇಷಣೆಯು – ನವ ಸಾಕ್ಷರರ ವೈಯಕ್ತಿಕ ಸಾಮಾನ್ಯ ಮಾಹಿತಿ, ಪಠ್ಯಗಳ ಮುದ್ರಣ, (ನಿರೂಪಿತ ಭಾಷೆ, ಪ್ರೋಕ್ಷನ) ಹಾಗೂ ಸಂವಹನಕ್ಕೆ (ವಾಚನ, ಗ್ರಹಣ) ಸಂಬಂಧಿಸಿದಂತೆ ಸಾಗಿದೆ. ವಿಶ್ಲೇಷಣಾ ಕ್ರಮವು – ಪ್ರತಿ ದತ್ತಾಭಿಲೇಖಗಳಲ್ಲಿ ನಿರ್ದಿಷ್ಟ ಅಂತ್ಯಯ (ಚಾಂಯ್ಸ್) ಕುರಿತು ಪ್ರತಿಕ್ರಿಯಿಸಿದ ಒಟ್ಟು ಪ್ರತಿಕ್ರಿಯೆಗಳ ಸಂಖ್ಯೆಗೆ ಒಟ್ಟು ನವಸಾಕ್ಷರ ಸಂಖ್ಯೆಯಿಂದ ಭಾಗಿಸಿ ಬಂದುದರ ಪ್ರತಿಶತ ಪ್ರಮಾಣ ಸಂಖ್ಯೆಯನ್ನು (ನಿರ್ದಿಷ್ಟಪಡಿಸಿದ ಅಂತ್ಯಗೆ ಸೀಮಿತಗೊಳಿಸಿ) ಸರಾಸರಿ ಪ್ರತಿಗತ ಸಂಖ್ಯೆ (ಇದರ ಪರಿಮಿತಿಗಳು – ಕನಿಷ್ಟ ಶೇ.60ರಿಂದ ಗರಿಷ್ಟ 90) ಯನ್ನು ಆಧಾರವಾಗಿಸಿಕೊಂಡು ಈ ಸರಾಸರಿ ಪ್ರತಿಶತ ಸಂಖ್ಯೆಗೆ ಶೇ–5 ಕ್ಕಿಂತಲೂ ಅಧಿಕವಿರುವ ಪ್ರತಿಶತ ಸಂಖ್ಯೆಗಳು 'ಸಂವಹನದ ತೊಡಕು'ಗಳನ್ನು ಪ್ರತಿನಿಧಿಸುತ್ತವೆ. ಹಾಗೂ ತೊಡಕುಗಳನ್ನು ನಿವಾರಿಸಿಕೊಳ್ಳಲು, ಪಠ್ಯದ 'ಪರಿಷ್ಕಾರಕ್ಕೆ' ಸಾಧ್ಯವಾದ ಸುಳಿಗಳನ್ನು ಬಯಸುತ್ತವೆ. ಮತ್ತು ಅದೇ ಸರಾಸರಿ ಪ್ರತಿಶತ ಸಂಖ್ಯೆಗೆ ಶೇ.+5 ಕ್ಕಿಂತ ಅಧಿಕವಾಗಿರುವ ಪ್ರತಿಶತ ಸಂಖ್ಯೆಗಳು ಪಠ್ಯಗಳ ಉಪಯುಕ್ತತೆಯನ್ನು ನಿರ್ದೇಶಿಸುತ್ತವೆ. ಎಲ್ಲ ದತ್ತಾಭಿಲೇಖಗಳಲ್ಲಿಯ ಕೊನೆಯ 'ಸ್ತಂಭಗಳು' "ಯಾವುದು ಇಲ್ಲ" ಎಂಬುದನ್ನು ಪ್ರತಿನಿಧಿಸುತ್ತವೆ.

ಪಟ್ಟಿ – 1


ನೇರ ಸಂದರ್ಶನಕ್ಕೆ ಒಳಗಾದ ಒಟ್ಟು ನವಸಾಕ್ಷರರು – 300.

	ಪುರುಷರು	ಸ್ತ್ರೀಯರು	ಒಟ್ಟು
ನಗರವಾಸಿಗಳು	55 (18.3)	83 (27.6)	138 (46)
ಗ್ರಾಮ ವಾಸಿಗರು	86 (28.6)	76 (25.3)	162 (54)
	141 (47.0)	159 (53.0)	300

(ಆವರಣದಲ್ಲಿರುವ ಸಂಖ್ಯೆಗಳು 'ಪ್ರತಿಶತ' ಪ್ರಮಾಣವನ್ನು ಸೂಚಿಸುತ್ತವೆ)

<u>ನೀವು ಓದು-ಬರಹ ಕಲಿತಿರುವುದು</u> –

ಅ)ಕಲಿಕಾ ಕೇಂದ್ರದಲ್ಲಿ ಬ)ಸ್ವಯಂಸೇವಾ ಸಂಸ್ಥೆಯಲ್ಲಿ
ಕ)ಮನೆಯಲ್ಲಿ ಡ)ಶಾಲೆಯಲ್ಲಿ



ದತ್ತಾಭಿಲೇಖ – 1.



3.2 ದತ್ತಾಭಿಲೇಖಗಳ ವಿಶ್ಲೇಷಣೆ


<u>ಮೊದಲ ದತ್ತಾಭಿಲೇಖ</u> ಮತ್ತು ಪಟ್ಟಿ ಒಂದರ (1) ಪ್ರಕಾರ – ಒಟ್ಟು ಕ್ಷೇತ್ರ ಕಾರ್ಯದಲ್ಲಿ ನೇರ ಸಂದರ್ಶನಕ್ಕೆ ಒಳಗಾದ ನವಸಾಕ್ಷರರು – 300, ಅದರಲ್ಲಿ

ನಗರದ ಪುರುಷ ನವಸಾಕ್ಷರರು – ಶೇ. 18.3
ನಗರದ ಸ್ತ್ರೀ ನವಸಾಕ್ಷರರು – ಶೇ. 27.6
ಗ್ರಾಮೀಣ ಪುರುಷ ನವಸಾಕ್ಷರರು – ಶೇ. 28.6
ಗ್ರಾಮೀಣ ಸ್ತ್ರೀ ನವಸಾಕ್ಷರರು – ಶೇ. 25.3
ನಗರವಾಸಿ ನವಸಾಕ್ಷರರು – ಶೇ. 46
ಗ್ರಾಮೀಣವಾಸಿ ನವಸಾಕ್ಷರರು – ಶೇ. 54
ಒಟ್ಟು ಪುರುಷ ನವಸಾಕ್ಷರರು – ಶೇ. 47
ಒಟ್ಟು ಸ್ತ್ರೀ ನವಸಾಕ್ಷರರು – ಶೇ. 53

ಇವರೆಲ್ಲ ಸಾಕ್ಷರತಾ ಆಂದೋಲನದ ಕಲಿಕಾ ಕೇಂದ್ರಗಳಲ್ಲಿಂತೂ ಓದು ಬರಹ ರೂಢಿಸಿಕೊಂಡು ನೂತನವಾಗಿ ಸಾಕ್ಷರರಾದವರು. ಇವರಲ್ಲಿ ಶೇ. 27.3 ರಷ್ಟು ಓದುಗರು ಶಾಲಾ ಶಿಕ್ಷಣ (ಪ್ರಾಥಮಿಕ ಅಥವಾ ಹಿರಿಯ ಪ್ರಾಥಮಿಕ ಅಥವಾ ಪ್ರೌಢ ಹಂತಕ್ಕೆ ನಿಲ್ಲಿಸಿದವರು) ಪಡೆದು ಅನೇಕ ಸಾಮಾಜಿಕ ಮತ್ತಿತರ ಕಾರಣಗಳಿಂದ ನಡುವೆ ಓದನ್ನು ನಿಲ್ಲಿಸಿ, ಆಸಕ್ತಿಯಿಂದ ಈ ನಿರಂತರ ಕಲಿಕಾ ಕೇಂದ್ರದಲ್ಲಿ ಭಾಗವಹಿಸಿ ತಮ್ಮ ಕಲಿಕಾ ಸ್ಥಿತಿಯನ್ನು ಪುನಶ್ಚೇತನಗೊಳಿಸಿಕೊಂಡವರು. ಈ ರೀತಿ ಓದು ಬರಹ ರೂಢಿಸಿಕೊಂಡವರಲ್ಲಿ ಒಟ್ಟು ಸ್ತ್ರೀ ನವ ಸಾಕ್ಷರರ ಪ್ರಮಾಣವು ಒಟ್ಟು ಪುರುಷ ನವ ಸಾಕ್ಷರರ ಪ್ರಮಾಣಕ್ಕಿಂತ ಅಧಿಕವಾಗಿದೆ. ಹಾಗೂ ಅವರು ವಾಸಿಸುವ ಪ್ರದೇಶದ (ನಗರ ಮತ್ತು ಗ್ರಾಮೀಣ) ಹಿನ್ನಲೆಯಲ್ಲಿ ಗಮನಿಸಿದಾಗಲೂ, ಮೇಲಿನ ಪ್ರಮಾಣದಷ್ಟೇ ವ್ಯತ್ಯಾಸದಲ್ಲಿ ಗ್ರಾಮೀಣವಾಸಿಗರ ಪ್ರಮಾಣ ಅಧಿಕವಾಗಿದೆ. ವೈಯುಕ್ತಿಕ ಮಟ್ಟಕ್ಕೆ ಇಳಿದಾಗ, ನಗರದ ಪುರುಷ ನವ ಸಾಕ್ಷರರ ಪ್ರಮಾಣವು ಇನ್ನುಳಿದ ನವ ಸಾಕ್ಷರರಿಗೆ ಹೋಲಿಸಲಾಗಿ ಋಣಾತ್ಮಕವಾಗಿರುವುದು ಕಂಡು ಬರುತ್ತದೆ.

ಶಾಲಾ ಶಿಕ್ಷಣ ಪಡೆದಿದ್ದರೆ, ನಿಲ್ಲಿಸಿದ್ದು —

ಅ)2ನೇ ವರ್ಗಕ್ಕೆ ಬ)4ನೇ ವರ್ಗಕ್ಕೆ ಕ)7ನೇ ವರ್ಗಕ್ಕೆ
ಡ)10ನೇ ವರ್ಗಕ್ಕೆ ಇ) ಇಲ್ಲ



ದತ್ತಾಭಿಲೇಖ — 2

- ಏಳೆಂಟು ವಯಸ್ಸಿನಲ್ಲಿ ಯಾವುದೇ ಔಪಚಾರಿಕ ಶಿಕ್ಷಣ ಪಡೆಯದೆ ಕೇವಲ ಸಾಕ್ಷರತಾ ಆಂದೋಲನದ 'ಕಲಿಕಾ ಕೇಂದ್ರ'ದಲ್ಲಿ 'ಓದು ಬರಹ' ಕಲಿತು ನವಸಾಕ್ಷರರಾದವರು.




ದತ್ತಾಪಟ್ಟಿಕೆ — 2 :

ಶಾಲಾ ಶಿಕ್ಷಣ ಪಡೆದು, ನಡುವೆ ನಿಲ್ಲಿಸಿದವರ(ಡಿ.ಒ) ಒಟ್ಟು ಸಂಖ್ಯೆಗೆ ಹೋಲಿಸಲಾಗಿ(ಎರಡನೆ ವರ್ಗ) ಕಿರಿಯ ಪ್ರಾಥಮಿಕ ಹಂತಕ್ಕೆ ಶಾಲಾ ಶಿಕ್ಷಣ ನಿಲ್ಲಿಸಿದವರ ಪ್ರಮಾಣ ಇತ್ಯಾತ್ಮಕ(+) ವಾಗಿರುವುದು ಕಂಡು ಬರುತ್ತದೆ. ಇದೇ ಪ್ರಮಾಣ ಶಿಕ್ಷಣದ ಉನ್ನತ ಹಂತಕ್ಕೆ ಹೋದಂತೆಲ್ಲಾ ಕಡಿಮೆಯಾಗುತ್ತಾ ನಡೆದಿರುವುದು ಕಂಡು ಬರುತ್ತದೆ. ಪುರುಷರ ನೆಲೆಯಿಂದ ನೋಡಲಾಗಿ, ಶಾಲಾ ಶಿಕ್ಷಣ ನಡುವೆ ನಿಲ್ಲಿಸಿದವರ ಪ್ರಮಾಣವು ಸ್ತ್ರೀಯರ ಪ್ರಮಾಣಕ್ಕಿಂತ ಅಧಿಕವಾಗಿರುವುದು. ನಡುವೆ ಶಾಲೆ ಬಿಡುವವರ ಸ್ತ್ರೀಯರಪ್ರಮಾಣ ಪುರುಷರ ಪ್ರಮಾಣಕ್ಕಿಂತ ಅಧಿಕವಾಗಿರುವುದು. ಇಲ್ಲಿನ '' ಇ '' ಅಂತ್ಯಂತ (ಗರಿಷ್ಟ) ಸ್ತಂಭಗಳು ಶಾಲಾ ಶಿಕ್ಷಣದಿಂದ ವಂಚಿತರಾಗಿ 'ಓದು — ಬರಹವನ್ನು ರೂಢಿಸಿಕೊಳ್ಳಲಿಕ್ಕೆ ಪೂರ್ಣವಾಗಿ ಕಲಿಕಾ ಕೇಂದ್ರದಲ್ಲಿಯೇ ಭಾಗವಹಿಸಿ ನವಸಾಕ್ಷರರಾದವರನ್ನು ಸೂಚಿಸುತ್ತವೆ.

ಅಕ್ಷರಗಳ ಗಾತ್ರ (ಮಾದರಿ ತೋರಿಸುತ್ತಾ) —

ಅ)ಈಗಿದ್ದುದು ಸಾಕು ಬ)14 ಪಾಯಿಂಟ್ ಕ)18 ಪಾಯಿಂಟ್
ಡ)20 ಪಾಯಿಂಟ್.



ದತ್ತಾಭಲೇಖ — 3




ದತ್ತಾಧಿಲೇಖ –3 :


ಗ್ರಾಮವಾಸಿ ನವಸಾಕ್ಷರರ ದೃಷ್ಟಿಯಿಂದ ಅದರಲ್ಲೂ ವಿಶೇಷವಾಗಿ ಸ್ತ್ರೀ ನವಸಾಕ್ಷರರ ನೆಲೆಯಿಂದ, ಪಠ್ಯದಲ್ಲಿ ಬಳಸಿದ ಅಕ್ಷರದ ಗಾತ್ರಕ್ಕಿಂತ (16 ಪಾಯಿಂಟ್) ಅಧಿಕ ಗಾತ್ರದಲ್ಲಿ ಮುದ್ರಿಸುವುದು, ಪಠ್ಯದ ನಿರೂಪಣೆಯ ವಿಶೇಷತೆಯೆಂದು ಗುರುತಿಸಬಹುದು. ಇದೇ ಅಪೇಕ್ಷೆ ಗ್ರಾಮೀಣ ಪುರುಷ ನವಸಾಕ್ಷರರದು ಆಗಿರುತ್ತದೆ. ಈ ರೀತಿಯ ಪ್ರತಿಕ್ರಿಯೆಗೆ ಪೂರಕವಾಗಿ ಹೇಳುವುದಾದರೆ ಕಲಿಕಾ ಹಂತದಲ್ಲಿ ಓದಿದ ಮೂರು ಪಠ್ಯ ಪುಸ್ತಕಗಳಲ್ಲಿ ಹೆಚ್ಚಿನ ಗಾತ್ರದ ('18 ಪಾಯಿಂಟಗಿಂತಲೂ ಹೆಚ್ಚಿರುವ ಸಾಕ್ಷರ ದೀಪ 1, 2, 3, ಪಠ್ಯ ಪುಸ್ತಕಗಳು) ಅಕ್ಷರಯುಕ್ತ ಪದಗಳನ್ನು ಓದಿ ರೂಢಿಯಾದ ಕಣ್ಣುಗಳಿಗೆ ಒಮ್ಮೆಲೆ ಅದಕ್ಕಿಂತ ಚಿಕ್ಕ ಗಾತ್ರದ ಅಕ್ಷರಯುಕ್ತ ಪದಗಳನ್ನು ಓದುವುದೆಂದರೆ, ಕಣ್ಣುಗಳಿಗೆ ಹೆಚ್ಚಿನ ಶ್ರಮ ಬೀಳುವ ಕಾರಣ ಈಗಾಗಲೇ ರೂಢಿಯಾದ '' ಗಾತ್ರ '' ದಲ್ಲಿ ಅಕ್ಷರ ಅಚ್ಚಾಗಿರಬೇಕೆಂಬುದು ಇವರ ಅಪೇಕ್ಷೆಯಾಗಿರಲು ಸಾಧ್ಯ. ನಗರವಾಸಿ ಹಾಗೂ ಒಟ್ಟು ಪುರುಷ ಮತ್ತು ಸ್ತ್ರೀ ನೂತನ ಓದುಗರ ಪ್ರತಿಕ್ರಿಯೆಗಳ ಪ್ರತಿಶತ ಪ್ರಮಾಣಗಳು ಸರಾಸರಿ ಪ್ರತಿಶತ ಪ್ರಮಾಣಕ್ಕೆ ಧನಾತ್ಮಕವಾಗಿರುವುದು – ಪಠ್ಯದಲ್ಲಿ ಬಳಸಿದ ಅಕ್ಷರಗಳ ಗಾತ್ರವನ್ನು ಬೆಂಬಲಿಸುತ್ತವೆ.

<u>ಸಾಲುಗಳ ನಡುವಿನ ಅಂತರ — (ಮಾದರಿ ತೋರಿಸುತ್ತಾ.)</u> —

ಅ)ಈಗಿದ್ದುದು ಅನುಕೂಲ ಬ)ಕಡಿಮೆ ಇರಬೇಕು ಕ)ಹೆಚ್ಚಿರಬೇಕು
ಡ)ವಿರಳ ವಿರಳವಾಗಿರಬೇಕು.



<u>ದತ್ತಾಂಶರೇಖೆ — 4</u>




ದತ್ತಾರ್ಥಲೇಖ – 4 :

ಗ್ರಾಮವಾಸಿ ವಿಶೇಷವಾಗಿ ಗ್ರಾಮೀಣ ಸ್ತ್ರೀ ನವಸಾಕ್ಷರರಿಗೆ ಪಠ್ಯದಲ್ಲಿ ಈಗಿರುವ ಸಾಲುಗಳ ನಡುವಿನ ಅಂತರವನ್ನು ಹೆಚ್ಚಿಸಬೇಕೆಂಬುದು ಇವರು ವ್ಯಕ್ತಪಡಿಸಿದ ಪ್ರತಿಕ್ರಿಯೆಗಳ ಪ್ರಮಾಣ ಸಂಖ್ಯೆಯು ಸರಾಸರಿ ಪ್ರತಿಶತ ಸಂಖ್ಯೆಗೆ ಋಣಾತ್ಮಕ (ಶೇ.–10) ಇರುವುದರಿಂದ ಗೋಚರಿಸುತ್ತದೆ. ಈ ನವ ‘ಓದುಗರು ‘ಓದುವಾಗ ತಮ್ಮ ಅವಧಾನವನ್ನು ನಿರ್ದಿಷ್ಟ ಸಾಲಿನ ಮೇಲೆ ಕೇಂದ್ರೀಕರಿಸಿ ವಾಚಿಸಲು ಹಾಗೂ ಗ್ರಹಿಸಲು, ‘ ಅಂತರ ’ ದಲ್ಲಿ ಸಾಕಷ್ಟಾದ ಬದಲಾವಣೆ ಮಾಡುವುದು ಅಗತ್ಯವೆಂದು ತೋರುತ್ತದೆ. ‘ಅಂತರ ’ ದಲ್ಲಿ ಹೆಚ್ಚಳ ಕೆಲವು ದ್ವಿಸಾಲು ಅಂತರ(Double Line Space) ಕ್ಕಿಂತ ಕಡಿಮೆ ಇರುವ ಕೆಲವು ಪಠ್ಯಗಳಿಗೆ ಪರಿಷ್ಕಾರವಾಗುವುದು ಅವಶ್ಯವೆಂದು ತೋರುತ್ತದೆ. ಈ ಪ್ರಯೋಜನವು ನಗರದ ಪುರುಷ ಸಾಕ್ಷರರಿಗೂ ಆಗುತ್ತದೆ. ಆದರೆ ನಗರದ ಸ್ತ್ರೀ ಹಾಗೂ ಗ್ರಾಮೀಣ ಪುರುಷ ನವ ‘ಓದುಗರಿಗೆ ಈಗಿರುವ ಸಾಲುಗಳ ನಡುವಿನ ಅಂತರ ‘ಓದಲಿಕ್ಕೆ ಅನುಕೂಲವಾಗಿದೆ ಎಂಬುದು ಈ ದತ್ತಾರ್ಥಲೇಖದ ಸಂಬಂಧಿಸಿದ ಸ್ತಂಭಗಳಿಂದ ಕಂಡುಕೊಂಡ ಸಂಗತಿ.

<u>ರೇಖಾ ಚಿತ್ರಗಳು — ಹೇಗಿವೆ ಮತ್ತು ಹೇಗಿರಬೇಕು</u> —

ಅ) ನಿಚ್ಚಳವಿಲ್ಲ ಬ) ಸಾಧಾರಣವಾಗಿವೆ ಕ) ಬಣ್ಣಬಣ್ಣದ್ದಾಗಿರಬೇಕು
ಡ) ವಿಷಯಕ್ಕೆ ಪೂರಕ ಇ) ಈಗಿದ್ದುದು ಸಾಕು.



<u>ದತ್ತಾಂಶರೇಖೆ — 5</u>




ದತ್ತಾಭಿಲೇಖ – 5 :

ಪ್ರತಿಶತ 60 ರಷ್ಟು ನವ 'ಓದುಗರ ಸಾಮಾನ್ಯವಾದ ಬಯಕೆ ಪಠ್ಯದಲ್ಲಿಯ ರೇಖಾ ಚಿತ್ರಗಳು ಸಾಧಾರಣವಾಗಿದ್ದು ಬಣ್ಣ ಬಣ್ಣದ್ದಾಗಿರಬೇಕೆಂಬ ಸಂಗತಿ ತಿಳಿಯುತ್ತದೆ. ವಿಶೇಷವಾಗಿ ಒಟ್ಟು ಸ್ತ್ರೀಯರ ಹಾಗೂ ಗ್ರಾಮೀಣ ಪುರುಷ, ನವಸಾಕ್ಷರರ ಪ್ರತಿಕ್ರಿಯೆಗಳು, ಈ ಸಂಗತಿಯನ್ನು ಬಲವಾಗಿ ಬೆಂಬಲಿಸುತ್ತವೆ. ಪಠ್ಯಗಳಲ್ಲಿ ಸಾಂದರ್ಭಿಕವಾಗಿ ಬಣ್ಣಬಣ್ಣದ ನೆರಳು – ಬೆಳಕಿನ ಭಾವಚಿತ್ರಗಳನ್ನು ಹಾಗೂ ರೇಖಾ ಚಿತ್ರ ನಿದರ್ಶನಗಳನ್ನು ಅಚ್ಚುಕಟ್ಟಾಗಿ ಮುದ್ರಿಸುವುದರಿಂದ ಮನಸ್ಸನ್ನು ಆಕರ್ಷಿಸಿ, ವಿಷಯ ವಸ್ತುವಿನ ಗ್ರಹಿಕೆಗೆ, ಹಾಗೂ ಹೆಚ್ಚಿನ 'ಓದಿಗೆ ಪ್ರೇರಣೆ ನೀಡುವ ಸಂಗತಿಯಾಗುತ್ತದೆ. ಆದರೆ ನಗರವಾಸಿ ಪುರುಷ ಹಾಗೂ ಸ್ತ್ರೀಯರಿಗೆ ಈಗಿದ್ದುವುಗಳನ್ನೇ ಇನ್ನಷ್ಟು ನಿಚ್ಚಳಗೊಳಿಸಿ, ಸ್ಪಷ್ಟಗೊಳಿಸಿದರೆ ಸಾಕೆಂಬ ಅಭಿಪ್ರಾಯ ಇಲ್ಲಿನ ಪ್ರತಿಕ್ರಿಯೆಗಳಿಂದ ತಿಳಿದು ಬರುತ್ತದೆ.

ಪಾಠದ ಶೀರ್ಷಿಕೆ : ಉಪ ಶೀರ್ಷಿಕೆ (ಹೆಡ್ಡಿಂಗ್) —

ಅ) ದಪ್ಪಕ್ಷರದಿಂದಾಗಿವೆ ಬ)ಉಚಿತವಾಗಿವೆ ಕ) ಕೆಳ ಅಕ್ಷರಗಿಂತ ಭಿನ್ನವಿಲ್ಲ ಡ)ಅನುಕೂಲವಿಲ್ಲ.



ದತ್ತಾಂಶಲೇಖ — 6




ದತ್ತಾರ್ಥಲೇಖ – 6 :

ಪಠ್ಯಗಳ ಶೀರ್ಷಿಕೆ ಹಾಗೂ ಉಪ ಶೀರ್ಷಿಕೆಗಳು ಸೂಕ್ತ ಗಾತ್ರದಲ್ಲಿದ್ದು ದಪ್ಪಕ್ಷರದಿಂದ ಮುದ್ರಿತವಾಗಿವೆ ಎಂಬ ಅಂಶವನ್ನು ಪ್ರತಿನಿಧಿಸುವ ಸರಾಸರಿ ಸಂಖ್ಯೆ ಶೇ. 58 ರಷ್ಟಿದ್ದರೂ, ಇನ್ನುಳಿದ ಪ್ರತಿಶತ ಪ್ರಮಾಣಗಳು ಅಧಿಕ ಪ್ರಮಾಣದಲ್ಲಿ ಬಂದಿರುವುದು ಗಮನಿಸಿದರೆ ಶೀರ್ಷಿಕೆ ಹಾಗೂ ಉಪ ಶೀರ್ಷಿಕೆಗಳಂತಹ ಸಂಗತಿಗಳು ನವಸಾಕ್ಷರರ ವಾಚನ ಗ್ರಹಿಕೆಯಲ್ಲಿ ಅಷ್ಟೊಂದು ಗಹನವಾಗಿ ಗಮನಿಸುವ ತೊಡಕಾಗಿಲ್ಲವೆಂಬುದು, ಹಾಗೂ ಕಲಿಕೆಯ ಮುಂದುವರಿಸುವಲ್ಲಿ ಮಹತ್ವದ ಸಂಗತಿಗಳಾಗಿ ಪರಿಗಣಿತವಾಗಿಲ್ಲವೆಂಬುದು ಈ ದತ್ತಾರ್ಥಲೇಖದಿಂದ ಹೆಕ್ಕಿ ತೆಗೆದ ಸಂಗತಿ.

<u>ಪುಸ್ತಕದ ರಕ್ಷಾಕವಚಗಳು (ಗುಣಮಟ್ಟದ ದೃಷ್ಟಿಯಿಂದ)</u> —

ಅ)ಉತ್ತಮ ಮಟ್ಟದವು ಬ)ಕಳಪೆಮಟ್ಟದವು ಕ)ಸಾಮಾನ್ಯ
ಡ)ತಾಳಿಕೆ ಬಾಳಿಕೆಯುಳ್ಳವು·



<u>ದತ್ತಾಭರಲೇಖ — 7</u>




<u>ದತ್ತಾಲೇಖ – 7 :</u>

ಪತ್ರಿಕೆಗಳ ರಕ್ಷಾಪುಟಗಳು ಗುಣಮಟ್ಟದ ದೃಷ್ಟಿಯಿಂದ ತಾಳಿಕೆ-ಬಾಳಿಕೆ ಬರುವಂತಹವು ಎಂಬ ಅಂಶವನ್ನು ಪ್ರತಿನಿಧಿಸುವ ಎಲ್ಲ ಪ್ರತಿಶತ ಪ್ರಮಾಣಗಳು ಅಧಿಕತೆಯನ್ನು ತೋರಿಸುತ್ತವೆ. ಆದರೆ ಗ್ರಾಮವಾಸಿ ನವಸಾಕ್ಷರರ ಪ್ರತಿಕ್ರಿಯೆಗಳ ಪ್ರಕಾರ – ದಪ್ಪನಾದ ರಟ್ಟಿನಿಂದ(ಕಟ್ಟು) ಮಾರ್ಪಡಿಸುವುದು ಸೂಕ್ತವೆಂದು ಕಾಣುತ್ತದೆ.

ಪುಸ್ತಕದ ಮುಖಪುಟ (ವರ್ಣಚಿತ್ರ)–

ಅ)ಆಕರ್ಷಣೀಯವು ಬ)ಸಾಮಾನ್ಯ ಕ)ಓದಿಗೆ ಉತ್ತೇಜನ ಡ)ಪೂರಕವಿಲ್ಲ.



ದತ್ತಾಂಶಲೇಖ – 8




ದತ್ತಾರ್ಥರೇಖೆ – 8 :

ಪಠ್ಯ ಪುಸ್ತಕಗಳ ಮುಖ ಪುಟಗಳು ಬಹು ಬಣ್ಣಗಳಿಂದಾವೃತವಾಗಿ, ಶೀರ್ಷಿಕೆಗಳಿಗೆ ಪೂರಕವಾದ, ಸ್ಪಷ್ಟ ಹಾಗೂ ನಿಚ್ಚಳವಾದ, ಭಾವ ಚಿತ್ರಗಳನ್ನು ಹೊಂದಿರುವದು, ನವ ಓದುಗರ ಆಸಕ್ತಿಯನ್ನು ಕೆರಳಿಸಿ ಓದಲು ಉತ್ಸುಕರನ್ನಾಗಿಸುತ್ತವೆ. ಹಾಗೂ ಪಠ್ಯಗಳಲ್ಲಿಯೇ ಅವರ ಪೂರ್ಣ ಅವಧಾನವನ್ನು ಕೇಂದ್ರೀಕರಿಸುವಲ್ಲಿ ಮುಖ್ಯ ಪಾತ್ರ ನಿರ್ವಹಿಸುತ್ತವೆ. ಹಾಗೂ ವಾಚನಕ್ಕೆ ಪ್ರೇರಣೆಯನ್ನು ನೀಡುವ ಪೂರಕ ಸಂಗತಿಗಳಾಗಿವೆ ಎಂಬುದು ಈ ದತ್ತಾರ್ಥರೇಖೆಯಿಂದ ಸ್ಪಷ್ಟವಾಗುವ ಸಂಗತಿ. ಈ ಸಂಗತಿಯು ಪಠ್ಯ ರಚನೆಯ ಉದ್ದೇಶದ ಸಾರ್ಥಕತೆಗೆ ಪರಿಣಾಮಕಾರಿ ಪ್ರಾರಂಭಿಕ ಬಿಂದು ಎನ್ನುವದನ್ನು ಸೂಚಿಸುತ್ತದೆ.

ನೀವು ಸಾಮಾನ್ಯವಾಗಿ ಓದುವುದು (ಹವ್ಯಾಸ) —

ಅ)ದಿನಪತ್ರಿಕೆಗಳು ಬ)ಕಥೆ ಪುಸ್ತಕಗಳು ಕ)ವಾರಪತ್ರಿಕೆಗಳು
ಡ)ಖಾಸಗಿ ಪತ್ರಗಳು ಇ)ತುಂಡುಕಾಗದಗಳನ್ನು.



	ನ·ಪು	ನ·ಸ್ತ್ರೀ	ಗ್ರಾ·ಪು	ಗ್ರಾ·ಸ್ತ್ರೀ
	41 11 7 26 2 0	63 22 7 33 1 0	61 23 6 13 2 0	44 16 3 17 0 2
% -	74.5	63.8	59.3	57.8

ದತ್ತಾಭಲೇಖ — 9




ದತ್ತಾಧಿಲೇಖ – 9 :

ನವಸಾಕ್ಷರರು ಸಾಮಾನ್ಯವಾಗಿ ದಿನಪತ್ರಿಕೆಗಳನ್ನು ಓದುವುದರೊಂದಿಗೆ ಮನೆಗೆ ಬಂದ ಖಾಸಗಿ ಪತ್ರಗಳನ್ನು ಓದುವ ರೂಢಿ ಇಟ್ಟುಕೊಂಡಿರುವುದಲ್ಲದೆ, ಕಣ್ಣಿಗೆ ಕಂಡ ಕಾಗದದ ತುಂಡುಗಳನ್ನು ಕೈಗೆತ್ತಿಕೊಂಡು ಓದುವ ಪ್ರವೃತ್ತಿಯವರಾಗಿದ್ದಾರೆ. ಅವರಲ್ಲಿ ಗ್ರಾಮವಾಸಿ ನವ ಓದುಗರ ಪ್ರತಿಕ್ರಿಯೆಗಳ ಪ್ರಮಾಣದಲ್ಲಿ ನೇತ್ಯಾತ್ಮಕ ಮನೋಭಾವ ಕಾಣುತ್ತದೆ. ಇದಕ್ಕೆ ದಿನಪತ್ರಿಕೆಗಳಂತ ಸಾಹಿತ್ಯ ಇವರ ಕೈಗೆ ಸುಲಭವಾಗಿ ದೊರೆಯದೇ ಇರುವುದು ಹಾಗೂ ಜೀವನ ಸಂಗ್ರಾಮದಲ್ಲಿ ಬಿಡುವು ಸಿಗದೇ ಇರುವುದು ಕಾರಣವಾಗಿರಬಹುದು. ಆದರೆ ಉತ್ಸುಕರಾಗಿ ಓದುವ ಮನೋಭಾವ ಅಧಿಕವಾಗುತ್ತಿರುವುದು ಕ್ಷೇತ್ರ ಕಾರ್ಯದಿಂದ ಕಂಡುಕೊಂಡ ಸಂಗತಿ.

ದಿನಪತ್ರಿಕೆಯಲ್ಲಿ ಸಾಮಾನ್ಯವಾಗಿ ಓದುವ ಪುಟ —

ಅ) ದಪ್ಪಕ್ಷರಗಳನ್ನು ಮಾತ್ರ ಬ) ಕೃಷಿರಂಗ: ಸಿನಿಮಾರಂಗ
ಕ) ಕ್ರೀಡೆ: ಮನೋರಂಜನೆ ಡ) ಕಥೆ ಕವನಗಳನ್ನು
ಇ) ದೂರು ದುಮ್ಮಾನ: ವಾಚಕರ ವಾಣಿ: ಸಂಪಾದಕೀಯ



ದತ್ತಾಭರೇಖ — 10




<u>ದತ್ತಾರ್ಥರೇಖೆ – 10:</u>

ಸಾಮಾನ್ಯವಾಗಿ ದಿನಪತ್ರಿಕೆಗಳಲ್ಲಂತು ಮುಖ್ಯ ಮುಖ್ಯ ವಿಷಯಗಳಿಂದ ಕೂಡಿದ ದಪ್ಪಕ್ಷರಗಳನ್ನು ಓದುವಲ್ಲಿ ಆಸಕ್ತಿ ಹೊಂದಿರುವ ಸಂಗತಿ ಎಲ್ಲಾ ನವ ಸಾಕ್ಷರರ ದೃಷ್ಟಿಯಿಂದ ಎದ್ದು ಕಾಣುತ್ತದೆ. ಆದರೆ ವಿಶೇಷವಾಗಿ ನಗರದ ಪುರುಷ ನವಸಾಕ್ಷರರ ದೃಷ್ಟಿಯಲ್ಲಂತು, ಆಸಕ್ತಿಯು ಋಣಾತ್ಮಕವಾಗಿದೆ.

ಪತ್ರಿಕೆಗಳು ನಿಮಗೆ ದೊರೆಯುವುದು —

ಅ)ಹೋಟೆಲ ಅಂಗಡಿಗಳಲ್ಲಿ ಬ)ಪಕ್ಕದ ಮನೆಯಲ್ಲಿ
ಕ)ಗ್ರಾಮಪಂಚಾಯತಿ ಡ)ಪಬ್ಲಿಕ ಲೈಬ್ರರಿ ಇ)ಸ್ವಂತ ಮನೆಯಲ್ಲಿ



ದತ್ತಾಂಶಲೇಖ — 11




<u>ದತ್ತಾಧಿಲೇಖ – 11:</u>

ಪತ್ರಿಕೆಗಳನ್ನು 'ಓದುವಲ್ಲಿ ಆಸಕ್ತಿ ಹೊಂದಿದ ಸ್ತ್ರೀ ನವ ಸಾಕ್ಷರರು ತಮ್ಮ ನೆರೆಹೊರೆಯವರ ಮನೆಗಳಲ್ಲಿ ಅವುಗಳನ್ನು ಪಡೆದು 'ಓದುವಲ್ಲಿ ಉತ್ಸುಕರಾಗಿರುವರು. ಅದೇ ರೀತಿ ಪುರುಷ ನವ ಸಾಕ್ಷರರು ಹೋಟೆಲ ಅಂಗಡಿಗಳಲ್ಲಿ, ತಕ್ಕ ಮಟ್ಟಿಗೆ ಗ್ರಾಮ ಪಂಚಾಯತಿ ಗ್ರಂಥಾಲಯದಲ್ಲಿಯೂ ಈ ಪತ್ರಿಕೆಗಳ ಪ್ರಯೋಜನ ಪಡೆಯುವವರಾಗಿದ್ದಾರೆ. 'ಓದುವ ಆಸಕ್ತಿಗೆ ಸಂಬಂಧಿಸಿದಂತೆ ಸ್ತ್ರೀ ನವಸಾಕ್ಷರರು ಒಂದು ಹೆಜ್ಜೆ ಮುಂದಿರುವುದನ್ನು ಗುರುತಿಸಬಹುದು. ಅಕ್ಷರದ ಬಗ್ಗೆ ಕಳಕಳಿ, ಅಪಾರ ಆಸಕ್ತಿ ಹೊಂದಿದ ಇವರು ರೂಢಿಸಿಕೊಂಡ ಅಕ್ಷರಗಳನ್ನುಳಿಸಿ ಬೆಳಸಿಕೊಂಡು, ತಮ್ಮ ದೈನಿಕ ಬದುಕಿನಲ್ಲಿ ಈ ಅಕ್ಷರದಿಂದಾಗುವ ಪ್ರಯೋಜನ ಪಡೆಯಬೇಕೆಂಬುದು ಇವರ ಮನೋಬಯಕೆಯಾಗಿರುವುದು. ಅಕ್ಷರದ ಅರಿವು ಇವರಿಗೆ ಶಕ್ತಿಯನ್ನು ತಂದುಕೊಟ್ಟಿದೆ. ಅಬಲರಿಗೆ ಸಬಲತೆಯನ್ನು ತಂದಿದೆ ಎಂಬುದು ಇವರೆಲ್ಲರ ಅಭಿಪ್ರಾಯದ ತಿರುಳಾಗಿದೆ.

<u>ಚಿಕ್ಕ ಗಾತ್ರದ ಅಕ್ಷರದ ಪ್ರಾಕಾರಗಳನ್ನು 'ಓದುವುದಿಲ್ಲ 'ಏಕೆಂದರೆ</u> —

ಅ) ಸರಿಯಾಗಿ 'ಓದಲು ಬಾರದು　　ಬ) ಕಣ್ಣಿನ ದೋಷದಿಂದ
ಕ) ವೇಳೆ ಅಭಾವ　　ಡ) ಇಷ್ಟವಿಲ್ಲ



ದತ್ತಾಭಲೇಖ — 12




ದತ್ತಾಧಲೇಖ – 12 :

ನವಸಾಕ್ಷರರ 'ಓದುವ ಹವ್ಯಾಸವನ್ನು ಅನುಲಕ್ಷಿಸಿ ಚಿಕ್ಕ ಗಾತ್ರದ ಅಕ್ಷರಯುಕ್ತ ವಾಕ್ಯವೃಂದ(ಪ್ಯಾರಾ) ವನ್ನು ' ವೇಳೆಯ ಅಭಾವದಿಂದ • 'ಓದಲು ಮನಸ್ಸು ಮಾಡುವದಿಲ್ಲ • ಎಂಬ ಪ್ರತಿಕ್ರಿಯೆಗೆ ಈ ದತ್ತಾಧಲೇಖದಲ್ಲಿಯ ಎತ್ತರದ ಸ್ತಂಭಗಳ ವ್ಯಕ್ತಪಡಿಸುವ ಪ್ರತಿಶತ ಪ್ರಮಾಣಗಳಿಂದ ತಿಳಿಯುತ್ತದೆ. ಇದಕ್ಕೆ ಪೂರಕವಾಗಿ ಹೇಳುವದೆಂದರೆ, ಕಲಿಕಾ ಹಂತದಲ್ಲಿ 18 ಪಾಯಿಂಟಗಿಂತಲೂ ಚಿಕ್ಕ ' ಗಾತ್ರದ • ಅಕ್ಷರಯುಕ್ತ ಪದಗಳನ್ನು 'ಓದಿ ರೂಢಿಯಾದುದು, ಹಾಗೂ ಈ ನವ 'ಓದುಗರು ಸಾಮಾನ್ಯವಾಗಿ ಸಮಾಜದ ಮಧ್ಯಮ ಹಾಗೂ ಕೆಳ ಹಂತದಲ್ಲಿರುವದರಿಂದ (ವರ್ಗ), ಸ್ತ್ರೀಯರಿಗಿಂತಲೂ ಪುರುಷರು ತಮ್ಮ ಕುಟುಂಬಕ್ಕೆ ಆದಾಯ ತರುವ ಕೇಂದ್ರ ಸ್ತಂಭಗಳಾಗಿದ್ದು ಪ್ರಮುಖವಾಗಿ ಕೃಷಿ ಹಾಗೂ ದೈನಿಕ ಕೂಲಿಯಂತಹ ದೈಹಿಕ ಶ್ರಮಾಧಾರಿತ ಕಾರ್ಯಗಳಲ್ಲಿ ತಮ್ಮನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವದರಿಂದ ದಿನಪತ್ರಿಕೆ, ವಾರಪತ್ರಿಕೆಗಳಂತಹ ಸಾಹಿತ್ಯದಲ್ಲಿ ಪೂರ್ಣ ಅವಧಾನ ಕೇಂದ್ರೀಕರಿಸಿ ಎಲ್ಲ ಚಿಕ್ಕ ಚಿಕ್ಕ ಪ್ಯಾರಾಗಳನ್ನು 'ಓದುವಷ್ಟು ವೇಳೆ ಹಾಗೂ ತಾಳ್ಮೆ ಈ ವಯಸ್ಕ ನೂತನ 'ಓದುಗರಿಗೆ ಬರಲಾರದು ಎಂಬ ಸಂಗತಿಗಳು ಹಿನ್ನೆಲೆಯಾಗಿ ಧ್ವನಿಸುತ್ತವೆ.

ಸಾಮಾನ್ಯವಾಗಿ 'ಓದುವುದು ಯಾವಾಗ —

ಅ)ದಿನಾಲು ಬ)ವಾರಕ್ಕೆರಡು ಸಲ ಕ)ಮನಸ್ಸು ಬಂದಾಗ
ಡ)ವೇಳೆ ಸಿಗುವುದಿಲ್ಲ.



ದತ್ತಾಭರೇಖೆ — 13




ದತ್ತಾಧಲೇಖ – 13 :

ನವ ಸಾಕ್ಷರರು ಓದುವ ಅಭಿರುಚಿ, ಆಸಕ್ತಿ ಇಟ್ಟುಕೊಂಡಿರುವ ಸಂಗತಿಯು ದತ್ತಾಧಲೇಖ – 13ರಿಂದ ತಿಳಿದು ಬರುತ್ತದೆ. ನಗರದ ಸ್ತ್ರೀ ಓದುಗರು ಹಾಗೂ ಗ್ರಾಮೀಣ ಪುರುಷ ನವ ಓದುಗರು ಸಾಮಾನ್ಯವಾಗಿ ಬಿಡುವು ಮಾಡಿಕೊಂಡು ದಿನಾಲು ಓದುವ ಪ್ರವೃತ್ತಿಯವರಾಗಿದ್ದಾರೆ. ಇವರಿಗೆ ಹೋಲಿಸಲಾಗಿ ಗ್ರಾಮೀಣ ಸ್ತ್ರೀ ನವ ಸಾಕ್ಷರರ ಈ ಪ್ರವೃತ್ತಿ ಕ್ಷೀಣವಾಗಿರುವುದಕ್ಕೆ, ಅವರು ವಾಸಿಸುವ ಪ್ರಾದೇಶಿಕ(ನಗರ:ಗ್ರಾಮೀಣ) ಸಾಮಾಜಿಕ ಸ್ಥಿತಿಗಳು ಕಾರಣಗಳಾಗಿರಬಹುದು. ಇದೇ ಪ್ರವೃತ್ತಿಯನ್ನು ನಗರದ ಪುರುಷ ನವ ಓದುಗರಲ್ಲಿಯೂ ಕಾಣಬಹುದು.

ಎಷ್ಟು ಹೊತ್ತು ಓದಿದೀರಿ (ಕೊಟ್ಟ ಪುಸ್ತಕ ಕುರಿತು) —

ಅ)ಬಹಳ ಬಹಳ ಓದಿದೇವೆ ಬ)ಬಹುವಿಲ್ಲದೇ ಓದಿದೇವೆ
ಕ)ವೇಳೆ ನೋಡಿಲ್ಲ ಡ)ಒಂದುವರೆ ತಾಸು ಇ)2 ತಾಸಿನ ವೇಳೆ



ದತ್ತಾಭಿಲೇಖ — 14




<u>ದತ್ತಾಫಲೇಖ -14 :</u>

ಕ್ಷೇತ್ರಾಧ್ಯಯನದಲ್ಲಿ ಪೂರ್ವಭಾವಿಯಾಗಿ 'ಓದಲಿಕ್ಕೆ ಒಬ್ಬರಿಗೆ ಒಂದರಂತೆ ಒದಗಿಸಿದ ಪಠ್ಯ ಪುಸ್ತಕಗಳನ್ನು ನವ ಸಾಕ್ಷರರು' ಬಿಡುವಿಲ್ಲದೇ 'ಓದಿದ್ದೇವೆ' ಎನ್ನುವ ಅಭಿಪ್ರಾಯ ಪ್ರತಿಕ್ರಿಯೆಗಳ ಅಧಿಕ ಪ್ರಮಾಣವನ್ನು ಅವಲೋಕಿಸಿದಾಗ , ಪಠ್ಯಗಳು 'ಓದಲಿಕ್ಕೆ ಆಸಕ್ತಿ ಹುಟ್ಟಿಸಿ ಅವರನ್ನು ಕ್ರಿಯಾ ಶೀಲವಾಗಿಸಿವೆ ಎಂಬುದು ಪಠ್ಯದ ಆಕರ್ಷಣೀಯ ಮುಖ ಪುಟ, ಸೂಕ್ತ ಗಾತ್ರದ ಪಠ್ಯಗಳು, ಆಸಕ್ತಿದಾಯಕ ವಿಷಯ ವಸ್ತು ಅವರಿಗೆ ಪ್ರೇರಕ ಅಂಶಗಳು ಎಂಬುದು ಪ್ರತ್ಯಕ್ಷ ಗಮನಕ್ಕೆ ಬಂದ ಸಂಗತಿ. ಇದು ' ಪಠ್ಯಗಳು ಉಪಯುಕ್ತ ವಾಗಿವೆ' ಎಂಬುದಕ್ಕೆ ಪೂರಕ ಅಂಶ.(ದತ್ತಾಫಲೇಖ – 14 ರ ಅವಲೋಕನ) ದತ್ತಾಫಲೇಖಗಳು 12, 13, 14ರ ಸರಾಸರಿ ಪ್ರತಿಶತಗಳು ವಿಶ್ಲೇಷಣಾ ಪ್ರತಿಶತ ಪರಿಮಿತಿಗಳ ವ್ಯಾಪ್ತಿಯಲ್ಲಿ ಬಾರದಿದ್ದರೂ ಅಧ್ಯಯನದ ಉದ್ದೇಶ ಗಳ ಸಾಧನೆಯಲ್ಲಿ ಪೂರಕ ಅಂಶಗಳನ್ನು ನೀಡುವುದರಿಂದ ಇಲ್ಲಿ ಪರಿಗಣಿಸಲಾಗಿದೆ.

ಹೇಗೆ ಓದಿದರು —

ಅ)ಮನಸ್ಸಿನಲ್ಲಿ ಬ)ಗಟ್ಟಿಯಾಗಿ ಕ)ಎರಡೂ ರೀತಿಯಿಂದಲೂ



ದತ್ತಾಭಿಲೇಖ — 15



ದತ್ತಾಧಿಲೇಖ – 15 :


ನಗರದ ಪುರುಷ ನವ 'ಓದುಗರನ್ನು ಹೊರತುಪಡಿಸಿ, ಇನ್ನುಳಿದ ಎಲ್ಲ ನವ ಸಾಕ್ಷರರ ಪ್ರತಿಕ್ರಿಯೆ ಪ್ರಮಾಣಗಳು ಮುಖ್ಯವಾಗಿ ' ಮೌಖಿಕ ವಾಚನಕ್ಕೆ ' ಆದ್ಯತೆಯನ್ನು ಕೊಟ್ಟಿರುವ ಸಂಗತಿ ದತ್ತಾಧಿಲೇಖ 15ರಿಂದ ತಿಳಿಯುತ್ತದೆ.

ಈ ಗಟ್ಟಿ ವಾಚನದ ಅಂತ್ಯ ಹಾಗೂ ಆದ್ಯತೆಗೆ ಕಾರಣ ಕಲಿಕಾ ಹಂತದಲ್ಲಿ ಬಾಯಿಯೋದಿಗೆ ಪ್ರಾಶಸ್ತ್ಯ ನೀಡಿ ಆಚರಣೆಗೆ ತಂದುದು, ಅದಕ್ಕೆ ಹಿನ್ನೆಲೆಯಾಗಿ, ವಾಚನವು ಒಂದು ಮನೋ ಜೈವಿಕ ಚಟುವಟಿಕೆಯಾಗಿರುವುದರಿಂದ, 'ಏಕ ಕಾಲಕ್ಕೆ ಮೌಖಿಕ ಅಂಗಗಳು ಮತ್ತು ಕಿವಿಯ ಅಂಗಗಳು, ಕಣ್ಣುಗಳ ಮೂಲಕ ' ಮೆದುಳು ಕ್ರಿಯಾಶೀಲವಾಗುವುದರಿಂದ ಅಕ್ಷರ, ಪದಗಳು, ಆರಂಭಿಕ 'ಓದುಗರಿಗೆ ರೂಢಿಗೊಳ್ಳಲು 'ಓದಿನಲ್ಲಿ 'ಏಕಾಗ್ರತೆ ತಂದು ಕೊಂಡು ಅಕ್ಷರ ಸ್ಮರಣ ತರಬೇತಿಯಾಗುತ್ತಾ ಮನಸ್ಸಿನಲ್ಲಿ ದೃಢೀಕರಣಗೊಳ್ಳಲು, ಉಚ್ಚಾರಣಾ ಅಸ್ಪಷ್ಟತೆಗಳನ್ನು, ಸಾಧ್ಯವಾದಷ್ಟು ನಿವಾರಿಸಿಕೊಳ್ಳುವ ಬಯಕೆಯೂ ಇಲ್ಲಿ ವ್ಯಕ್ತವಾಗುತ್ತದೆ. ಆದರೆ ನಗರ ಪ್ರದೇಶದ ನೂತನ ಸಾಕ್ಷರರಲ್ಲಿ ಈ ಅಂತ್ಯಯ ಕುರಿತು ಸ್ವಲ್ಪ ಸಂಕೋಚ, ಆಸಕ್ತಿಯ ಕೊರತೆಗಳು ಕಂಡರೂ ಅವರು ಮೌನ 'ಓದಿಗೆ ಆದ್ಯತೆ ನೀಡಿರುವರು.

ಈ ವಾಚನ ರೂಢಿಯ ಹಿಂದಿನ ಸೂಕ್ಷ್ಮತೆಯಿಂದ, ಅಕ್ಷರ ಕಲಿಯುವಿಕೆ, ರೂಢಿಸಿಕೊಂಡುದನ್ನು (ಕಲಿತುದನ್ನು) ಪ್ರಯೋಜನ ಪಡಿಸಿಕೊಳ್ಳಬೇಕೆಂಬ ಪ್ರಯತ್ನಶೀಲ ಮನೋಭಾವವನ್ನು, ನವ 'ಓದುಗರಲ್ಲಿ ಗುರುತಿಸಬಹುದು.

<u>ಪುಸ್ತಕದಲ್ಲಿ ಬಳಸಿದ ಪದಗಳು (ಶಬ್ದಗಳು)</u>—

ಅ) ಚಿಕ್ಕ ಪದಗಳು ಬ) ಉದ್ದನೆಯ ಪದಗಳು ಕ) ಉಚ್ಚರಿಸಲು ಕಷ್ಟ
ಡ) ಒತ್ತಕ್ಷರ ಪದಗಳು ಇ) ಕಷ್ಟವಿಲ್ಲ (ಓದಲು)



ದತ್ತಾಭರೇಖ — 16




ದತ್ತಾಧಿಲೇಖ – 16 :

ಪರೀಕ್ಷೆಗಳ ನಿರೂಪಣೆಯಲ್ಲಿ ಬಳಸಿದ ಪದಗಳು 'ಓದಲು ಅನುಕೂಲಕರವಾಗಿವೆ – ಎಂಬ ಸಂಗತಿಯು ನಗರವಾಸಿ ನವ 'ಓದುಗರ ಪ್ರತಿಕ್ರಿಯೆಗಳ ಪ್ರತಿಶತ ಪ್ರಮಾಣಗಳ ಸರಾಸರಿ ಪ್ರಮಾಣಕ್ಕೆ ಧನಾತ್ಮಕವಾಗಿರುವುದು ದತ್ತಾಧಿಲೇಖ – 16ರಿಂದ ತಿಳಿಯುತ್ತದೆ. ಆದರೆ ಗ್ರಾಮೀಣವಾಸಿ ನವ 'ಓದುಗರ ದೃಷ್ಟಿಯಿಂದ ಶಬ್ದಗಳ ಬಳಕೆ ಇನ್ನಷ್ಟು ಸರಳೀಕರಣವಾಗಬೇಕೆಂಬುದು ಅವರ ಪ್ರತಿಕ್ರಿಯೆಗಳ ಸರಾಸರಿ ಪ್ರಮಾಣಕ್ಕೆ ಋಣಾತ್ಮಕವಾಗಿರುವುದರಿಂದ ಗೊತ್ತಾಗುತ್ತದೆ. ಇವರ ನೆಲೆಯಿಂದ ಪಠ್ಯದಲ್ಲಿ ಶಿಷ್ಟ ರೂಪಗಳನ್ನು ಸಾಧ್ಯವಾದಷ್ಟು ಕಡಿಮೆಗೊಳಿಸಿ ಆಡು ನುಡಿಯ ಪ್ರಾದೇಶಿಕ ರೂಪಗಳನ್ನು ಬಳಸುವುದು. ಆರಂಭಿಕ 'ಓದುಗರಿಗೆ ಆಸಕ್ತಿ ಮೂಡಿ, ಕಣ್ಣಿಗೆ ಕಟ್ಟುವ ಪದಗಳ ಬಳಕೆಯಿಂದ ಆ ಪದಗಳು ಯಾವುದೇ ಪರಭಾಷೆಗಳಿಂದ ಸ್ವೀಕೃತಗೊಂಡ ಪದಗಳಾಗಿದ್ದರೂ, ಅವು ನಮ್ಮ ಜನರಿಗೆ ಚಿರಪರಿಚಿತವಾಗಿ, ದೈನಿಕ ಬಳಕೆಯಲ್ಲಿನ ಪದಗಳಾಗಿರುವುದರಿಂದ, ಅವುಗಳ ಬದಲಾಗಿ ಅಚ್ಚಗನ್ನಡ ಪದಗಳನ್ನು ಬಳಸಿದಲ್ಲಿ ಗ್ರಹಿಕೆಗೆ ಕುಂಠಿತತೆ ಬರುತ್ತದೆ. ನಿದರ್ಶನವಾಗಿ – ಬಸ್ಸು, ಕಂಪ್ಯೂಟರ್, ರೈಲು, ಫೋನು ಮುಂತಾದ ರೂಪಗಳನ್ನು ನೋಡಬಹುದು. ಕಣ್ಣಿನ ಚಲನೆ ಹಿಮ್ಮೆಟ್ಟದೇ ಸರಾಗವಾಗಿ 'ಓದು ಸಾಗುವುದರಿಂದ ಶ್ರಮವಿಲ್ಲದೇ ಗ್ರಹಿಕೆಗೆ ಅನುಕೂಲವಾಗುವುದು.

ಸಾಧ್ಯವಾದಷ್ಟು ಒಂದು ಪದದಲ್ಲಿ 5–6 ಅಕ್ಷರಗಳಿಗಿಂತ ಅಧಿಕವಾಗದಂತೆ ನೋಡಿಕೊಳ್ಳುವುದು ಹಾಗೂ ಸಂಯುಕ್ತಾಕ್ಷರಗಳನ್ನು, ವಿಜಾತೀಯ ಒತ್ತಕ್ಷರಗಳನ್ನು ಕಡಿಮೆಗೊಳಿಸಿ ಸಾಧ್ಯವಿದ್ದ ಸಂದರ್ಭದಲ್ಲಿ, ದೀರ್ಘ ಪದಗಳನ್ನು ಅರ್ಥಕ್ಕನುಸಾರಿಯಾಗಿ ವಿಭಾಗಿಸಿ ಅಥವಾ ಪರ್ಯಾಯ ಸಮನಾರ್ಥಕ ರೂಪಗಳನ್ನು ಸಂಯೋಜಿಸಿದರೆ ಪಠಿಸಲು ಹಾಗೂ ಗ್ರಹಿಸಲು ಅನುಕೂಲವಾಗುವುದು ಹಾಗೆಯೇ ವೈಜ್ಞಾನಿಕ ಹಾಗೂ ತಾಂತ್ರಿಕ ವಿಷಯದ ಬರವಣಿಗೆಯಲ್ಲಿಯೂ ರಚನೆ ಹಾಗೂ ಅರ್ಥದ ದೃಷ್ಟಿಯಿಂದ ಸರಳ ರೂಪಗಳನ್ನು ಪಕ್ಕದ ಆವರಣದಲ್ಲಿ ಕೊಡುವುದು ಸುಲಭ ವಾಚನಕ್ಕೆ ದಾರಿ ಮಾಡಿ ಕೊಟ್ಟಂತೆ, ಜೊತೆಗೆ ವಾಚನ ಕುಷ್ಠತೆಗೆ ಎಡೆಕೊಡದಂತೆ ನೋಡಿಕೊಳ್ಳುವುದು ಸೂಕ್ತ.

ನಿಮಗೆ ಅಪರಿಚಿತ ಪದಗಳು — (ರಚನೆ ಹಾಗೂ ಅರ್ಥದ ದೃಷ್ಟಿಯಿಂದ)

ಅ) ಕಡಿಮೆ ಇವೆ (ಸುಮಾರಾಗಿವೆ) ಬ) ತುಂಬಾ ಹೆಚ್ಚಿವೆ ಕ) ಸಾಧಾರಣವಾಗಿವೆ
ಡ) ಇಲ್ಲ



ದತ್ತಾಭಲೇಖ — 17




ದತ್ತಾಧಿಲೇಖ – 17 :

ಪುಸ್ತಕಗಳ ಬರವಣಿಗೆಯಲ್ಲಿ ಅಪರಿಚಿತ ಪದಗಳ 'ಬಳಕೆ' ಸಾಧಾರಣ ಪ್ರಮಾಣದಲ್ಲಿದೆ ಎಂಬ ಅಭಿಪ್ರಾಯವನ್ನು ಕುರಿತು ವ್ಯಕ್ತಪಡಿಸಿದ ಪ್ರತಿಶತ ಪ್ರಮಾಣ ಸಂಖ್ಯೆಗಳೆಲ್ಲಾ ಸರಾಸರಿ (ಶೇ. 80.3) ಪ್ರತಿಶತಕ್ಕೆ ಸಾಮಾನ್ಯವಾಗಿ ಧನಾತ್ಮಕವಾಗಿವೆ ಎಂಬುದು ದತ್ತಾಧಿಲೇಖ 17ರಿಂದ ಗೋಚರಿಸುವ ಸಂಗತಿ. ಪಠ್ಯಗಳಲ್ಲಿ ಅಪರಿಚಿತ ರೂಪಗಳ ಬಳಕೆ ಅನಿವಾರ್ಯದ ಸಂಗತಿ ಎಂದು ತೋರುತ್ತದೆ. ಕಾರಣ ಈ ನವ ಸಾಕ್ಷರ ಪಠ್ಯಗಳ ಉಪಯುಕ್ತತೆಯು (ಬಳಕೆಯು) ವ್ಯಾಪ್ತಿ, ವಿಶಾಲವಾಗಿರುವುದರಿಂದ ನಿರೂಪಣೆಯಲ್ಲಿ (ಲಾಂಗ್ವೇಜ ಸ್ಟ್ಯಾಂಡರ್ಡ್ಸ) '' ಸಾಮಾನ್ಯ ಭಾಷಾ ಶಿಷ್ಟ ಸ್ಥಿತಿಯನ್ನು ಅನುಸರಿಸುವುದು ಪಠ್ಯ ರಚನಾ ವಿಭಾಗದ ಅನಿವಾರ್ಯತೆ ಎಂದು ಗೋಚರಿಸುತ್ತದೆ. ಅಲ್ಲಿ ಭಾಷೆಯ ಪ್ರಾದೇಶಿಕ, ಸಾಮಾಜಿಕ ವೈವಿಧ್ಯ ರೂಪಗಳ ಸ್ಥಾನದಲ್ಲಿ 'ಶಿಷ್ಟತೆ' ರೂಪುಗೊಂಡು ಆರಂಭಿಕ 'ಓದುಗರಿಗೆ (ಪ್ರಾದೇಶಿಕ ಹಿನ್ನೆಲೆಯಲ್ಲಿ) ಸಹಜವಾಗಿ ತೊಡಕಾಗುವುದು (ಇವರು ಹಿಂದೆ ಕೇಳಿಲ್ಲದ, 'ಓದಿರದ, ರಚನೆಯಲ್ಲಿ ಹಾಗೂ ಅರ್ಥ ಮಾಡಿಕೊಳ್ಳುವಲ್ಲಿ ಪಾರಿಭಾಷಿಕಗಳಾಗಿ ರೂಪಗಳು) ಆರಂಭಿಕ ವಯಸ್ಕ 'ಓದುಗರ ಕಣ್ಣುಗಳು ಪಠ್ಯದಲ್ಲಿ ಪರಿಚಿತ ಪದಗಳನ್ನೇ ಹೆಚ್ಚಾಗಿ ಹುಡುಕಾಡುವುದರಿಂದ, ಜೊತೆಗೆ ಆಸಕ್ತಿ ಕುದುರಬೇಕಾದರೆ, ನಿರೂಪಣೆಯಲ್ಲಿ ಸಾಧ್ಯವಾದಷ್ಟು ಪ್ರಮಾಣದಲ್ಲಿ ಗ್ರಾಮ್ಯರೂಪಗಳಿಗೆ ಆದ್ಯತೆಯ ಅವಶ್ಯಕತೆ ಕಾಣುತ್ತದೆ. ಇದರ ಪರಿಹಾರಾರ್ಥವಾಗಿ ಆಯಾ ಪ್ರಾದೇಶಿಕ ಬರಹಗಾರರ ಹಾಗೂ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಅರಿತ–ನುರಿತ ಅನುಭವಿಕರ ಸಹಾಯ ಪಡೆಯುವುದು ಸಮಂಜಸವೆಂದು ಕಾಣುತ್ತದೆ. ಇದರಿಂದ ಬರವಣಿಗೆಗೆ ಸ್ವಾಭಾವಿಕ ಗುಣ ಲಭಿಸಿ, ಆ ನಿರೂಪಣೆಗೆ (ವಯಸ್ಕ 'ಓದುಗರ ದೃಷ್ಟಿಯಿಂದ) ವಾಚನ ಸೊಗಸು ಹೆಚ್ಚುವ ಸಾಧ್ಯತೆಯುಂಟು, ಮಾತಿನ ಸ್ವರೂಪವನ್ನು ಬರವಣಿಗೆಯಲ್ಲಿ ತರುವುದು ಕಷ್ಟಸಾಧ್ಯವಾದರೂ ನವ 'ಓದುಗನಿಗೆ 'ಓದಲು ಕಷ್ಟಕರವಾಗಬಹುದು. ಈ ವಯಸ್ಕ 'ಓದುಗರಿಗೆ ಕಾಲಕ್ರಮೇಣ ಸಾಹಿತ್ಯದಲ್ಲಿ ಆಸಕ್ತಿ

ಹುಟ್ಟಬೇಕು. ಆದ್ದರಿಂದ ಇವರ ಸಲುವಾಗಿ ರಚಿಸಿದ ಸಾಹಿತ್ಯದಲ್ಲಿ ಗ್ರಾಮ್ಯ ರೂಪಗಳನ್ನು ಬಳಸಿದಷ್ಟು, ಮುಂದುವರಿಸುವ ಸಾಹಿತ್ಯದಲ್ಲಿ ಬಳಕೆ ಮಾಡದಿರುವುದು ವಿಹಿತವಾದುದು. ಸಾಧ್ಯವಾದ ಸಂದರ್ಭಗಳಲ್ಲೆಲ್ಲಾ ದೀರ್ಘ ಮತ್ತು ಸಮಾಸ ರೂಪಗಳನ್ನು ನಿರೂಪಣೆಯಲ್ಲಿ ನಿರಾಕರಿಸುವುದು ಹಿತವಾದುದು. ಅನಿವಾರ್ಯತೆ ಕಾಡಿದಾಗ ಗ್ರಹಿಕೆಗೆ ಅನುಕೂಲವಾಗುವ ದೃಷ್ಟಿಯಿಂದ, ಆವರಣದಲ್ಲಿ ಸಮಾನಾರ್ಥಕ ಪರ್ಯಾಯ ರೂಪಗಳನ್ನು ಕೊಡುವುದು ಸೂಕ್ತವಾದುದು.

<u>ಇಲ್ಲಿನ ವಾಕ್ಯಗಳು</u> —

ಅ)ಚಿಕ್ಕ ಚಿಕ್ಕವು ಬ)ಉದ್ದನೆಂತವು ಕ)ಸಂಕೀರ್ಣವಾದವು
ಡ)ಓದಲು ಕಷ್ಟದವು ಇ)ಬೇರೆ



<u>ದತ್ತಾಂಶಲೇಖ — 18</u>




ದತ್ತಾಧಲೇಖ – 18 :

ಪಠ್ಯಗಳ ಬರವಣಿಗೆಯು ಚಿಕ್ಕ ಚಿಕ್ಕ ವಾಕ್ಯಗಳಿಂದ ರಚಿತಗೊಂಡಿವೆ ಎಂಬ ಅಂತ್ಯವು ಕುರಿತು(ಸ್ತಂಭಾಲೇಖ–18) ಗ್ರಾಮೀಣ ಪುರುಷ ಹಾಗೂ ನಗರದ ಸ್ತ್ರೀ ನವ ಸಾಕ್ಷರರ ಪ್ರತಿಕ್ರಿಯೆಗಳ ಪ್ರಮಾಣಗಳನ್ನು ಅನುಲಕ್ಷಿಸಿದಾಗ ವಾಕ್ಯರಚನೆ ವಾಚಿಸಲು, ಗ್ರಹಿಸಲು ಅನುಕೂಲಕರವಾಗಿವೆ ಎಂಬ ಸಂಗತಿ ಕಂಡು ಬಂದರೆ, ಗ್ರಾಮೀಣ ಸ್ತ್ರೀಯರು ಹಾಗೂ ನಗರದ ಪುರುಷ ನವ ಸಾಕ್ಷರರ ಪ್ರತಿಕ್ರಿಯಾ ಪ್ರಮಾಣಗಳನ್ನು ಅವಲೋಕಿಸಿದಾಗ, ವಾಕ್ಯ ರಚನೆಯಲ್ಲಿ ಇನ್ನಷ್ಟು ಸರಳತೆ ತರುವ ಅಪೇಕ್ಷೆ ಎದ್ದು ಕಾಣುತ್ತದೆ. ಸರಾಸರಿ 5 ರಿಂದ 10 ಪದಗಳು ಒಂದು ವಾಕ್ಯದಲ್ಲಿ ಇರಬೇಕೆಂಬುದಾಗಿ ಅಖಿಲ ಭಾರತ ವಯಸ್ಕರ ಮಂಡಳಿಯು ನಡೆಸಿದ ಸಂಕೀರ್ಣದಲ್ಲಿ ಗೊತ್ತು ಮಾಡಲಾಗಿದೆ. ಸಮಿಶ್ರ ವಾಕ್ಯಗಳಿದ್ದಲ್ಲಿ ಅವುಗಳನ್ನು ಒಡೆದು ಸಾಧ್ಯವಾದಷ್ಟು ಅರ್ಥಕ್ಕನುಸಾರ ಚಿಕ್ಕ ವಾಕ್ಯಗಳನ್ನಾಗಿ ಮಾಡಬಹುದು. 'ಏಕೆಂದರೆ ವಾಕ್ಯಗಳ ಉದ್ದ ಬೆಳೆದಂತೆ ಪದಗಳ ಗುಂಪು ಸಹ ಬೆಳೆಯುವದು. ತತ್ಪರಿಣಾಮವಾಗಿ ವಾಕ್ಯಗಳನ್ನು ಅರ್ಥ ಮಾಡಿಕೊಳ್ಳಲು ಮಾನಸಿಕ ಶ್ರಮ ಹೆಚ್ಚುವದು ಅದನ್ನು ತಪ್ಪಿಸಲು ಪರಿಚಿತ ಪದಗಳಿಂದ ಸತ್ವಶಾಲಿಯಾದ ಕ್ರಿಯಾ ಪದಗಳಿಂದ ವಾಕ್ಯ ರಚನೆ ಅವಶ್ಯವಾದುದು.
ಕರ್ತರಿ ಪ್ರಯೋಗದಿಂದ ಕೂಡಿದ ವಾಕ್ಯಗಳು ಸತ್ವಶಾಲಿಯಾಗಿರುವವಲ್ಲದೇ, ನೇರವಾಗಿ ಓದುಗನಿಗೆ ಅರ್ಥ ನೀಡುವ ಶಕ್ತಿಯನ್ನು ಹೊಂದಿರುತ್ತವೆ. ಉದಾಹರಣೆಗಾಗಿ:- 'ನಮ್ಮ ಪ್ರಗತಿಗೆ ಮುಂದಾಗಲೇಬೇಕು'. ಎನ್ನುವದರ ಬದಲಾಗಿ 'ನಾವು ಪ್ರಗತಿಯಾಗಲೇಬೇಕು'. ಸಾಧ್ಯವಾದಷ್ಟು(ಉ.ಪುರುಷ ಹಾಗೂ ಮ.ಪುರುಷ) ಸರ್ವನಾಮಯುಕ್ತ ವಾಕ್ಯರಚನೆಯ ಬರವಣಿಗೆ ನವಸಾಕ್ಷರರಿಗೆ ಉಚಿತವಾದುದೆಂದು ತೋರುತ್ತದೆ.

ಇಲ್ಲಿನ ಬರವಣಿಗೆ —

ಅ)ಅತ್ಯಂತ ಸರಳ ಬ)ಸರಳ ಕ)ಸಾಧಾರಣ ಡ)ಸ್ವಲ್ಪ ಕಷ್ಟ
ಇ)ಅತ್ಯಂತ ಕಷ್ಟ.




ದತ್ತಾಭಿರೇಖ — 19

ದತ್ತಾಧಿರೇಖ – 19 :

ಪಠ್ಯದ ಬರಹ ನಿರೂಪಣೆಯು 'ಸರಳ' ವಾಗಿದೆ ಎಂಬ ಅಭಿಪ್ರಾಯವು ಸಾಮಾನ್ಯವಾಗಿ ಎಲ್ಲ ನವ ಸಾಕ್ಷರರಲ್ಲಿಯೂ ಸಾರ್ಥಕತೆಯನ್ನು ಪಡೆದಿದೆ ಎಂಬುದು ದತ್ತಾಧಿರೇಖ – 19ರ ಎಲ್ಲ ಪ್ರತಿಕ್ರಿಯೆಗಳ ಪ್ರತಿಶತಗಳ ಶೇ.+60 ಪ್ರಮಾಣದಿಂದ ತಿಳಿದು ಬರುತ್ತದೆ. ಆದರೆ ಗ್ರಾಮೀಣ ಸ್ತ್ರೀ ಹಾಗೂ ನಗರದ ಪುರುಷರ ಪ್ರತಿಕ್ರಿಯಾ ಪ್ರಮಾಣಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಪಠ್ಯಗಳ ಬರವಣಿಗೆಗೆ ಸೂಕ್ತ ಪರಿಷ್ಕಾರ ಅವಶ್ಯವೆಂದು ಕಾಣುತ್ತದೆ. ಸ್ವಲ್ಪ ಉತ್ಪ್ರೇಕ್ಷೆಯಲ್ಲಿ ಹೇಳುವುದಾದರೆ – ಬರವಣಿಗೆಯು ಜೀವಾಳ ಪದಗಳು ಮತ್ತು ವ್ಯವಸ್ಥಿತ ನಿಕಟತಮ ಸಂಯೋಜನೆ. 'ಓದುಗರ ಕಣ್ಣಿಗೆ ಮತ್ತು ಕಿವಿಗೆ ಆಹ್ಲಾದಯಮಾನವಾಗಿ ಇರುವುದು. ಮೂಗಿಗೆ ಸುವಾಸನೆ ಬಂದಂತೆ, ಸ್ಪರ್ಶ ಮಾಡಿದ ಭಾವನೆ ಬರುವಂತಹ ಪದಗಳು ಅವಶ್ಯಕ. ಉದಾಹರಣೆಗೆ – ಮಾತು ಅರಳಿಯಂತೆ ಮೃದು ಶ್ರೀ ಗಂಧದ ವಾಸನೆಯಂತೆ ಹಿತ. ಕಿವಿಗೆ ಗೆಜ್ಜೆನಾದದಂತೆ ಕಿತ್ತಳೆಹಣ್ಣಿನ ಬಣ್ಣದಂತೆ ರಂಜಿಸಬೇಕೆನಿಸುತ್ತದೆ. ಒಂದು ದೃಷ್ಟಿಯಿಂದ ಬರಹಗಾರ ಮಾನಸಿಕವಾಗಿ 'ಓದುಗನ ಪರಕಾಯ ಪ್ರವೇಶ ಮಾಡಿ ಅವನ ಪೂರ್ವ ಸಿದ್ಧತೆ ಹಾಗೂ ಕಲಿಕಾ ಸ್ಥಿತಿಗಳನ್ನು ಅರಿತಂತೆ 'ಓದುಗಾರಿಕೆ ತೃಪ್ತಿಕರವಾಗಬೇಕಾದರೆ 'ಓದುವವನ ಅರ್ಥ ಗ್ರಹಣ, ಪದಸಂಪತ್ತು ಹಾಗೂ ಭಾಷಾನುಭವದ ಮುನ್ನೆಲೆ, ಇವುಗಳಿಗನುಗುಣವಾಗಿ ಬರವಣಿಗೆ ಇರಬೇಕಾದುದು ಉಚಿತ.

<u>ನಿಮಗಿಷ್ಟವಾದ ಬರವಣಿಗೆ — (ಅರ್ಥವಾಗುವ)</u> —

ಅ) ಮಾತನಾಡುವ ರೀತಿ ಬ) ಪ್ರಶ್ನೋತ್ತರ ರೀತಿ
ಕ) ವಿವರಣೆಯ ರೀತಿ ಡ) ಯಾವುದಿದ್ದರೂ ಸರಿ




<u>ದತ್ತಾಭಲೇಖ — 20</u>

ದತ್ತಾಧಿಲೇಖ – 20 :

(ವಾಚನ) 'ಓದುಗಾರಿಕೆ ಸುಧಾರಿಸಬೇಕಾದರೆ, ಕಣ್ಣಿನ ನಿಲುಗಡೆ (ಫಿಕ್ಸೇಷನ್) ವೇಗವಾಗಬೇಕು, ಅದಕ್ಕೆ ಬರವಣಿಗೆ ವಾಚ್ಯ ಶಕ್ತಿಯಿಂದ ಕೂಡಿರಬೇಕಾದುದು ಅಗತ್ಯ. ಇದಕ್ಕೆ ದತ್ತಾಧಿಲೇಖ –20 ರಲ್ಲಿಯ '' ಮಾತಾಡುವ ರೀತಿಯ' ಬರವಣಿಗೆಯು 'ಓದಲು ಇಷ್ಟವಾದುದು'' ಎಂಬ ಅಂಶವು ಕುರಿತು – ನಗರದ ಪುರುಷ ನವಸಾಕ್ಷರರನ್ನು ಹೊರತುಪಡಿಸಿ ಉಳಿದೆಲ್ಲ ನವ 'ಓದುಗರ ಪ್ರತಿಶತ ಪ್ರಮಾಣಗಳು ಅನುಕೂಲಕರವಾಗಿವೆ. ಬರವಣಿಗೆ ಮಾತನಾಡಿದಂತೆ ಸಾಧ್ಯವಾದಷ್ಟು ಪ್ರಮಾಣದಲ್ಲಿ ಸರಳವಾಗಿದ್ದರೆ ನವ 'ಓದುಗ ಮಾತನಾಡುವ ಭಾಷೆಯನ್ನು ಬರಹದ ಅಚ್ಚಿನಲ್ಲಿ ನೋಡಿದಾಗ ಅವನು ಸುಲಭವಾಗಿ ಆಕರ್ಷಿತನಾಗಿ ಗ್ರಹಿಸಲು ಮುಂದಾಗುವನು. ಇಲ್ಲಿ ಲೇಖಕ ತನಗೆ ಕಾಣದಿರುವ 'ಓದುಗರೊಡನೆ ಬರಹದ ಮೂಲಕ ಮಾತನಾಡುವನು. ಆದ್ದರಿಂದ ಮುಖತಃ ಸಂಭಾಷಣೆ ಮಾಡಿದಷ್ಟೇ ಸಹಜತೆಯನ್ನು ಬರಹದಲ್ಲಿ ತರುವಷ್ಟು ಪ್ರಯತ್ನಿಸುವುದು. '' ಬರಹ ಯಾವ ರೀತಿ ಇರಬೇಕು'' ? ಎಂಬುದರ ಬಗ್ಗೆ ಅನೇಕ ಸಂಶೋಧನೆಗಳನ್ನು ನಡೆಸಿ ವಾಚನ ಶಕ್ತಿಯ ಅಳತೆ ಗೋಲುಗಳನ್ನು ಕಂಡು ಹಿಡಿಯುವಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಮುಂದಾಗಿವೆ. ಆದರೆ ಕನ್ನಡದ ಸಂದರ್ಭದಲ್ಲಿ ಈ ರೀತಿಯ ಸಂಶೋಧನೆಗಳ ಪ್ರಮಾಣ ಕಡಿಮೆ ಎನ್ನಬಹುದು. ಬರೆದ ಬರಹವನ್ನು ಹೆಚ್ಚು ಸಾರಿ ತಿದ್ದಿ ಬರೆಯುವುದರಿಂದ ಮಾತ್ರ, ಒಳ್ಳೆಯ ಬರಹ ಸಾಧ್ಯ ಎಂಬುದು ಬಲು ಮಟ್ಟಿಗೆ ಸತ್ಯವಾದುದು. ನಗರದ ಪುರುಷ ನವ 'ಓದುಗರ ದೃಷ್ಟಿಯಿಂದ ಪಠ್ಯಗಳ ಬರವಣಿಗೆಯು ಇನ್ನೊಂದಾವೃತ್ತಿಯಲ್ಲಿ ಬರಹದಲ್ಲಿದು ಪರಿಷ್ಕಾರವಾಗ ಬೇಕಾದುದು ಅಗತ್ಯವೆಂದು ತೋರುತ್ತದೆ.

ಹೇಗೆ ಓದಿದಾಗ ನಿಮಗೆ ಸುಲಭವಾಗಿ ಅರ್ಥವಾಗುವುದು —

ಅ)ಗಟ್ಟಿಯಾಗಿ ಬ)ಮನಸ್ಸಿನಲ್ಲಿ ಕ)ಓದಿಸಿ ಕೇಳುವುದರಿಂದ
ಡ)ಎರಡೂ ರೀತಿಯಿಂದಲೂ (ಅ+ಕ) ಇ)ಅ+ಕ



	ನ·ಪು	ನ·ಸ್ತ್ರೀ	ಗ್ರಾ·ಪು	ಗ್ರಾ·ಸ್ತ್ರೀ
	32 23 0 0 0 0	60 31 1 1 0 0	69 26 0 0 0 0	48 29 0 0 0 0
% -	58.1	60.9	68.6	62.3

ದತ್ತಾಂಶರೇಖೆ — 21




ದತ್ತಾಧಿಲೇಖ – 21.:

ಸಾಮಾನ್ಯವಾಗಿ ನವಸಾಕ್ಷರರಿಗೆ ಗಟ್ಟಿಯಾಗಿ ಓದುವುದರಿಂದಲೇ ಸುಲಭವಾದ ಗ್ರಹಿಕೆಗೆ ಅನುಕೂಲವಾದುದು ಎಂಬುದು ದತ್ತಾಧಿಲೇಖ–21 ರಿಂದ ವ್ಯಕ್ತವಾಗುತ್ತದೆ. ಈ ಬಾಯ್ತೋದು ವಯಸ್ಕ ನವ ಓದುಗರ ನೆಲೆಯಲ್ಲಿ ಮನೋ ವೈಜ್ಞಾನಿಕವಾಗಿ ಆರಂಭಿಕ ಹಂತದಲ್ಲಿ ಸಹಜವಾದುದು, ಈ ಚಟುವಟಿಕೆಯಲ್ಲಿ ಬಾಯಿ, ಕಣ್ಣು, ಮಿದುಳು, ಕೈಬೆರಳಿನ ಸ್ನಾಯುಗಳ ನಡುವೆ(ಬಾಯ್ತೋದಿನ ಕ್ರಮ) ನಿಕಟತಮ(ಬ್ರೈನ) ಸಂಬಂಧ ಏಕ ಕಾಲಕ್ಕೆ ಬೆಸೆಯುವುದರಿಂದ ಅಕ್ಷರ, ಪದ, ಸ್ಫುರಣೆಯಲ್ಲಿಯೂ, ಗ್ರಹಿಕೆಗೆ ಅನುಕೂಲಕಾರಿ ಇದೊಂದು ಪ್ರಜಾ ಪ್ರಭುತ್ವ ಮಾದರಿಯ ಕೌಶಲ್ಯವಾದರೂ, ಮೌನ ಓದಿನಿಂದ ಹೊರತಾದುದಲ್ಲ. ನಗರದ ಪುರುಷ ನವ ಓದುಗರಿಗೆ ಅರ್ಥವಾಗಲು ಎರಡೂ ರೀತಿಯ(ಬಾಯ್ತೋದು ಮತ್ತು ಮೌನ ಓದು) ಓದುಗಳನ್ನು ರೂಢಿಯಟ್ಟಿರುವುದು ಕ್ಷೇತ್ರ ಕಾರ್ಯದ ಮೂಲಕ ಕಂಡು ಕೊಂಡ ಸಂಗತಿ. ಬಾಯ್ತೋದಿನಲ್ಲಿ ಬೇಸರ ಬರದಂತೆ ನೋಡಿಕೊಳ್ಳಲು ಪಠ್ಯದ ಬರವಣಿಗೆಯ ರೀತಿಯಲ್ಲಿ ವಿಷಯ ವಸ್ತುವಿನಲ್ಲಿ ವೈವಿಧ್ಯತೆ ಅನುಸರಿಸುವುದು ಸೂಕ್ತ ಹಾಗೂ ಸುಲಭ ಗ್ರಹಿಕೆಗೆ ಅನುಕೂಲಕರವಾದುದು.

<u>ನಿಮಗೆ ಸುಲಭವಾಗಿ ಅರ್ಥವಾಗುವುದು —</u>

ಅ)ಒಂದೇ ಸಾರಿ ಓದುವುದರಿಂದ ಬ)2 ಸಲ ಕ)3 ಸಾರಿ ಡ)4 ಸಾರಿ
ಇ)ಇನ್ನೊಬ್ಬರು ತಿಳಿಸುವುದರಿಂದ.



ಸ್ತಂಭರೇಖೆ — 22




ದತ್ತಾಭಿಲೇಖ-22 :

ನವಸಾಕ್ಷರರಿಗೆ ಸುಲಭವಾಗಿ ಅರ್ಥವಾಗುವುದು '' ಪುನರಾವರ್ತನ ವಾಚನ ದಿಂದ ಎಂಬ ಸಹಜ ವಾಸ್ತವ ಸಂಗತಿಯನ್ನು ಪ್ರತಿನಿಧಿಸುತ್ತದೆ. ದತ್ತಾಭಿಲೇಖ – 22 ಒಟ್ಟು ಸ್ತ್ರೀಯರ ಈ ಅಂತ್ಯಂಯ ಕುರಿತು ಎರಡಾವೃತ್ತಿ ಓದಿದಾಗ ಸುಲಭವಾಗಿ ಗ್ರಹಿಸಬಹುದು. ಹಾಗೂ ವ್ಯಕ್ತಪಡಿಸುವ ಸಾಮರ್ಥ್ಯವನ್ನು (ತಮ್ಮ ಅಡುನುಡಿಯಲ್ಲಿ) ಹೊಂದಿರುವುದು ಕಾಣುತ್ತದೆ. ಅದರಲ್ಲಿಯೇ ವಿಶೇಷವಾಗಿ ನಗರದ ಸ್ತ್ರೀ ನವ ಓದುಗರ ಒಂದೇ ಸಾರಿ ಓದಿದರೆ ಗ್ರಹಿಸುವ ಸಾಮರ್ಥ್ಯವನ್ನು ಪಡೆದಿರುವುದನ್ನು ನಿರ್ದಿಷ್ಟ ಸ್ತಂಭವು (19) ತೋರಿಸುತ್ತದೆ. ಹಾಗೂ ಪೂರಕವಾಗಿ ಗ್ರಹಿಕೆಗೆ ಸಂಬಂಧಿಸಿದಂತೆ ಪ್ರಶ್ನಾವಳಿಗಳನ್ನು ಹಾಕಿ ಪ್ರತಿಕ್ರಿಯೆಗಳನ್ನು ಧ್ವನಿ ಸುರುಳಿಯಲ್ಲಿ ಮುದ್ರಣ ಮಾಡಿಕೊಂಡಿದ್ದು ಆಧಾರವಾಗಿದೆ. ಇಲ್ಲಿ ನಡುವೆ ಶಾಲೆ ಬಿಟ್ಟು ಕಲಿಕಾ ಕೇಂದ್ರದಲ್ಲಿ ಸೇರಿ ತಮ್ಮ ಕಲಿಕಾ ಸ್ಥಿತಿಯನ್ನು ಪುನಃಶ್ಚೇತನ ಗೊಳಿಸಿಕೊಂಡವರು, ಗ್ರಹಿಕೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಧನಾತ್ಮಕವಾಗಿ ಸ್ಪಂದಿಸಿದ್ದು ನೋಡಿದರೆ ಇವರಿಗೆ ಹೆಚ್ಚಿನ ಮಟ್ಟದಲ್ಲಿ ಪಠ್ಯಗಳು ಉಪಯುಕ್ತ ವಾಗಿದ್ದು ಕಾಣುತ್ತದೆ. ಆದರೆ ನಗರದ ಪುರುಷರ ಗ್ರಹಿಕಾ ಸಾಮರ್ಥ್ಯ ನಿಧಾನವಾಗಿದ್ದು ಹೆಚ್ಚಿನ ಪುನರಾವರ್ತನ ಓದು ಗ್ರಹಿಕೆಗೆ ದಾರಿ ಮಾಡಿ ಕೊಡುತ್ತದೆ.

<u>ಪುಸ್ತಕದ ಹೆಸರು ಮತ್ತು ಒಳಮಾಹಿತಿಯ ಸಂಬಂಧ</u> —

ಅ)ಸಾಮಾನ್ಯ ಸಂಬಂಧ ಬ)ಸಂಬಂಧವಿಲ್ಲ ಕ)ಪರಸ್ಪರ ಪೂರಕ
ಡ)ನೇರ ಸಂಬಂಧ




ದತ್ತಾಲೇಖ – 23

ದತ್ತಾಫಲಕ – 23 :

ಪುಸ್ತಕದ ಹೆಸರು ಮತ್ತು ಒಳ ಮಾಹಿತಿಯ ಸಂಬಂಧ ಪರಸ್ಪರ ಪೂರಕವಾದುದು ಎಂಬ ಅಂಶವನ್ನು ಕುರಿತು ಬಂದ ಪ್ರತಿಶತ ಪ್ರಮಾಣಗಳು (ನಗರದ ಪುರುಷರನ್ನು ಹೊರತುಪಡಿಸಿ) ಸರಾಸರಿ ಪ್ರಮಾಣಕ್ಕೆ ಧನಾತ್ಮಕವಾಗಿ ಪೂರಕವಾಗಿರುವವು. ಇಲ್ಲಿ ಸ್ಪಷ್ಟವಾಗಿ ನವ 'ಓದುಗರ ವಸ್ತುನಿಷ್ಠ ಗ್ರಹಿಕೆಯ ಸಾಮರ್ಥ್ಯವನ್ನು ಗುರುತಿಸಬಹುದು. ಆದರೆ ನಗರದ ಪುರುಷ 'ಓದುಗರಿಗೆ ಅರ್ಥ ಸಂಬಂಧವನ್ನು ಗುರುತಿಸುವಲ್ಲಿ ಗ್ರಹಿಕೆಯ ಸಾಮರ್ಥ್ಯ ಸಾಲದು. ಆದ್ದರಿಂದ ಆವರ್ತನ ವಾಚನ ಗ್ರಹಿಕಾ ಸಾಮರ್ಥ್ಯದ ಬಲವರ್ಧನೆಗೆ ಕಾರಣವಾಗುತ್ತದೆ. ಇವರಿಗೆ ಆವರ್ತನ ವಾಚನ ರೂಢಿ ತುಂಬಾ ಅವಶ್ಯಕ(ದತ್ತಾಫಲಕ–23).

<u>ದೃಷ್ಟಾಂತಗಳ ಬಳಕೆ (ನಾಣ್ಣುಡಿ:ಉದಾಹರಣೆ:ಒಡಪು-ಒಗಟು:ಚಿತ್ರಗಳು)–</u>

ಅ)ಬಳಕೆಯಾಗಿವೆ ಬ)ಬಳಕೆಯಾಗಿಲ್ಲ ಕ)ಇನ್ನೂ ಪುಷ್ಟ ಬೇಕಿತ್ತು
ಡ)ಅಗತ್ಯವಿಲ್ಲ



<u>ದತ್ತಾಭಿಲೇಖ – 24</u>




<u>ದತ್ತಾಭಲೇಖ – 24</u> : ರ ಹಿನ್ನೆಲೆಯಲ್ಲಿ – ಪದ್ಯಗಳಲ್ಲಿ ದೃಷ್ಟಾಂತಗಳ ಅವಶ್ಯಕತೆಯುದ್ದಂ ಅವುಗಳ 'ಬಳಕೆ ಇನ್ನಷ್ಟು ಬೇಕಿತ್ತು' ಎಂಬ ಅಂಶವು ಕುರಿತು – ನಗರದ ಸ್ತ್ರೀ ಹಾಗೂ ಗ್ರಾಮೀಣ ವಾಸಿಗರ ಪ್ರತಿಶತ ಪ್ರಮಾಣಗಳು ಧನಾತ್ಮಕವಾಗಿರುವದರ ಸಂಕೇತ. ವಿಶೇಷವಾಗಿ ಸ್ತ್ರೀಯರಿಗೆ ಹಾಗೂ ಗ್ರಾಮ ವಾಸಿಗರಿಗೆ ದೃಷ್ಟಾಂತಗಳೆಂದರೆ ಅಚ್ಚು–ಮೆಚ್ಚು. ಈ ದೃಷ್ಟಾಂತಗಳೆಂದರೆ, ಗಾದೆ ಮಾತು, ನಾಣ್ಣುಡಿ, ಒಗಟು, – ಒಡಪು, ಚಿತ್ರಗಳು, ಉದಾಹರಣೆ, ಮುಂತಾದವು ವಿಶಾಲವಾದ ಮಾಹಿತಿ, ವಿವರ, ವಿಚಾರಗಳ ತಿರುಳನ್ನು ಸಂಕ್ಷಿಪ್ತದಲ್ಲಿ ಹಿಡಿದಿರಿಸಿಕೊಂಡ ಚಿಕ್ಕ ಚಿಕ್ಕ ವಾಕ್ಯಗಳಾಗಿದ್ದರೂ (ನುಡಿಗಳು) 'ಓದುಗರ ಅಥವಾ ಕೇಳುಗರ ಮೇಲೆ ನೇರವಾದ ಪ್ರಭಾವ ಬೀರುವ ಶಕ್ತಿ ಪಡೆದಿವೆ. ಸಾಮಾನ್ಯವಾಗಿ ಇವುಗಳನ್ನು ಜನಪದರ ಸಾಮಾಜಿಕ ಬದುಕಿನ ಅವಿಭಾಜ್ಯ ಅಂಗವಾಗಿ ಕಾಣಲು ಸಾಧ್ಯ.

ಉದಾಹರಣೆಗಾಗಿ : ಹೊಲಗದ್ದೆ ಕೆಲಸ ಮಾಡಿ, ವಿಶ್ರಾಂತಿಯ ವೇಳೆಯಲ್ಲಿ, ಸ್ತ್ರೀಯರ ಮಾತು ಕತೆಯಲ್ಲಿ, ಮದುವೆ ಮುಂತಾದ ಸಂದರ್ಭಗಳಲ್ಲಿ ಇವುಗಳ ಪ್ರಯೋಗದ ವಿಪುಲತೆಯನ್ನು ಕಾಣಬಹುದು. ಪದ್ಯ ನಿರೂಪಣೆಯಲ್ಲಿ ಅಲ್ಲಲ್ಲಿ ಸಾಂದರ್ಭಿಕವಾಗಿ ಬಳಸುವದರಿಂದ 'ಓದುಗರಿಗೆ ಅಲ್ಲಿನ ಮಾಹಿತಿ, ವಿವರ, ಆಶಯವನ್ನು ಗ್ರಹಿಸುವಲ್ಲಿ ಪೂರಕ ಪಾತ್ರ ವಹಿಸಿ ಬರವಣಿಗೆಗೆ ವಾಚನೀಯತೆ ಮೆರಗನ್ನು ತರಲು ಸಾಧ್ಯ. ನವ ಸಾಕ್ಷರ ಮಾಲೆಯಲ್ಲಿ 'ಗಾದೆಗಳು' 'ಒಗಟು – ಒಡಪು' ಸಂಗ್ರಹ ಪದ್ಯ ಗಳಿರುವದು ಔಚಿತ್ಯಪೂರ್ಣ ಸಂಗತಿ.

ಪುಸ್ತಕದಿಂದಾದ ಲಾಭಾಂಶಗಳು —

ಅ)ಹೊಸ ಮಾಹಿತಿ ಸಿಕ್ಕಿತು ಬ)ಖುಷಿ ಕೊಟ್ಟಿತು ಕ)ಲಾಭವಿಲ್ಲ
ಡ)ಹೆಚ್ಚಿನ 'ಓದಿಗೆ ಪ್ರೇರಣೆ ಇ)ವಿರಾಮಕಾಲದ ಸದುಪಯೋಗ



ದತ್ತಾಭಲೇಖ — 25




ದತ್ತಾಭಿಲೇಖ – 25 :

ಪಠ್ಯಗಳಿಂದ 'ಹೊಸ ಮಾಹಿತಿ ದೊರೆತು', ಹೆಚ್ಚಿನ 'ಓದಿಗೆ ಪ್ರೇರಣೆ ದೊರೆಯಿತು' ಎಂಬ ಅಂಶಗಳ ಕುರಿತ ಪ್ರತಿಕ್ರಿಯೆಗಳ ಪ್ರತಿಶತ ಪ್ರಮಾಣಗಳೆಲ್ಲವೂ ಧನಾತ್ಮಕವಾಗಿವೆ. ಈ ಹಿನ್ನೆಲೆಯನ್ನು ಗಮನಿಸಲಾಗಿ ಸಾಕ್ಷರೋತ್ತರ ಕಾರ್ಯಕ್ರಮಕ್ಕಾಗಿ ರಚಿಸಿದ ಪಠ್ಯ ರಚನೆಯ ಮುಖ್ಯ ಉದ್ದೇಶವಾದ ಕಲಿತ ಅಕ್ಷರ ಮರೆಯದಂತೆ, ಅದನ್ನು ಮುಂದುವರಿಸಿಕೊಂಡು ಬೆಳೆಸಿಕೊಳ್ಳಲು, ದೈನಂದಿನ ಬದುಕಿನಲ್ಲಿ ರೂಢಿಗೊಳಿಸಲು ಪಠ್ಯಗಳು ವೈವಿಧ್ಯಮಯವಾದ ವಿಷಯ ವಸ್ತುಗಳಿಂದ ತುಂಬಾ ಉಪಯುಕ್ತವಾಗಿವೆ. ಹಾಗೂ ಇವು ಹಂತ ಹಂತವಾಗಿ ನವ ಸಾಕ್ಷರರಲ್ಲಿ ಸಾರ್ಥಕ್ಯವನ್ನು ಹೊಂದುವಲ್ಲಿ ಎರಡು ಮಾತಿಲ್ಲ ಎಂಬುದು ಕಂಡುಕೊಂಡ ಸಂಗತಿ.

ವಿಶೇಷವಾಗಿ 'ವೃತ್ತಿ' ಹಾಗೂ ಸ್ತ್ರೀಯರಿಗೆ ಸಂಬಂಧಿಸಿದಂತಹ ಪಠ್ಯಗಳು ಸ್ವ-ಉದ್ಯೋಗ ಮಾರ್ಗದರ್ಶಿ ಕೈಪಿಡಿಗಳಾಗಿ ಉಪಯುಕ್ತ ಮಾಹಿತಿಯನ್ನು ಒದಗಿಸಿ ಸಾಕ್ಷರೋತ್ತರ ಕಾರ್ಯಕ್ರಮದ ಉದ್ದೇಶವಾದ ಸ್ವಾವಲಂಬಿಗಳಾಗಲು ಸಹಕರಿಸಿ ಪೂರಕ ಸ್ಥಾನ ಪಡೆದುಕೊಂಡಿವೆ. ಜೀವನದಲ್ಲಿ ಉಪಯುಕ್ತವಾಗುವ ತಿಳುವಳಿಕೆಯನ್ನು ನೀಡುವ ಆರೋಗ್ಯ, ಸ್ವಾಸ್ಥ್ಯ, ಪರಿಸರ ಸ್ವಚ್ಛತೆ, ವೈಯಕ್ತಿಕ ಅಪಥ್ಯ – ಕುರುಡು ವಿಚಾರಗಳನ್ನು ಹೋಗಲಾಡಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿ ಅಧಿಕೃತ ಮಾಹಿತಿಯೊಂದಿಗೆ ಸಮರ್ಪಕ ಅರಿವು ನೀಡುವ ಗುಣ ವಿಶೇಷತೆಯನ್ನು ತಮ್ಮದಾಗಿಸಿಕೊಂಡಿವೆ.

<u>ನಿಮಗೆ ಬರೆಯಲೇನಾದರೂ ರೂಢಿಯುಂಟೇ ?</u> —

ಅ) ಖಾಸಗಿ ಪತ್ರ ಬರೆಯುವುದು ಬ) ಅರ್ಜಿ ಬರೆಯುವುದು ಕ) ಕೇವಲ ಸಹಿ
ಡ) ರೂಢಿಯಿಲ್ಲ ಇ) ನೋಡಿ ಬರೆಯುವುದು.



<u>ದತ್ತಾಭಲೇಖ — 26</u>



ದತ್ತಾಧರೇಖೆ – 26 :

(ಸಾಮಾನ್ಯವಾಗಿ) ಎಲ್ಲ ನವ 'ಓದುಗರ ತಮ್ಮ ಹಸ್ತಾಕ್ಷರದಿಂದ ರುಜು ಮಾಡುವಲ್ಲಿ ಸಮರ್ಥರಾಗಿದ್ದುದನ್ನು ದತ್ತಾಧರೇಖೆ–26 ಹಾಗೂ ಪ್ರಶ್ನಾವಳಿ ನಮೂನೆಗಳಲ್ಲಿಯ ಅವರ ರುಜುಗಳು ಸ್ಪಷ್ಟಪಡಿಸುತ್ತವೆ. ನವ ಸಾಕ್ಷರರು ರುಜುವಿನೊಂದಿಗೆ ನೋಡಿ ಬರೆಯುವ, ಪತ್ರ ಬರೆಯುವ, ಅರ್ಜಿ ತುಂಬುವ, ರೂಢಿಗಳ ಮೂಲಕ ಬರವಣಿಗೆಯನ್ನು ರೂಢಿಸಿಕೊಳ್ಳುತ್ತಿರುವುದು ಕಂಡುಕೊಂಡ ಸಂಗತಿ.

4

ಸ ಮಾ ರೋ ಪ ಭಾ ಗ

4. <u>ಸಮಾರೋಪ</u> :

ಆಧುನಿಕ ಗತಿಶೀಲ ಸಮಾಜದ ಅವಿಭಾಜ್ಯ ಪ್ರಕ್ರಿಯೆ ಸಂವಹನ. ಇದು ಹಲವು ಮಾಧ್ಯಮಗಳ ಮುಖಾಂತರ ತನ್ನ ಕ್ರಿಯೆಯನ್ನು ಸೂಕ್ಷ್ಮ ಹಾಗೂ ವೇಗದಲ್ಲಿ ಪ್ರವಹಿಸುವಲ್ಲಿ ಸಾಧ್ಯವಾದಷ್ಟು ಪ್ರಯತ್ನಿಸುತ್ತಿದೆ. ಭಾಷೆಯನ್ನು ತನ್ನ ಅವಿಭಾಜ್ಯ ನಿರ್ಧಾರಕಾಂಶವನ್ನಾಗಿ ಮಾಡಿಕೊಂಡು ಪ್ರವಹಿಸುತ್ತಿದೆ. ಪಠ್ಯಪುಸ್ತಕಗಳು ಸಹ ಹೊಸ ಹೊಸ ಜ್ಞಾನವನ್ನು ಆವಿಷ್ಕಾರಗಳನ್ನು, ಕುರಿತು, ಓದುಗರಿಗೆ ತಲುಪಿಸುವಲ್ಲಿ ಕ್ರಿಯಾಶೀಲವಾಗಿರುವ ಸಂಗತಿ. ಆ ಜ್ಞಾನವನ್ನು ಓದುಗರು ತಮ್ಮದಾಗಿಸಿಕೊಳ್ಳಬೇಕಾದರೆ, ಅವರ 'ವಾಚನ ಗ್ರಹಿಕೆ' ಸಾಮರ್ಥ್ಯಗಳು ಚುರುಕಾಗಿರು(ಬೇಕಾಗಿರು)ವುದು ಅಗತ್ಯ. ಸಂವಹನ, ಪಠ್ಯ ಹಾಗೂ ಓದುಗರ ನಡುವೆ ವಾಚನ – ಗ್ರಹಣ ಸಾಮರ್ಥ್ಯಗಳ ಮುಖಾಂತರ ನಡೆಯುವ ಮನೋಜೈವಿಕ ಚಟುವಟಿಕೆ. ಇಲ್ಲಿ ಬರಹಗಾರ ಹಾಗೂ ಓದುಗರ ''ಪರಸ್ಪರ ಭಾಷಿಕ ಅರಿವಿನ ಸಾಮೀಪ್ಯತೆ'' ಅಧಿಕವಾಗಿದ್ದರೆ, ನಿರೂಪಣೆ ಸುಲಭವಾಗಿ ಓದಲು ಹಾಗೂ ಗ್ರಹಿಸಲು ಅನುಕೂಲಕರ. ಇಲ್ಲದಿರೆ, ತೊಡಕುಗಳು ಎದುರಾಗುವವು. ಆ ತೊಡಕುಗಳಿಗೆ ನಿರೂಪಕ ಹಾಗೂ ಓದುಗರು ಸಮಾನ ಜವಾಬ್ದಾರರು, ಆದಾಗ ಇಬ್ಬರ ನೆಲೆಯಿಂದಲೂ ಪಠ್ಯಗಳ ಸಂವಹನದ ತೊಡಕುಗಳನ್ನು ಗ್ರಹಿಸುವುದು ಸೂಕ್ತ. ಸುಧಾರಣಾ ಸಾಧ್ಯ ಸಲಹೆಗಳನ್ನು ಕಂಡುಕೊಳ್ಳುವುದು ಉಚಿತವೆಂದು ಕಾಣುತ್ತದೆ. ಈ ತೊಡಕುಗಳಿಗೆ ಕಾರಣ ಕೇವಲ ಪಠ್ಯಗಳಲ್ಲ. ಓದುಗರ 'ಮನಸ್ಸು', ಪೂರ್ವ ಸಿದ್ಧತಾಸ್ಥಿತಿ ಮುಖ್ಯವಾದುದೆಂದು ತೋರುತ್ತದೆ. ಒಂದು ವೇಳೆ ವಷ್ಟೇ ಸೂಕ್ತ ಪರಿಷ್ಕಾರದಿಂದ ಪಠ್ಯಗಳು ಪರಿಷ್ಕೃತಗೊಂಡು, ಓದುಗನ ವಾಚನ, 'ಕನಿಷ್ಠ ಕಲಿಕಾ ಸ್ಥಿತಿ' ಸರಿಯಾಗಿದ್ದರೆ ಅನುಕೂಲ. ಭಾಷಿಕ ನಿರೂಪಣೆ ದೃಷ್ಟಿಯಿಂದ, 'ಪರಸ್ಪರ ಸಾಮೀಪ್ಯತೆ' ಸಾಧಿಸಿದಾಗ ಸಂವಹನಫಲಪ್ರದವಾಗಲು ಸಾಧ್ಯ, ಇಲ್ಲಿ ಲೇಖಕ ಹಾಗೂ ಓದುಗರು ಸಾಮೂಹಿಕವಾಗಿ ಅಷ್ಟೇ ಜವಾಬ್ದಾರರು. ಕ್ಷೇತ್ರಾಧ್ಯಯನದ ದತ್ತ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ನಗರದ ಸ್ತ್ರೀ ಹಾಗೂ ಗ್ರಾಮೀಣ ಪುರುಷ ನವಸಾಕ್ಷರರಿಗೆ ಪಠ್ಯಗಳ ನಿರೂಪಿತ ಭಾಷೆ ಓದಲು, ತಿಳಿಯಲು ಸುಲಭವಾಗಿದ್ದು, ಕಂಡುಬಂದರೆ, ನಗರದ ಪುರುಷ ಹಾಗೂ ಗ್ರಾಮೀಣ ಸ್ತ್ರೀ ನವಸಾಕ್ಷರರು ವಾಚನದಲ್ಲಿ ತೊಡಕುಗಳನ್ನು ಎದುರಿಸುವುದು ಕಾಣುತ್ತಿದೆ. ಈ ಹಿನ್ನೆಲೆಗೆ, ಪ್ರಧಾನ ಕಾರಣ ಓದುಗರ 'ಪೂರ್ವ ಕಲಿಕಾ ಸ್ಥಿತಿ' ಪೂರಕ ಕಾರಣ ಪಠ್ಯಗಳ ಭಾಷೆ, ಏಕೆಂದರೆ ನಗರದ ಸ್ತ್ರೀ ಹಾಗೂ ಗ್ರಾಮೀಣ ಪುರುಷರಿಗೆ 'ಪೂರ್ವ ಕಲಿಕಾ ಸ್ಥಿತಿ ಸುಧಾರಿಸಿದೆ, ಹಾಗೂ ಓದು ಬರಹ ರೂಪಿಸಿಕೊಂಡಂದಿನಿಂದ ಓದುವ, ಓದಿದ್ದನ್ನು, ತಿಳಿದುಕೊಳ್ಳಬೇಕೆಂಬ ತಹತಹಿಕೆ <u>ಪ್ರವೃತ್ತಿ</u> ಅವರ ಜೀವನದ ಅವಿಭಾಜ್ಯ ವೃತ್ತಿ, ಯಾಗಿ ಬೆಳೆಯುತ್ತಿರುವುದು ಎದ್ದು ಕಾಣುತ್ತದೆ. (ಇದಕ್ಕೆ ಪೂರಕವಾಗಿ ದತ್ತಾಂಶಗಳು

ಕ್ಷೇತ್ರಕಾರ್ಯದಲ್ಲಿ ಓದಲು ಕೊಟ್ಟ ಪಠ್ಯಗಳ ವಿಷಯ ಗ್ರಹಿಕೆಗೆ ಸಂಬಂಧಿಸಿದ ಪ್ರಶ್ನೆಗಳಿಗೂ ಸೂಕ್ತ ಉತ್ತರಗಳನ್ನು ಕೊಟ್ಟದ್ದು.(ಧ್ವನಿಸುರುಳಿಯಲ್ಲಿ ಹಿಡಿದಿದೆ) ಅವಲೋಕಿಸಿದರೆ, ಹಾಗೂ ಕಥೆಗಳಲ್ಲಿಯ ಮುಖ್ಯ ಆಶಯ, ಗುರಿ, ಮುಖ್ಯಾಂಶಗಳನ್ನು, ಪಠ್ಯ ಮಾತುಗಳಲ್ಲಿ ವ್ಯಕ್ತಪಡಿಸಿದ್ದು ಅವರ ಗ್ರಹಿಕೆಯ ಸಾಮರ್ಥ್ಯವನ್ನು ಸೂಚಿಸುತ್ತದೆ. ಅವರಲ್ಲಿಯ ವಾಚನ ಕಳಕಳಿ, ಹವ್ಯಾಸ, ಆಸಕ್ತಿಗಳ ಹಿನ್ನೆಲೆ ಪಠ್ಯಗಳ ಉಪಯುಕ್ತತೆಯನ್ನು ಸೂಚಿಸುತ್ತವೆ (ದತ್ತ ಫಲಕ – 13 ಮತ್ತು 14).

ನಗರದ ಪುರುಷ ಹಾಗೂ ಗ್ರಾಮೀಣ ಸ್ತ್ರೀ ನವಸಾಕ್ಷರರು ನಿರೂಪಣೆಯಲ್ಲಿನ ತೊಡಕುಗಳನ್ನು ಎದುರಿಸುವದರ ಹಿನ್ನೆಲೆಗೆ ಪ್ರಧಾನವಾಗಿ ಅವರ ' ಪೂರ್ವ ಕಲಿಕಾ ಸ್ಥಿತಿ,' ಕಾರಣವಾದರೆ ಪೂರಕವಾಗಿ ಪಠ್ಯಗಳ ಬರವಣಿಗೆ ಎಂದು ಹೇಳಲು ಸಾಧ್ಯ. ಇಲ್ಲಿ ಮೊದಲು ಆಗಬೇಕಾದದ್ದು ಇವರ ' ಕಲಿಕಾ ಮಟ್ಟದ ಸ್ಥಿತಿ ' ಸುಧಾರಣೆಯಾಗುವದರೊಂದಿಗೆ, ಪಠ್ಯಗಳು ಇನ್ನೊಮ್ಮೆ ಇವರ ಹಿನ್ನೆಲೆಯಲ್ಲಿ, ಬರವಣಿಗೆಗೆ ಒಳಗಾಗಿ ಪರಿಷ್ಕೃತವಾಗುವದು ಹಿತವಾದುದು. ಓದುಗರ ವಾಚನ ಗ್ರಹಿಕೆಯ ಸ್ಥಿತಿಯ ಸ್ವರೂಪವು, ಅಷ್ಟೇ ಪ್ರಧಾನವಾದ ಪಾತ್ರ ವಹಿಸುತ್ತದೆ. ಕಲಿಕಾ ಸ್ಥಿತಿಯು ಪುನಶ್ಚೇತನಗೊಳ್ಳುವದು ಅಗತ್ಯ. ಸಂವಹನ ಪ್ರಕ್ರಿಯೆ ಸಮರ್ಪಕವಾಗಿ ಸಾಗಬೇಕಾದರೆ '' ನಿರೂಪಿತ ಭಾಷೆ ಹಾಗೂ ಓದುಗರ ಪರಸ್ಪರ ಅರಿವಿನ ಸಾಮೀಪ್ಯ '' ಸೂಕ್ತ ಪ್ರಮಾಣದಲ್ಲಿರುವದು, ಅವಶ್ಯ.

ಹೊಸದಾಗಿ ಓದುಬರಹ ಕಲಿತ ವಯಸ್ಕರಿಗೆ ರಚಿಸಿದ ಸಾಹಿತ್ಯ – ಅವರು ಓದುಬರಹ ಮರೆಯದಂತೆ ಮುಂದುವರಿಸುವುದಕ್ಕೆ ಪೂರಕವಾಗಿ ' ಆಸಕ್ತಿ ' ದಾಯಕ ಮಾಹಿತಿ ಆಧಾರಿತ ವಿಷಯ ವಸ್ತುವಿನಿಂದ ಕೂಡಿರುವುದು ಸೂಕ್ತ. ಈ ನವ ಓದುಗರು ಅನುಕ್ರಮವಾಗಿ ಧರ್ಮ – ಪುರಾಣ, ಜನಪದ ಸಾಹಿತ್ಯ, ಕಸಬು (ವೃತ್ತಿ), ತನ್ನ ಮತ್ತು ಸಂಸಾರದ ಆರೋಗ್ಯ, ಸರಕಾರದೊಡನೆ ಸಂಬಂಧ – ಈ ವಿಷಯಗಳನ್ನು ತಿಳಿಯಲು ಇಷ್ಟಪಡುವರು ಎಂಬುದು ಸಂಶೋಧನೆಯಿಂದ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು, ಸಾಹಿತ್ಯ ರಚನೆಯ ಸಂದರ್ಭದಲ್ಲಿ ಪೂರ್ವಭಾವಿಯಾಗಿ ವ್ಯವಸ್ಥಿತ ನಿಯೋಜಿತ ಕಾರ್ಯವೆಂದರೆ ಸಾಕ್ಷರತಾ ಆಂದೋಲನದಲ್ಲಿ ಕಲಿಯುತ್ತಿರುವ – ಹಾಗೂ ಕಲಿತ, ಓದುಗರ ಆಸಕ್ತಿ, ಅಷ್ಟೇ ಅಪೇಕ್ಷಿತ ವಿಷಯಗಳ ಕುರಿತು ಅನುಭವಿ ಕ್ಷೇತ್ರ ಸಹಾಯಕರಿಂದ, ಪ್ರಶ್ನಾವಳಿಗಳ ಮೂಲಕ ಕ್ಷೇತ್ರ ಕಾರ್ಯದಿಂದ ಅಭಿಪ್ರಾಯ ಸಲಹೆ – ಸೂಚನೆಗಳನ್ನು ಸಂಗ್ರಹಿಸಿ, ವಿಶೇಷ ವಿಷಯ ತಜ್ಞರ, ಶಿಕ್ಷಣವೇತ್ತರ, ಭಾಷಾ ಶಾಸ್ತ್ರಜ್ಞರ ಮಾರ್ಗದರ್ಶನದಲ್ಲಿ ಅಧಿಕೃತ ಆಕರಗಳಿಂದ, ಮಾಹಿತಿಯೊಂದಿಗೆ ಲೇಖಕರು ಕರಡು ಪ್ರತಿ ತಯಾರಿಸಿ ಪುನಃ ಭಾವಿ ಓದುಗರ ಹತ್ತಿರ ಹೋಗಿ ಪಠಿಸಿ ಸೂಕ್ತ ಮಾರ್ಪಾಡಿಗೆ ಅವಕಾಶ –

ನೀಡಿ, ವೈವಿಧ್ಯಪೂರ್ಣ ವಿಷಯ ಶೀರ್ಷಿಕೆಗಳು ಹಾಗೂ ಮನಾಕರ್ಷಣೆಯ ವಿವಿಧ ವರ್ಣಗಳಿಂದ(110) ಅಂತಿಮರೂಪ ಕೊಟ್ಟ, ವ್ಯವಸ್ಥಿತ ಸಾಮೂಹಿಕ ಗುರುತರವಾದ ಕಾರ್ಯ ಅನುಕರಣೀಯವಾದುದು ಎಂಬುದನ್ನು ನಂ:23 ಮತ್ತು 25 ದತ್ತಾಭಿಲೇಖಗಳು ಪೂರಕವಾಗಿ ಬೆಂಬಲಿಸುತ್ತವೆ.

ಪಾಶ್ಚಾತ್ಯ ಭಾಷೆಯಲ್ಲಿ ರಚನೆಯಾದ ಸಾಹಿತ್ಯದ ಮೌಲ್ಯಮಾಪಕಗಳನ್ನು ವಿಶೇಷವಾಗಿ ಕನ್ನಡ ಸಂದರ್ಭಕ್ಕೆ ಹೊಂದಿಸಿಕೊಳ್ಳಬೇಕಾಗಿದೆ. ಈ ದಿಶೆಯಲ್ಲಿ 'ಭಾಷಾ ಬೋಧನಾ ವಿಧಾನ'ದ ಹಿನ್ನೆಲೆಯಲ್ಲಿ ವಿಸ್ತೃತ, ಪ್ರಾಯೋಗಿಕ ಅಧ್ಯಯನಗಳು ನಡೆಯಬೇಕಾಗಿರುವುದು ಅಗತ್ಯ. ವಿಶೇಷವಾಗಿ, ಇಂಥ ಕ್ಷೇತ್ರ ಕಾರ್ಯಾಧಾರಿತ ಹಾಗೂ ಪ್ರಾಯೋಗಿಕ ನೆಲೆಯ ಅಧ್ಯಯನಕಾರರಿಗೆ ಮೂಲಭೂತವಾಗಿ ಆಸಕ್ತಿ, ತಾಳ್ಮೆ, ಸೂಕ್ಷ್ಮ ನಿರೀಕ್ಷಣಾ ಸಾಮರ್ಥ್ಯ, ಸತತ ಶ್ರಮ ಸ್ಥಿತಿ, ಪ್ರಾಮಾಣಿಕತೆ ಅಗತ್ಯ. ಪ್ರತಿವ್ಯಕ್ತರೊಡನೆ ವ್ಯವಹರಿಸುವಾಗ, ಗೌರವ, ಸಹಜವಾದ ವಿನಯ, ಸೌಜನ್ಯತೆಗಳಿಂದ ದೊರೆಯುವ ತೃಪ್ತಿ, ಆನಂದ, ಫಲಿತಾಂಶಗಳು ಅಗಾಧವಾದವು ಎಂಬುದು ಕ್ಷೇತ್ರಾನುಭವ ಸ್ಪಷ್ಟವಾದುದು.

:: ಟಿಪ್ಪಣಿ ::

ಈ ಕ್ಷೇತ್ರದಲ್ಲಿ ಮಾಡಬೇಕಾದ ಕೆಲಸ ಬಹಳ, ವಾಚನ ಶಕ್ತಿಯನ್ನು ಕುದುರಿಸಲು, ವಸ್ತುವಿನ ಆಯ್ಕೆ, ನಿರೂಪಣೆ, ಭಾಷಾ ಸಂಪತ್ತು, ವಾಕ್ಯ ರಚನೆ, ಪದಗಳ ಬಳಕೆ, ಆಕಾರ, ಮುದ್ರಣ ಮತ್ತು ಚಿತ್ರಗಳು ಮುಂತಾದ ಅಂಶಗಳ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ. ಭಾರತದಲ್ಲಿ ಇದುವರೆಗೂ ವಿವಿಧ ಭಾಷೆಗಳಲ್ಲಿ ಸುಮಾರು 10,000 ಪುಸ್ತಕಗಳು ಪ್ರಕಟವಾಗಿವೆ. ಆದರೆ ಅವುಗಳನ್ನು ಪ್ರಾಯೋಗಿಕವಾಗಿ ಅಧ್ಯಯನ ಮಾಡಬೇಕಾದುದು ಅಗತ್ಯವಿದೆ. ಪಠ್ಯಪುಸ್ತಕ ಮೌಲ್ಯಮಾಪನದ ಹಿನ್ನೆಲೆಯಲ್ಲಿ ವಾಚ್ಯ ಶಕ್ತಿಯನ್ನು ಅಳೆಯುವ ಕಾರ್ಯ ಪಾಶ್ಚಾತ್ಯ ದೇಶಗಳಲ್ಲಿ ನಡೆದಿವೆ. ಮೊದಲು ಅಮೇರಿಕೆಯಲ್ಲಿ 1920 ರಲ್ಲಿ ಪ್ರಾರಂಭವಾಯಿತು.

1930 ರಲ್ಲಿ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ರಚಿಸಿದ ಸಾಹಿತ್ಯದ ವಾಚನ ಶಕ್ತಿಯನ್ನು ಅಳತೆ ಮಾಡುವ ಪ್ರಯತ್ನ ನಡೆಯಿತು. ಗ್ರೆ ಮತ್ತು ಲೇರಿ ಎಂಬುವರು ವಯಸ್ಕರಿಗಾಗಿ ಬರೆದ 350 ಪುಸ್ತಕಗಳ ವಾಚ್ಯ ಶಕ್ತಿಯನ್ನು ಅಳತೆ ಮಾಡಿ ಸಂಶೋಧನೆಯಿಂದ ಕಂಡುಬಂದ ಅಂಶಗಳನ್ನು ಕ್ರೋಢೀಕರಿಸಿ ಉಪಾಧ್ಯಾಯರಿಗೂ ಮತ್ತು ಪುಸ್ತಕ ಭಂಡಾರದ ಅಧಿಕಾರಿಗಳಿಗೂ ಹಂಚಿದರು. ಫ್ಲೆಷ್, ಗ್ರೆ ಹಾಗೂ ಲೇರಿ ಅವರ ಮೌಲ್ಯಮಾಪಕಗಳನ್ನು ನೂತನ ವಯಸ್ಕ ಸಾಕ್ಷರಸ್ಥರಿಗೆ ಬರೆದ ಪುಸ್ತಕಗಳ ಮಟ್ಟವನ್ನು ಗುರುತು ಮಾಡಿ ಒಂದು ಪಟ್ಟಿಯನ್ನು ರಚಿಸಿದರು.

1968 ರ ನವೆಂಬರ ತಿಂಗಳಲ್ಲಿ ಬ್ಯಾಂಕಾಕಿನಲ್ಲಿ ಒಂದು ‘ ಸಾಹಿತ್ಯ ರಚನಾಲಯ ’ ನಡೆಯಿತು. ರೈತರ ಮತ್ತು ಕಾರ್ಮಿಕರ ಕ್ರಿಯಾತ್ಮಕ ಸಾಕ್ಷರತೆಗೆ ಪೋಷಕವಾಗುವಂಥ ಸಾಹಿತ್ಯ ರಚನೆ ರಚನಾಲಯದ ಉದ್ದೇಶವಾಗಿತ್ತು. ಶಾಸ್ತ್ರೀಯವಾಗಿ ರಚಿತವಾದ ವಯಸ್ಕರ ಪುಸ್ತಕಗಳಿಗೂ, ಮತ್ತು ವಯಸ್ಕರ ಶಿಕ್ಷಣ ಸಾಹಿತ್ಯ ಕ್ಷೇತ್ರದಲ್ಲಿ ಸಾಮಾನ್ಯ ಬರಹಗಾರರಿಂದ, ರಚಿತವಾದ ಸಾಹಿತ್ಯಕ್ಕೂ ಬಹಳ ಅಂತರವಿದೆ. ಆದ್ದರಿಂದ ಆಯ್ತ – ನುರಿತ ಬರಹಗಾರರಿಂದ ಹೊಸದಾಗಿ ಅಕ್ಷರಸ್ಥರಾದ ವಯಸ್ಕರಿಗೆ ಸಹಾಯಕವಾಗುವ ಸಾಹಿತ್ಯವನ್ನು ಶಾಸ್ತ್ರೀಯವಾಗಿ ರಚಿಸಬೇಕು ಎಂದು ಅಭಿಪ್ರಾಯ ಪಡಲಾಗಿದೆ.

೦೦ “ನೂತನ ಸಾಕ್ಷರರ ಸಹಾಯಕ ಸಾಹಿತ್ಯ ರಚನಾ ಸೂತ್ರಗಳು” ಕರ್ನಾಟಕ ಭಾರತಿ – ಪುಟ 107 – ಟಿ.ಆರ್. ನಾಗಪ್ಪ, ಕ.ವಿ.ವಿ. ಧಾರವಾಡ (1972) ಸಂ: 5, ಸಂಚಿಕೆ – 1.

5

:: ಅ ನು ಬಂ ಧ ::

1. ಗ್ರಂಥ ಸೂಚಿ
2. ಕ್ಷೇತ್ರಕಾರ್ಯ ಭೂಪಟ
3. ಪ್ರಶ್ನಾವಳಿ ನಮೂನೆ
4. ಪಠ್ಯಗಳ ಪಟ್ಟಿ
   (ಪ್ರತಿದರ್ಶಕಗಳು)

ಗ್ರಂಥ ಸೂಚಿ
BIBLIOGRAPHY

Asher.R.E.:(Ed) : ' The Encyclopedia of Language and Linguistics (Vol :2). Pergmon press Oxford - 1994.

Asher.R.E.:(Ed) : ' The Encyclopedia of Language and Linguistics' (Vol:4). Pergmon Press Oxford - 1994.

Candlin.C.N.(G.Ed) : ' Vocabulary and Language Teaching' (Applied Linguistics and Language Study) Longman Group UK Limited London and New-York - 1988.

David-Crystal:(A) : ' The Cambridge Encyclopedia of Language. University of Cambridge Cambridge - 1987.

Edward. Fry:(A) : ' Teaching Faster Reading' The Syndics of the Cambridge University Press Cambridge - 1963.


Widdowson.H.G: (A) : ' Teaching Language as Communication' Oxford University Press Walton Street Oxford - 1978.

Dictionary : English. Kannada Dictionary ' Prasaranga' Mysore University Mysore - 1946.

ನಾಗಪ್ಪ. ಟಿ.ಆರ್.:(ಲೇ) 'ನೂತನ ಸಾಕ್ಷರರ ಸಹಾಯಕಸಾಹಿತ್ಯ ರಚನಾ ಸೂತ್ರಗಳು'
'ಕರ್ನಾಟಕ ಭಾರತಿ' ಕ.ವಿ. ಧಾರವಾಡ 1972
ಸಂ: 5, ಸಂಚಿಕೆ : 1

ಬುರ್ಕ್ ,ಎಸ್.ಎ:(ಅನು)' ಭಾರತದಲ್ಲಿ ಮಾತೃ ಭಾಷೆಯ ಬೋಧನೆಯಬಗ್ಗೆ ಸಲಹೆಗಳು'
'ಪ್ರಸಾರಾಂಗ,' ಕ.ವಿ.ವಿ. ಧಾರವಾಡ 1991.

ವಿವಿಧ ಲೇಖಕರು: 'ನವಸಾಕ್ಷರ ಮಾಲೆಯ ಪಠ್ಯಗಳು'
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ – 1994.



: ಕ್ಷೇತ್ರ ಕಾರ್ಯಕ್ಕೆ ಒಳಪಟ್ಟ ಸ್ಥಳಗಳು :

⊙ – ನಗರ (ತಾಲೂಕು)

° – ಗ್ರಾಮ (ಹಳ್ಳಿ)

---

1) ಲೋಕೂರು °
2) ಧಾರವಾಡ ⊙
3) ಹುಬ್ಬಳ್ಳಿ ⊙
4) ರಾಮನಾಳ °
5) ಕಲಘಟಗಿ ⊙
6) ಮಾಚಾಪುರ °
7) ಮದಿಕಿ ಹೊನ್ನಿಹಳ್ಳಿ °
8) ಶಿಗ್ಗಾಂವ ⊙
9) ಹೊಸೂರು °
10) ಮತ್ತಿನ ಹಳ್ಳಿ °
11) ಹಾನಗಲ ⊙
12) ಮಲ್ಲಿಗಾರ °
13) ಅಕ್ಕಿ ಆಲೂರು °
14) ಇನಾಂ ದತುಲ್ಲಾಪುರ °
15) ಹೊಸಳ್ಳಿ °
16) ಹಾವೇರಿ ⊙
17) ಛನವಳ್ಳಿ °
18) ಮೋಟೆ ಬೆನ್ನೂರು °
19) ಬ್ಯಾಡಗಿ ⊙
20) ಶಿರಗಂಬಿ °
21) ಅಬ್ಬಲೂರು °
22) ಹಿರೇ ಕೆರೂರು ⊙
23) ಎಡಗೋಡ °
24) ರಟ್ಟಿಹಳ್ಳಿ °
25) ರಾಣೇಬೆನ್ನೂರು ⊙
26) ತಿಮ್ಮನಹಳ್ಳಿ °
27) ತುಮ್ಮಿನಕಟ್ಟಿ °

ನಗರಗಳ ಸಂಖ್ಯೆ – 9
ಗ್ರಾಮಗಳ ಸಂಖ್ಯೆ – 18

° ° °
° °
°

ಅನುಬಂಧ : ೩ , 'ಪ್ರಶ್ನಾವಳಿ'

'' ನವಸಾಕ್ಷರ ಮಾಲೆಯ ಪಠ್ಯಗಳ ಸಂವಹನ : ತೊಡಕುಗಳು ''

(ಕ್ಷೇತ್ರಾಧ್ಯಯನ)

ನವಸಾಕ್ಷರರು:

ಹೆಸರು : ಗಂಡಸು:ಹೆಂಗಸು: :

ವೃತ್ತಿ : ವಯಸ್ಸು:

ವಿಳಾಸ :

ಗ್ರಾಮ:ನಗರ: ತಾಲೂಕು:

ದಿನಾಂಕ : ಜಿಲ್ಲೆ :

ನವಸಾಕ್ಷರನ ಸಹಿ.

೦೦೦

1) ನೀವು ಓದು-ಬರಹ ಕಲಿತಿರುವುದು —
ಅ)ಕಲಿಕಾ ಕೇಂದ್ರದಲ್ಲಿ ಬ)ಸ್ವಯಂಸೇವಾ ಸಂಸ್ಥೆಯಲ್ಲಿ ಕ)ಮನೆಯಲ್ಲಿ ಡ)ಶಾಲೆಯಲ್ಲಿ

2) ಶಾಲಾ ಶಿಕ್ಷಣ ಪಡೆದಿದ್ದರೆ, ನಿಲ್ಲಿಸಿದ್ದು —
ಅ)2ನೇ ವರ್ಗಕ್ಕೆ ಬ)4ನೇ ವರ್ಗಕ್ಕೆ ಕ)7ನೇ ವರ್ಗಕ್ಕೆ ಡ)10ನೇ ವರ್ಗಕ್ಕೆ ಇ)ಇಲ್ಲ

3) ನೀವು ಸಾಮಾನ್ಯವಾಗಿ ಓದುವುದು (ಹವ್ಯಾಸ)
ಅ)ದಿನಪತ್ರಿಕೆಗಳು ಬ)ಕಥೆ ಪುಸ್ತಕಗಳು ಕ)ವಾರಪತ್ರಿಕೆಗಳು ಡ)ಖಾಸಗಿ ಪತ್ರಗಳು ಇ)ತುಂಡುಕಾಗದ.

4) ದಿನಪತ್ರಿಕೆಯಲ್ಲಿ ಸಾಮಾನ್ಯವಾಗಿ ಓದುವ ಪುಟ —
ಅ)ದಪ್ಪಕ್ಷರಗಳನ್ನು ಮಾತ್ರ ಬ)ಕೃಷಿರಂಗ:ಸಿನಿಮಾರಂಗ ಕ)ಕ್ರೀಡೆ:ಮನೋರಂಜನೆ
ಡ)ಕಥೆ ಕವನಗಳನ್ನು ಇ)ದೂರು ದುಮ್ಮಾನ:ವಾಚಕರ ವಾಣಿ:ಸಂಪಾದಕೀಯ

5) ಪತ್ರಿಕೆಗಳು ನಿಮಗೆ ದೊರೆಯುವುದು —
ಅ)ಹೋಟೆಲ ಅಂಗಡಿಗಳಲ್ಲಿ ಬ)ಪಕ್ಕದ ಮನೆಯಲ್ಲಿ ಕ)ಗ್ರಾಮಪಂಚಾಯತಿ ಡ)ಪಬ್ಲಿಕ ಲೈಬ್ರರಿ

6) ಚಿಕ್ಕ ಗಾತ್ರದ ಅಕ್ಷರದ ಪ್ಯಾರಾಗಳನ್ನು ಓದುವುದಿಲ್ಲ ಏಕೆಂದರೆ —
ಅ)ಸರಿಯಾಗಿ ಓದಲುಬಾರದು ಬ)ಕಣ್ಣಿನ ದೋಷದಿಂದ ಕ)ವೇಳೆ ಅಭಾವ ಡ)ಇಷ್ಟವಿಲ್ಲ

7) ಸಾಮಾನ್ಯವಾಗಿ ಓದುವುದು ಯಾವಾಗ —
ಅ)ದಿನಾಲು ಬ)ವಾರಕ್ಕೆರಡು ಸಲ ಕ)ಮನಸ್ಸು ಬಂದಾಗ ಡ)ವೇಳೆ ಸಿಗುವುದಿಲ್ಲ

8) ಎಷ್ಟು ಹೊತ್ತು ಓದಿದ್ದೀರಿ (ಕೊಟ್ಟ ಪುಸ್ತಕ ಕುರಿತು) —
ಅ)ಬಿಟ್ಟು ಬಿಟ್ಟು ಓದಿದ್ದೇವೆ ಬ)ಬಿಡುವಿಲ್ಲದೇ ಓದಿದ್ದೇವೆ ಕ)ವೇಳೆ ನೋಡಲಿಲ್ಲ
ಡ)ಒಂದೂವರೆ ತಾಸು ಇ)2 ತಾಸಿನ ಮೇಲೆ

9) ಹೇಗೆ ಓದಿದ್ದು —
ಅ)ಮನಸ್ಸಿನಲ್ಲಿ ಬ)ಗಟ್ಟಿಯಾಗಿ ಕ)ಎರಡೂ ರೀತಿಯಿಂದಲೂ

10) ಹೇಗೆ ಓದಿದಾಗ ನಿಮಗೆ ಸುಲಭವಾಗಿ ಅರ್ಥವಾಗುವುದು —
ಅ)ಗಟ್ಟಿಯಾಗಿ ಬ)ಮನಸ್ಸಿನಲ್ಲಿ ಕ)ಓದಿಸಿ ಕೇಳುವುದರಿಂದ ಡ)ಎರಡೂ ರೀತಿಯಿಂದಲೂ
(ಅ+ಕ) ಇ) ಅ+ಕ.

11) ಪುಸ್ತಕದಲ್ಲಿ ಬಳಸಿದ ಪದಗಳು (ಶಬ್ದಗಳು) —
ಅ)ಚಿಕ್ಕಪದಗಳು ಬ)ಉದ್ದನೆಯ ಪದಗಳು ಕ)ಉಚ್ಚರಿಸಲು ಕಷ್ಟ ಡ)ಒತ್ತಕ್ಷರ ಪದಗಳು
ಇ)ಕಷ್ಟವಿಲ್ಲ (ಓದಲು)

12) ನಿಮಗೆ ಅಪರಿಚಿತ ಪದಗಳು — (ರಚನೆ ಹಾಗೂ ಅರ್ಥದ ದೃಷ್ಟಿಯಿಂದ)
ಅ)ಕಡಿಮೆ ಇವೆ (ಸುಮಾರಾಗಿವೆ) ಬ)ತುಂಬಾ ಹೆಚ್ಚಿವೆ ಕ)ಸಾಧಾರಣವಾಗಿವೆ ಡ)ಇಲ್ಲ ಇ)ಉದ್ದವಾಗಿವೆ.

13) ಇಲ್ಲಿನ ವಾಕ್ಯಗಳು —
ಅ)ಚಿಕ್ಕ ಚಿಕ್ಕವು ಬ)ಉದ್ದನೆಯವು ಕ)ಸಂಕೀರ್ಣವಾದವು ಡ)ಓದಲು ಕಷ್ಟದವು ಇ)ಬ+ಡ

14) ಇಲ್ಲಿನ ಬರವಣಿಗೆ —
ಅ)ಅತ್ಯಂತ ಸರಳ ಬ)ಸರಳ ಕ)ಸಾಧಾರಣ ಡ)ಸ್ವಲ್ಪ ಕಷ್ಟ ಇ)ಅತ್ಯಂತ ಕಷ್ಟ

15) ನಿಮಗಿಷ್ಟವಾದ ಬರವಣಿಗೆ — (ಅರ್ಥವಾಗುವ) —
ಅ)ಮಾತಾಡುವ ರೀತಿ ಬ)ಪ್ರಶ್ನೋತ್ತರ ರೀತಿ ಕ)ವಿವರಣೆಯ ರೀತಿ ಡ)ಯಾವುದಿದ್ದರೂ ಸರಿ

16) ದೃಷ್ಟಾಂತಗಳ ಬಳಕೆ (ನಾಣ್ಣುಡಿ:ಉದಾಹರಣೆ:ಒಡಪು-ಒಗಟು:ಚಿತ್ರಗಳು)—
ಅ)ಬಳಕೆಯಾಗಿವೆ ಬ)ಬಳಕೆಯಾಗಿಲ್ಲ ಕ)ಇನ್ನಷ್ಟು ಬೇಕಿತ್ತು ಡ)ಅಗತ್ಯವಿಲ್ಲ

17) ಅಕ್ಷರಗಳ ಗಾತ್ರ (ಮಾದರಿ ತೋರಿಸುತ್ತಾ)—
ಅ)ಈಗಿದ್ದುದು ಸಾಕು ಬ)14 ಪಾಯಿಂಟ್ ಕ)18 ಪಾಯಿಂಟ್ ಡ)20 ಪಾಯಿಂಟ

18) ಸಾಲುಗಳ ನಡುವಿನ ಅಂತರ — (ಮಾದರಿ ತೋರಿಸುತ್ತಾ)—
ಅ)ಈಗಿದ್ದುದು ಅನುಕೂಲ ಬ)ಕಡಿಮೆ ಇರಬೇಕು ಕ)ಹೆಚ್ಚಿರಬೇಕು ಡ)ವಿರಳ ವಿರಳವಾಗಿರಬೇಕು

19) ರೇಖಾ ಚಿತ್ರಗಳು — ಹೇಗಿವೆ ಮತ್ತು ಹೇಗಿರಬೇಕು.—
ಅ)ನಿಚ್ಚಳವಿಲ್ಲ ಬ)ಸಾಧಾರಣವಾಗಿವೆ ಕ)ಬಣ್ಣಬಣ್ಣದ್ದಾಗಿರಬೇಕು ಡ)ವಿಷಯಕ್ಕೆ ಪೂರಕ
ಇ)ಈಗಿದ್ದುದು ಸಾಕು

20) ಪಾಠದ ಶೀರ್ಷಿಕೆ : ಉಪ ಶೀರ್ಷಿಕೆ (ಹೆಡ್ಡಿಂಗ್) —
ಅ)ದಪ್ಪಕ್ಷರದಿಂದಾಗಿವೆ ಬ)ಉಚಿತವಾಗಿವೆ ಕ)ಕೆಳ ಅಕ್ಷರಗಿಂತ ಭಿನ್ನವಿಲ್ಲ ಡ)ಅನುಕೂಲವಿಲ್ಲ

21) ಪುಸ್ತಕದ ಹೆಸರು ಮತ್ತು ಒಳಮಾಹಿತಿಯ ಸಂಬಂಧ —
ಅ)ಸಾಮಾನ್ಯ ಸಂಬಂಧ ಬ)ಸಂಬಂಧವಿಲ್ಲ ಕ)ಪರಸ್ಪರ ಪೂರಕ ಡ)ನೇರ ಸಂಬಂಧ

22) ಪುಸ್ತಕದ ರಕ್ಷಾಕವಚಗಳು (ಗುಣಮಟ್ಟದ ದೃಷ್ಟಿಯಿಂದ) —
ಅ)ಉತ್ತಮ ಮಟ್ಟದವು ಬ)ಕಳಪೆಮಟ್ಟದವು ಕ)ಸಾಮಾನ್ಯ ಡ)ತಾಳಿಕೆ ಬಾಳಿಕೆಯುಳ್ಳವು

23) ಪುಸ್ತಕದ ಮುಖಪುಟ (ವರ್ಣಚಿತ್ರ) —
ಅ)ಆಕರ್ಷಣೀಯ ಬ)ಸಾಮಾನ್ಯ ಕ)ಓದಿಗೆ ಉತ್ತೇಜನ ಡ)ಪೂರಕವಿಲ್ಲ

24) ಪುಸ್ತಕದಿಂದಾದ ಲಾಭಾಂಶಗಳು —
ಅ)ಹೊಸ ಮಾಹಿತಿ ಸಿಕ್ಕಿತು ಬ)ಖುಷಿ ಕೊಟ್ಟಿತು ಕ)ಲಾಭವಿಲ್ಲ ಡ)ಹೆಚ್ಚಿನ ಓದಿಗೆ ಪ್ರೇರಣೆ
ಇ)ವಿರಾಮಕಾಲದ ಸದುಪಯೋಗ

25) ನಿಮಗೆ ಬರೆಯಲೇನಾದರೂ ರೂಢಿಯಿದೆಯೇ ? —
ಅ)ಖಾಸಗಿ ಪತ್ರಬರೆಯುವುದು ಬ)ಅರ್ಜಿ ಬರೆಯುವುದು ಕ)ಕೇವಲ ಸಹಿ ಡ)ರೂಢಿಯಿಲ್ಲ
ಇ)ನೋಡಿ ಬರೆಯುವುದು

26) ನಿಮಗೆ ಸುಲಭವಾಗಿ ಅರ್ಥವಾಗುವುದು.—
ಅ)ಒಂದೇ ಸಾರಿ ಓದುವುದರಿಂದ ಬ)2ಸಲ ಕ)3ಸಾರಿ ಡ)4 ಸಾರಿ ಇ)ಇನ್ನೊಬ್ಬರು
ತಿಳಿಸುವುದರಿಂದ.

ಅನುಬಂಧ – 4

—: ಪಠ್ಯಗಳ ಪಟ್ಟಿ :—

	ಪಠ್ಯಗಳು	ಲೇಖಕರು
1)	ಬ್ಯಾಂಕುಗಳು	ಎಚ್. ಮಹಾಬಲೇಶ್ವರ.
2)	ಕಂಪ್ಯೂಟರ್	ಸುಧಾ. ಮೂರ್ತಿ.
3)	ಉತ್ಸವಗಳು	ಅಚ್ಯುತ ಸೋಮೇಶ್ವರ
4)	ಬೆಂಗಳೂರು	ಕೆ. ಪುಟ್ಟಸ್ವಾಮಿ.
5)	ಕಿರುಗತೆಗಳು	ಡಾ: ಕರಿಗೌಡ ಬೀಚನಹಳ್ಳಿ.
6)	ಗಾದೆಗಳು	ವಿಶ್ವನಾಥ.ಬದಿಕಾನ.
7)	ಜೇನು ಸಾಕಣೆ	ಕಿಶೋರಕುಮಾರ ಶೇಣಿ.
8)	ಚುನಾವಣೆಗಳು	ಬಿ.ಆರ್. ನಾಗಪ್ಪ.
9)	ಗೊಬ್ಬರಗಳು	ಎಚ್. ಶ್ರೀನಿವಾಸ.
10)	ಮದರ ಥೆರೆಸಾ	ಡಾ.ಎಸ್. ವಿದ್ಯಾ ಶಂಕರ್.
11)	ರಂಗೋಲಿ	ಶಾಂತಿ ನಾಯಕ.
12)	ಗ್ರಾಮ ನೈರ್ಮಲ್ಯ	ಸ.ರಾ. ಸುಳಕೊಡ.
13)	ನೀರಾವರಿ	ಅಶೋಕ ಕುಮಾರ ರಂಜೇರ್
14)	ಬಾಹುಬಲಿ	ಚಂದ್ರು, ಎನ್.ಸ್ವಾಮಿ.
15)	ಕರ್ನಾಟಕದ ಜಿಲ್ಲೆಗಳು	ಎಲ್. ಲಕ್ಷ್ಮೀದೇವಿ.